ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಫೆಬ್ರವರಿ 25, 2009 ರೂ. 12/-

…ಡ್ಡಿ ಮಗ-ನಟಿ ಹರಿಪ್ರಿಯ

ಲವ್ ಸ್ಟೋರಿ!



ನಟಿ ಜೇಡ್ ಗೂಡಿ



ಸಾವಿನ ಎದುರೂ ಸಂಭ್ರಮ



…ಾಂಗ್ರೆಸ್‌ಗೆ ಕುನ್ನೂರ ಆಕ್ಸಿಜನ್

…ಪ್ರಜಾವಾಣಿ …ಕ ಹೋಯ್ತು …ಾಂತಿ ಬಂತು

ಚಿಟಿಕೆ ಚಪ್ಪರದಲ್ಲಿ ಯಡ್ಡಿ ಬಜೆಟ್

ಪಾಂಡವಪುರ ಕೊಠಾರಿ ದರೋಡೆ

ಬಡ ಲಿಂಗಾಯತರಿಗೆ ಯಡ್ಡಿ ಬತ್ತಿ

ಯಡ್ಡಿ ಬಜೆಟ್-2009-10
ಚಟಿಕೆ ಚಪ್ಪರದಲ್ಲಿ ಚೆಡ್ಡಿ ಬಜೆಟ್!

ಬಿಂಡಮಾಳವಿಲ್ಲದೆ ಬಡಾಯಿ ಬಡು ವವರ ಬಗ್ಗೆ ಹಳ್ಳಿಗಾಡಿನ ಜನ 'ಚಟಕೆ ಚಪ್ಪರ ಹಾಕಿಸಿ ಮದುವೆ ಮಾಡಿಸುವವರು' ಅಂತ ಲೇವಡಿ ಮಾಡುತ್ತಾರೆ. ಯಾಕೆಂದರೆ ಅಂತಹವರು ಕೈಯಲ್ಲಿ ಚಟಕೆ ಹೊಡೆಯುತ್ತಾ ಆಗೋ ಅಲ್ಲಿ ಚಪ್ಪರ, ಇಲ್ಲಿ ವಾಲಗ, ಅಲ್ಲಿ ಮದುವೆ ಎಂದು ಭ್ರಮೆ ಮೂಡಿಸುತ್ತಾ ಬೇಳೆ ಬೇಯಿಸಿಕೊಳ್ಳುವ ಕುತಂತ್ರಿಗಳು. ಆದರೆ ಯಡಿಯೂರಪ್ಪನವರ ಎರಡನೇ 'ಸ್ವತಂತ್ರ' ಬಜೆಟ್ ನೋಡಿದರೆ ಚಟಕೆ ಚಪ್ಪರದಷ್ಟೇ ವಾಸಿ ಅನ್ನಿಸುತ್ತದೆ!

ಕಳೆದ ಮೂರು-ನಾಲ್ಕು ವರ್ಷಗಳಿಂದ ಈ ಅಂಕಣ ದಲ್ಲಿ ಬಜೆಟ್ ವಿಶ್ಲೇಷಣೆ ಓದುತ್ತಾ ಬಂದಿರುವವರಿಗೆ ಬಜೆಟ್ ತನ್ನಂತೆ ತಾನೇ ಒಂದು ವಿಶೇಷ ವಿದ್ಯಮಾನ ಅಲ್ಲ ಎಂದು ವಿವರಿಸುವ ಅಗತ್ಯವಿಲ್ಲ. ಬಜೆಟ್ ಎಂಬುದು ಈ ಮೊದಲೇ ನಿರ್ಧಾರಗೊಂಡಿರುವ ಆರ್ಥಿಕ ನೀತಿ ಮತ್ತು ಕಾರ್ಯಕ್ರಮಗಳಿಗೆ ತಕ್ಕಂತೆ ರೂಪುಗೊಳ್ಳುವ ವಾರ್ಷಿಕ ಯೋಜನೆಯೇ. ಜನಸಾಮಾನ್ಯರ ಬದುಕು ಮತ್ತು ಭವಿಷ್ಯವನ್ನು ತೀರ್ಮಾನಿಸುವ ಆ ಆರ್ಥಿಕ ನೀತಿಗಳನ್ನು ನಮ್ಮನ್ನು ಆಳುವ ಧಣಿಗಳು ಅವರ ಧಣಿ ಗಳಾದ ವಿಶ್ವಬ್ಯಾಂಕ್ ಮತ್ತು ವಾಷಿಂಗ್ಟನ್‌ನ ಆಣತಿ ಯಂತೆ ರೂಪಿಸುತ್ತಾರೆ ಎಂಬುದು ಸಹ ಗುಟ್ಟಿನ ಸಂಗತಿ ಯೇನಲ್ಲ.

ಆದರಲ್ಲೂ ಈ ವರ್ಷದ ಬಜೆಟ್ಟಿಗೆ ಎರಡು ವಿಶೇಷ ಸಂದರ್ಭಗಳಿವೆ.

ಮೊದಲನೆಯದಾಗಿ ಮುಂದಿನ ಎರಡು ತಿಂಗಳಲ್ಲಿ ಸಂಸತ್ ಚುನಾವಣೆ ನಡೆಯಲಿದೆ. ಎನ್‌ಡಿಎಯನ್ನು ಅಧಿಕಾರಕ್ಕೆ ತಂದು ಅದ್ವಾನಿಯನ್ನು ಪ್ರಧಾನ ಮಂತ್ರಿ ಸೀಟಿನಲ್ಲಿ ಕೂಡಿಸಲು ಸಾಧ್ಯವಾಗುವಂತೆ ಕರ್ನಾಟಕದಿಂದ ಕನಿಷ್ಠ ಹತ್ತಿಪ್ಪತ್ತು ಎಂಪಿಗಳನ್ನು ಗೆಲ್ಲಿಸಿಕೊಡುವುದಾಗಿ ಇತ್ತೀಚೆಗೆ ನಡೆದ ಬಜೆಪಿ ಕಾರ್ಯಕಾರಣಿಯಲ್ಲಿ ಯಡಿ ಯೂರಪ್ಪ ಚಟಕೆ ಚಪ್ಪರ ಹಾಕಿ ಬಂದಿದ್ದಾರೆ!

ಎರಡನೆಯದಾಗಿ ಇಡೀ ಜಗತ್ತನ್ನೇ ಆವರಿಸಿರುವ ಆರ್ಥಿಕ ಹಿನ್ನೆಡೆಯಿಂದಾಗಿ ಒಟ್ಟಾರೆ ಆರ್ಥಿಕ ಚಟುವಟಿಕೆ ಗಳು ಕುಂಠಿತವಾಗಿ ಜನರು ಅತಿ ಹೆಚ್ಚು ಸಂಕಷ್ಟದಲ್ಲಿ ಸಿಲುಕಿ ಸರ್ಕಾರದೆಡೆ ಸಹಾಯಕ್ಕಾಗಿ ನೋಡುತ್ತಿದ್ದಾರೆ. ಆದರೆ ಇವೆಲ್ಲಾ ಆಗಬೇಕೆಂದರೆ ವಿಶ್ವಬ್ಯಾಂಕ್ ಆದೇಶವನ್ನು ಮೀರಿ ಈ ದೇಶದ ಶ್ರೀಮಂತರ ಮತ್ತು ವಿದೇಶಿ ಬಂಡವಾಳಿಗರ ಹಿತಾಸಕ್ತಿಗೆ ವಿರುದ್ಧವಾದ ನೀತಿಗಳನ್ನು ಮಾಡಬೇಕು. ಅದು ಬಜೆಪಿಯಿರಲಿ, ಈ ದೇಶದ ಯಾವ ಚುನಾಯಿತ ಪಕ್ಷಗಳು ಮಾಡುವಂತಿಲ್ಲ. ಏಕೆಂದರೆ ಒಟ್ಟಾರೆಯಾಗಿ ಆರ್ಥಿಕತೆಯಲ್ಲಿ - ಅಂದರೆ ತೆರಿಗೆ ಸಂಗ್ರಹಣೆ ಮತ್ತು ವೆಚ್ಚದ ಬಗೆಯಲ್ಲಿ - ಬರಬೇಕಿರುವ ಬದಲಾವಣೆಗಳ ಬಗ್ಗೆ ನಾಲ್ಕು ವರ್ಷಗಳ ಮಧ್ಯಮಾವಧಿ ವಿತ್ತೀಯ ಯೋಜನೆ **–Medium Term Fiscal Plan-MTFP** ನೀತಿಯನ್ನು ರೂಪಿಸಬೇಕೆಂದು ವಿಶ್ವ ಬ್ಯಾಂಕ್ ಕಡ್ಡಾಯ ಮಾಡುತ್ತದೆ. ಈ ಹಿಂದೆ ಅದು ಪ್ರತಿ ವರ್ಷ ಕಂತಿನ ಸಾಲವನ್ನು ಬಿಡುಗಡೆ ಮಾಡುವ ಮುನ್ನ ಈ ನೀತಿಗೆ ಸರ್ಕಾರ ಬದ್ಧವಾಗಿದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಿದ ನಂತರವೇ ಕಂತು ಬಿಡುಗಡೆ ಮಾಡುತ್ತಿತ್ತು.

2002ರಲ್ಲಿ ವಿಶ್ವಬ್ಯಾಂಕಿನ ಈ ನಿರ್ದೇಶನವೇ ವಿತ್ತೀಯ ಸುಧಾರಣಾ ಶಾಸನ **(Fiscal Responsibility Act- FRA-2002)** ಆಗಿ ಜಾರಿಯಾಯಿತು. ಈ ಶಾಸನವು ತನ್ನ ಮುನ್ನುಡಿಯಲ್ಲೇ "ಪ್ರತಿ ವರ್ಷ ಸರ್ಕಾರಗಳು ಮಂಡಿಸುವ ವಾರ್ಷಿಕ ಬಜೆಟ್ಟುಗಳು **MTFP**ಯಲ್ಲಿ ವಿಷದವಾಗಿರುವ ಮಧ್ಯಮಾವಧಿ ಯೋಜ ನೆಗೆ ಬದ್ಧವಾಗಿರತಕ್ಕದ್ದು" ಎಂದು ತಾಕೀತು ಮಾಡುತ್ತದೆ. ಈ ಕಾಯ್ದೆ ಪ್ರಕಾರ ಒಟ್ಟಾರೆ ಆರ್ಥಿಕ ಯೋಜನೆ ಗಳು "2002ರಿಂದ ಮೊದಲುಗೊಂಡು ನಂತರದ ನಾಲ್ಕು ವರ್ಷಗಳಲ್ಲಿ ಸರ್ಕಾರ ತನ್ನ ರೆವೆನ್ಯೂ ಕೊರತೆಯನ್ನು ಸೊನ್ನೆಗೂ ಹಾಗೂ ವಿತ್ತೀಯ ಕೊರತೆಯನ್ನು ಒಟ್ಟಾರೆ ರಾಜ್ಯ ಆಂತರಿಕ ಉತ್ಪನ್ನದ ಶೇ.3ಕ್ಕೆ ಇಳಿಸಬೇಕು" ಎಂದು (ಕಲಂ9(4)(3)) ಕಡ್ಡಾಯ ಮಾಡುತ್ತದೆ. ಇದನ್ನು ಸರ್ಕಾರ ತನ್ನ ಆದಾಯ ತರದ ಖರ್ಚುಗಳನ್ನು ಕಡಿಮೆ ಮಾಡಿಕೊಳ್ಳುವ ಮೂಲಕ ಮತ್ತು ಆದಾಯದ ಮೂಲಗಳನ್ನು ಹೆಚ್ಚಿಸಿ ಕೊಳ್ಳುವ ಮೂಲಕ ಸಾಧಿಸಬೇಕೆಂದು ನಿರ್ದೇಶನ ಮಾಡು ತ್ತದೆ.


ಆದರೆ ಈ ಸಾಲಿನಲ್ಲಿ ಇಡೀ ಜಗತ್ತೇ ಆರ್ಥಿಕ ಹಿಂದ್ಸರಿತ ಎದುರಿಸುತ್ತಿರುವುದರಿಂದ ವಿತ್ತೀಯ ಕೊರತೆ ಯನ್ನು ಶೇ.3.5ಕ್ಕೆ ಹೆಚ್ಚಿಸಿಕೊಳ್ಳುವುದಕ್ಕೆ ಮಾತ್ರ ಅನುಮತಿ ನೀಡಲಾಗಿದೆ. ಅಂದರೆ ಮಿಕ್ಕೆಲ್ಲಾ ಜನವಿರೋಧಿ ನೀತಿಗಳು ಹಾಗೆಯೇ ಮುಂದುವರೆಯುತ್ತದೆ. ಈ ಸಾಲಿನಲ್ಲಿ ಚುನಾವಣೆಯೂ ಇರುವುದರಿಂದ ಜನರಿಗೆ ನೀಡಲು ಹಣವಿಲ್ಲ, ಜನಪರ ಕಾರ್ಯಕ್ರಮಗಳಿಲ್ಲದೆ ಓಟಿಲ್ಲ. ಈ ಇಕ್ಕಟ್ಟಿನಲೇ ಯಡ್ಡಿ ಸರ್ಕಾರ ಜನತೆಗೆ ಚಟಕೆ ಚಪ್ಪರ ಹಾಕಿಸಿ ಮದುವೆ ಮಾಡಿಸಲು ಹೊರಟಿದೆ.

ಬಜೆಪಿ ಸರ್ಕಾರದ ವಹಿವಾಟನ್ನೇ ನೋಡಿದರೆ ಬಜೆಟ್ಟಿನ ಭರವಸೆಗಳೆಲ್ಲಾ ಬರೀ ಬೋಗಸ್ ಎಂಬುದು ಗೊತ್ತಾಗುತ್ತದೆ. ಉದಾಹರಣೆಗೆ ಕಳೆದ ಸಾಲಿನಲ್ಲಿ ಯಡಿಯೂರಪ್ಪನವರು 55,273 ಕೋಟಿ ರೂಪಾಯಿಗಳ ಆಯವ್ಯಯ ಪತ್ರವನ್ನು ಮಂಡಿಸಿದ್ದರು. ಅದರ ಹಿಂದಿನ ವರ್ಷ ಅದು 47,649.42 ಕೋಟಿ ರೂ.ಗಳಷ್ಟಾಗಿತ್ತು. ಅಂದರೆ 9000 ಕೋಟಿ ರೂಪಾಯಿಗಳಷ್ಟು ಅಧಿಕ ಬಜೆಟ್ಟನ್ನು ಯಾವುದೇ ಆಧಾರವಿಲ್ಲದೆ ಮಂಡಿಸಲಾಗಿತ್ತು. ಆಗಲೇ ಅದನ್ನು ಸಾಲ ಮತ್ತು ಉತ್ಪ್ರೇಕ್ಷೆಯಿಂದ ಕೂಡಿದ ಬಜೆಟ್ ಎಂದು ವಿಶ್ಲೇಷಿಸಲಾಗಿತ್ತು.

ವಾಸ್ತವವಾಗಿ 2008-09ರ ಸಾಲಿನಲ್ಲಿ ತೆರಿಗೆಗಳಿಂದ 48000 ಕೋಟಿ ರೂ. ಸಂಗ್ರಹವಾಗುತ್ತದೆ ಎಂದು ನಿರೀಕ್ಷಿಸಲಾಗಿದ್ದರೂ ಬಜೆಟ್ಟಿನ ರಿವೈಸ್ಡ್ ಎಸ್ಟಿಮೇಟ್‌ಗಳ ಪ್ರಕಾರ ಆಗಿರುವ ತೆರಿಗೆ ಸಂಗ್ರಹ ಕೇವಲ 430000 ಕೋಟಿ ರೂ. ಮಾತ್ರ. ಅಂದರೆ ಸರ್ಕಾರದ ಪ್ರಕಾರವೇ 5000 ಕೋಟಿ ರೂ. ಆದಾಯ ಖೋತಾ! ಅದೂ ಆರ್ಥಿಕ ಬಿಕ್ಕಟ್ಟು ಇನ್ನೂ ಪ್ರಾರಂಭ ವಾಗದ ಕಾಲದಲ್ಲಿ. ಈಗ ಆರ್ಥಿಕ ಬಿಕ್ಕಟ್ಟು ಪ್ರಾರಂಭವಾಗಿದೆ. ಸರ್ಕಾರದ ಸಮೀಕ್ಷೆಯ ಪ್ರಕಾರವೇ ರಾಜ್ಯದ ಪ್ರಮುಖ ಆದಾಯ ಮೂಲವಾಗಿರುವ ಮೋಟಾರು ವಾಹನ ತೆರಿಗೆ, ಮುದ್ರಾಂಕ ತೆರಿಗೆ, ಮಾರಾಟ ತೆರಿಗೆ ಇನ್ನಿತ್ಯಾದಿಗಳಲ್ಲಿ ಗಮನಾರ್ಹ ಕುಸಿತವಾಗಿದೆ. ಬರಲಿರುವ ದಿನಗಳಲ್ಲಿ ಅದಿನ್ನೂ ಕುಸಿಯ ಲಿದೆ. ಅಂದರೆ ರಾಜ್ಯದ ಆದಾಯ ಕಡಿಮೆಯಾಗುತ್ತದೆ ಎಂದಾಯಿತಲ್ಲವೇ? ಆಗ ಸರ್ಕಾರ ಸಹಜವಾಗಿ ತನ್ನ ವೆಚ್ಚವನ್ನು ಅದಕ್ಕೆ ತಕ್ಕ ಹಾಗೆ ತೋರಿಸಬೇಕಲ್ಲವೇ? ಆದರೆ ಬಜೆಪಿ ಜನರಿಗೆ ಚುನಾವಣೆ ಟೋಪಿ ಹಾಕುವ ಏಕೈಕ ಉದ್ದೇಶದಿಂದ, ತನ್ನ ಆದಾಯದ ಮೂಲ ಕಳೆದ ವರ್ಷಕ್ಕಿಂತ ಕಡಿಮೆಯಾಗಿದ್ದರೂ, ವೆಚ್ಚದ ಗಾತ್ರವನ್ನು ಕಳೆದ ವರ್ಷಕ್ಕಿಂತ 3000 ಕೋಟಿ ರೂ. ಹೆಚ್ಚಿಸಿ 58031 ಕೋಟಿ ರೂ.ಗಳಿಗೆ ನಿಗದಿಪಡಿಸಿದೆ. ಹಾಗೂ ತನ್ನೆಲ್ಲಾ ಬಜೆಟ್ ಪ್ರಸ್ತಾಪಗಳನ್ನೂ ಇದಕ್ಕೆ ತಕ್ಕ ಹಾಗೆ ರೂಪಿಸಿದೆ. ಅಂದರೆ ಬೊಕ್ಕಸದಲ್ಲಿ ಕಾಸಿಲ್ಲ ಎಂದು ಗೊತ್ತಿದ್ದರೂ ಬೋಗಸ್ ಯೋಜನೆಗಳನ್ನೂ ಬುರುಡೆ ಕಾರ್ಯಕ್ರಮ ಗಳನ್ನೂ ಘೋಷಿಸಿದೆ.

ಚಾರ್ವಾಕ
ಶಿವಸುಂದರ್

ಕಳೆದ ವರ್ಷ ಯಡ್ಡಿ ಸರ್ಕಾರ ಘೋಷಿಸಿದ ಯೋಜನೆ ಗಳಲ್ಲಿ ಶೇ.30ರಷ್ಟು ಸಹ ಅನುಷ್ಠಾನಕ್ಕೆ ಬರಲಿಲ್ಲ. ಕಳೆದ ಸಾಲಿನಲ್ಲಿ ಒಟ್ಟಾರೆ ಯೋಜನಾ ವೆಚ್ಚ 24000 ಕೋಟಿ ರೂ.ಗಳಷ್ಟಿದ್ದರೆ 2009ರ ಜನವರಿ 19 ರ ವೇಳೆಗೆ 10,000 ಕೋಟಿ ರೂ.ಗಳಷ್ಟು ಸಹ ವೆಚ್ಚವಾಗಿರಲಿಲ್ಲ, ಅಥವಾ ಆ ಬಾಬತ್ತಿಗೆ ಹಂಚಿಕೆಯಾಗಿರಲಿಲ್ಲ, ಮಠಮಾನ್ಯಗಳಿಗೆ ಕೊಟ್ಟ ಹಣವನ್ನು ಬಿಟ್ಟು! ಈ ವರ್ಷವೂ ಸಹ ಯಾವ ಹೊಸ ತೆರಿಗೆಯನ್ನೂ ಹಾಕದೆ ಅಂದರೆ ಯಾವ ಹೊಸ ಆದಾಯದ ಮೂಲವೂ ಇಲ್ಲದೆ 15,000 ಕೋಟಿಗೂ ಹೆಚ್ಚು ಹೊಸ ಕಾರ್ಯಕ್ರಮಗಳನ್ನು ಘೋಷಿಸಲಾಗಿದೆ. ಹಣವೇ ಇಲ್ಲವಾದ್ದರಿಂದ ಅದರಲ್ಲಿ ಅರ್ಧಕ್ಕಿಂತ ಹೆಚ್ಚಿನ ಭಾಗ ಅನುಷ್ಠಾನಕ್ಕೆ ಬರುವುದಿಲ್ಲ, ಆದರೆ ಅಷ್ಟರೊಳಗೆ ಸಂಸತ್ ಚುನಾವಣೆ ನಡೆದುಬಿಟ್ಟಿರುತ್ತದೆ! ಇದು ಬಜೆಟ್ ಭಾಷಣದಲ್ಲಿ ಪ್ರಿಂಟಾಗದಿದ್ದ ರಹಸ್ಯ!



ಈ ಕುತಂತ್ರವನ್ನು ಈ ಸಾಲಿನ ಬಜೆಟ್ಟಿನ ಒಂದೆರಡು ಉದಾಹರಣೆಗಳೇ ಸ್ಪಷ್ಟಪಡಿಸುತ್ತವೆ.

ಬಜೆಪಿ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಕಡುಬಡವರಿಗೆ ಎರಡು ರೂಪಾಯಿಗೆ ಕೆಜಿ ಅಕ್ಕಿ ಕೊಡುವುದಾಗಿ ಭರವಸೆ ನೀಡಿತ್ತು. ಅಧಿಕಾರಕ್ಕೆ ಬಂದ ಮೇಲೆ ತನ್ನ ಮೊದಲ ಬಜೆಟ್ಟಿನಲ್ಲಿ ಅದರ ಪ್ರಸ್ತಾಪವನ್ನೇ ಮಾಡಲಿಲ್ಲ. ನಂತರ ಕಳೆದ ಇಡಿ ವರ್ಷ ನಿಜವಾದ ಕಡುಬಡವರನ್ನು ಗುರುತಿಸಿ ಅವರಿಗೆ ತಾತ್ಕಾಲಿಕ ಕಾರ್ಡು ಕೊಟ್ಟು ರಿಯಾಯತಿ ದರದಲ್ಲಿ ಆಹಾರ ಧಾನ್ಯ ಕೊಡುವು ದಾಗಿ ಹೇಳಿತ್ತು. ಅದನ್ನು ನಂಬಿಕೊಂಡ ಬಡಜನ ಪೋಲೀಸರ ಲಾಠಿಗಳನ್ನು ತಿನ್ನುತ್ತಾ ಕಾರ್ಡ್‌ಗಾಗಿ ಕಚೇರಿಗಳ ಮುಂದೆ ಅನ್ನಾಹಾರ ತೊರೆದು ಕ್ಯೂ ಹಚ್ಚಿದರು. ಸರ್ಕಾರವೂ ಸಹ ರಾಜ್ಯದಲ್ಲಿ ಒಟ್ಟು ಒಂದು ಕೋಟಿ ಹತ್ತು ಲಕ್ಷ ಅರ್ಹ ಬಡ ಕುಟುಂಬಗಳಿವೆ. ಅವರಲ್ಲಿ 75 ಲಕ್ಷಕ್ಕಾದರೂ ಬಿಪಿಎಲ್ ಕಾರ್ಡ್ ಮತ್ತು ರಿಯಾಯತಿ ರೇಷನ್ ಒದಗಿಸುವುದಾಗಿ ಹೇಳಿತು. 2004ರಲ್ಲಿ ಸರ್ಕಾರದ ಅಂಕಿಅಂಶದ ಪ್ರಕಾರವೇ ಆಗ ಗುರುತಿಸಲಾಗಿದ್ದ 40 ಲಕ್ಷ ಬಡವರಿಗೆ ರಿಯಾಯತಿ ದರದಲ್ಲಿ ಆಹಾರ ಧಾನ್ಯ ಒದಗಿಸಲು 600 ಕೋಟಿ ರೂ. ಬೇಕಾಗುತ್ತಿತ್ತು. ಈಗ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಆಹಾರ ಧಾನ್ಯಗಳ ದರವೂ ಹೆಚ್ಚಾಗಿದೆ. ಮತ್ತು ಸರ್ಕಾರವೇ ಹೇಳುವಂತೆ ಅರ್ಹ ಫಲಾನುಭವಿಗಳ ಸಂಖ್ಯೆ 75 ಲಕ್ಷವಾಗಿದೆ. ಹಾಗಿದ್ದಲ್ಲಿ 40 ಲಕ್ಷ ಜನರಿಗೆ 600 ಕೋಟಿ ವೆಚ್ಚವಾಗುತ್ತಿದ್ದ ಕಡೆ 75 ಲಕ್ಷ ಜನರಿಗೆಲ್ಲಾ ರಿಯಾಯತಿ ರೇಷನ್ ಪೂರೈಸಬೇಕೆಂದರೆ ಕನಿಷ್ಠ 1200 ಕೋಟಿ ಬೇಕಲ್ಲವೇ? ಆದರೆ ಸರ್ಕಾರ ಈ ಬಾಬತ್ತಿಗೆ ತೆಗೆದಿಟ್ಟಿರುವ ಹಣ ಕೇವಲ 750 ಕೋಟಿ. ಅದೂ ಕೊಡಲು ಸಾಧ್ಯ ವಾಗುವುದು ಒಟ್ಟಾರೆ 58000 ಕೋಟಿಯಷ್ಟು ಆದಾಯವನ್ನು ಕ್ರೋಢಿಸಿಕೊಂಡಾಗ!

ಅದೇರೀತಿ ಉಚಿತ ವಿದ್ಯುತ್ ಎಂಬ ಪ್ರಹಸನ. ಉಚಿತ ವಿದ್ಯುತ್ ಇರಲಿ ಕಾಸು ಕೊಟ್ಟರೂ ವಿದ್ಯುತ್ ಕೊಡದ ಪರಿಸ್ಥಿತಿಯಲ್ಲಿ ಸರ್ಕಾರವಿರುವಾಗ ಮತ್ತೆ ಬಜೆಪಿ ಸರ್ಕಾರ 17 ಲಕ್ಷ ರೈತರಿಗೆ ಉಚಿತ ವಿದ್ಯುತ್ ನೀಡಲು 2100 ಕೋಟಿ ರೂ. ಎತ್ತಿಟ್ಟಿರುವುದಾಗಿ ಕೊಚ್ಚಿಕೊಂಡಿದೆ. ಕಳೆದ ಬಾರಿಯೇ ಸ್ಪಷ್ಟವಾಗಿರುವಂತೆ ಅಷ್ಟು ಹಣ ಉಚಿತ ವಿದ್ಯುತ್ತಿನ ಬಾಬತ್ತಿಗಲ್ಲ, ಬದಲಿಗೆ ಈಗಾಗಲೇ ನೀಡುತ್ತಿರುವ ರಿಯಾಯಿತಿ ವಿದ್ಯುತ್ತಿಗೆ ಮತ್ತು ರೈತರ ಪಂಪ್‌ಸೆಟಿಗೆ ಮೀಟರ್ ಹಾಕಿ ಬಾಕಿ ವಸೂಲಿ ಮಾಡುವುದಕ್ಕೆ ಮತ್ತು ಕ್ರಮೇಣ ವಿದ್ಯುತ್ ಸರಬರಾಜನ್ನು ಖಾಸಗೀಕರಿಸುವುದಕ್ಕೆ!

ಈ ಶಕುನಿ ಕುತಂತ್ರಗಳನ್ನು ಮಾತ್ರವಲ್ಲದೆ ಕೋಮು ವಾದಿ ಮತ್ತು ಫ್ಯೂಡಲ್ ಅಜೆಂಡಾಗಳನ್ನು ಬಜೆಪಿ ಸರ್ಕಾರ ಸಂತೆಯೊಳಗೆ ಸಮಾರಾಧನೆಯೆಂಬಂತೆ ತೂರಿಸಿದೆ. ಈ ಸಾಲಿನಲ್ಲೂ ಚುನಾವಣೆಯಲ್ಲಿ ಪ್ರಮುಖವಾಗುವ ಎಲ್ಲಾ ಜಾತಿಗಳ ಮಠಗಳಿಗೆ ಮತ್ತು ಐತಿಹಾಸಿಕ ವ್ಯಕ್ತಿಗಳ ಸ್ಮಾರಕಕ್ಕೆ ಏನಿಲ್ಲವೆಂದರೂ 200 ಕೋಟಿ ರೂ.ಗಳನ್ನು ಎತ್ತಿಡಲಾಗಿದೆ. ರೈತರಿಗೆ ಗೋವಿನ ಬಗ್ಗೆ ಇರುವ ಋಣೀ ಭಾವನೆಯನ್ನು ಕೋಮುವಾದೀಕರಿಸಲು ಮತ್ತು ತಮ್ಮ ಮುಸ್ಲಿಂ ವಿರೋಧಿ ಅಜೆಂಡಾವನ್ನು ಹಳ್ಳಿಹಳ್ಳಿಗೆ ತೆಗೆದುಕೊಂಡು ಹೋಗಲು ತಾಲ್ಲೂಕಿಗೊಂದು ಗೋಶಾಲೆಯನ್ನು ಮತ್ತು ಅದಕ್ಕೆ 10 ಲಕ್ಷ ರೂ.ಗಳನ್ನು ಎತ್ತಿಡಲಾಗಿದೆ. ಮಠಗಳು ಮತ್ತು ಪ್ರಭಾವೀ ಫ್ಯೂಡಲ್ ಶಕ್ತಿಗಳು ಭೂಮಿಯ ಮೇಲಿನ ತಮ್ಮ ಸ್ವಾಮ್ಯವನ್ನು ಉಳಿಸಿಕೊಳ್ಳಲು ಅನುಕೂಲವಾಗುವಂತೆ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾಪವನ್ನು ಮಾಡಲಾಗಿದೆ.

ಇವಲ್ಲದೆ ಜಾಗತಿಕ ಬಿಕ್ಕಟ್ಟಿನಿಂದ ಹೊರಬರಲು ಕೇಂದ್ರ ಸರ್ಕಾರವೂ ಒಳಗೊಂಡಂತೆ ಬಜೆಪಿ ಸರ್ಕಾರವು ಜಾರಿಗೊಳಿಸು ತ್ತಿರುವ ನೀತಿಗಳು ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದ ವಿಲಾಸಿಜೀವನಕ್ಕೆ ಪೂರಕವಾಗಿದೆಯೇ ಹೊರತು ಬಡಜನತೆಯ ಆರ್ಥಿಕ ಪುನಶ್ಚೇತನಕ್ಕೆ ಸಹಾಯಕವಾಗಿಲ್ಲ. ಈ ಬಜೆಟ್ಟಿನಲ್ಲಿ ಸರ್ಕಾರ ಪ್ರಸ್ತಾಪಿಸಿರುವಂತೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ರೈತರಿಗೆ ಒದಗಿಸುವ ಶೇ.3 ರ ಸಾಲದ ಫಲಾನುಭವಿಗಳು ಮಧ್ಯಮ ಮತ್ತು ಶ್ರೀಮಂತ ರೈತರೇ ವಿನಃ ಆತ್ಮಹತ್ಯೆಯ ಅಂಚಿನಲ್ಲಿರುವ ಸಣ್ಣ ಮತ್ತು ಅತಿಸಣ್ಣ ರೈತರಲ್ಲ. ಅಸಲು ಅವರು ವಾಣಿಜ್ಯ ಬ್ಯಾಂಕುಗಳಿರಲಿ ಕೋ ಆಪರೇಟಿವ್ ಬ್ಯಾಂಕುಗಳಿಂದಲೂ ಸಾಲ ಮಾಡ ಲಾಗದವರು!

ನಗರಾಭಿವೃದ್ಧಿಯ ಹೆಸರಲ್ಲಿ ಸರ್ಕಾರ ಮತ್ತು ಖಾಸಗಿ ಜಂಟಿ ಪಾಲುದಾರಿಕೆಯ ಹೆಸರಲ್ಲಿ ಜಾರಿಯಾಗುತ್ತಿರುವ ಯೋಜನೆಗಳೆಲ್ಲಾ ತಮ್ಮ ಸ್ವಯಂಕೃತ ಅಪರಾಧಗಳಿಂದ ನಷ್ಟದಲ್ಲಿರುವ, ಕಷ್ಟದಲ್ಲಿರುವ ದೊಡ್ಡ ದೊಡ್ಡ ಉದ್ಯಮಗಳಿಗೆ ಅಪಾರ ಲಾಭ ಗಳಿಸಿಕೊಡಲೆಂದೇ ಜಾರಿಯಾಗುತಿರುವ ಯೋಜನೆಗಳಾಗಿವೆ. ಕಾವೇರಿ ನೀರು ಸರಬರಾಜನ್ನು ಟಾಟಾಗೆ ವಹಿಸಿಕೊಟ್ಟಿರುವುದು, ಸತ್ಯಂ ಜೊತೆಗೆ ಆರೋಗ್ಯ ಕವಚ ಯೋಜನೆ ಮಾಡಿಕೊಂಡಿರು ವುದು (ಈ ಸಾಲಿನಲ್ಲಿ ಈ ಬಾಬತ್ತಿಗೆ ಖಾಸಗಿ ಸಹ ಯೋಗದಲ್ಲಿ 221 ಕೋಟಿ ರೂ. ಖರ್ಚಿನಲ್ಲಿ 550 ಆಂಬ್ಯುಲೆನ್ಸ್‌ಗಳನ್ನು ಕೊಳ್ಳಲಾಗುವುದಂತೆ!) ಇವೆಲ್ಲಾ ಕೆಲವು ಉದಾಹರಣೆಗಳಷ್ಟೆ. ಇದು ಬಜೆಪಿಯೆಂದರೆ ಕೇವಲ ಅಲ್ಪಸಂಖ್ಯಾತರನ್ನು ಕೊಲ್ಲುವ ತ್ರಿಶೂಲಗಳು ಮಾತ್ರವಲ್ಲ, ಕಡುಬಡವರ ಕತ್ತು ಕೊಯ್ಯಲೆಂದು ಕಾರ್ಪೊರೇಟ್ ಉದ್ಯಮಿಗಳ ಕೈಯಲ್ಲಿರುವ ಕತ್ತಿಗಳು ಸಹ ಎಂದು ಸ್ಪಷ್ಟಪಡಿಸುತ್ತದೆ. ಇದು ಫ್ಯಾಸಿಸ್ಟರ ಅಸಲಿ ರೂಪ.

ಬಜೆಪಿಯ ಈ ಫ್ಯಾಸಿಸ್ಟ್ ಸ್ವರೂಪ ಅದು ಕಾನೂನು ಸುವ್ಯವಸ್ಥೆ ಕ್ಷೇತ್ರದಲ್ಲಿ ತರಬಯಸಿರುವ 'ಸುಧಾರಣೆಗಳಿಂದ' ಇನ್ನಷ್ಟು ಸ್ಪಷ್ಟವಾಗುತ್ತದೆ. ಮೊದಲನೆಯದಾಗಿ ಪೊಲೀಸ್ ವ್ಯವಸ್ಥೆಯ ಸುಧಾರಣೆಯ ಬಗ್ಗೆ ಸಲಹೆ ನೀಡಲು ಮಳೀಮಠ್ ಸಮಿತಿಯನ್ನು ಮಾಡಲಾಗಿದೆ. ಈ ಮಹಾಶಯರು ಈ ದೇಶದಲ್ಲಿ ಪೋಟಾ ಮತ್ತು ಟಾಡಾದಂಥ ಎಕ್ಸ್ಟ್ರಾರ್ಡಿನರಿ ಕಾಯಿದೆಗಳಲ್ಲಿದ್ದ ಮಾನವ ಹಕ್ಕು ಹರಣ ಮಾಡುವಂತಹ ಅಂಶಗಳನ್ನು ಸಿಆರ್‌ಪಿಸಿ ಮತ್ತು ಐಪಿಸಿಗಳಲ್ಲೇ ಸೇರಿಸಬೇಕು ಎಂದು ಸಲಹೆ ನೀಡಿದವರು. ಇಂದು ದೇಶಾದ್ಯಂತ ವಕೀಲರು ಸಿಆರ್‌ಪಿಸಿಯ ಸೆಕ್ಷನ್ 31 ಮತ್ತು ಸೆಕ್ಷನ್ 309ಕ್ಕೆ ತರಬೇಕೆಂದಿರುವ ತಿದ್ದುಪಡಿಯ ವಿರುದ್ಧ ಹೋರಾಡು ತ್ತಿದ್ದಾರಲ್ಲವೇ? ಅದನ್ನು ಶಿಫಾರಸ್ಸು ಮಾಡಿದವರು ಈ ಮಹಾಶಯರೇ.

ಬಜೆಟ್ ಭಾಷಣದ ಪ್ರಾರಂಭದಲ್ಲಿ ಯಡಿಯೂರಪ್ಪ ನವರು ತಮ್ಮ ಬಜೆಟ್ ಭಿಕ್ಷುಕ ಮತ್ತು ಭೂಪತಿಗಳಿಬ್ಬ ರನ್ನೂ ಸಮಾನವಾಗಿ ನೋಡುವ ಬಜೆಟ್ ಎಂದು ಹೇಳಿಕೊಳ್ಳುತ್ತಾರೆ. ಆದರೆ ಸಮಾನತೆ ಇದ್ದ ಕಡೆ ಭಿಕ್ಷುಕ ಮತ್ತು ಭೂಪತಿಗಳೆಂಬ ವರ್ಗಗಳೇ ಇರುವುದಿಲ್ಲ ವೆಂಬುದು ಬಜೆಪಿಯಂತಹ ಫ್ಯಾಸಿಸ್ಟ್ ಪಕ್ಷಗಳಿಗೆ ಅರ್ಥ ವಾಗುವುದಿಲ್ಲ. ಅದು ಯಾವತ್ತೂ ದುರ್ಬಲರನ್ನು ಮತ್ತಿನಲ್ಲೋ, ಅಮಾನತ್ತಿನಲ್ಲೋ ಇಟ್ಟು ಪ್ರಬಲರ ಪರ ವಾಗಿ ರಾಜಕಾರಣ ಮಾಡುತ್ತದೆ. ಈ ಬಜೆಟ್ ಕೂಡಾ ಅಷ್ಟೆ: ಭಿಕ್ಷುಕರ ಹೆಸರಿನಲ್ಲಿ ಭೂಪತಿಗಳ ಪರವಾದ ಬಜೆಟ್! ■

No Comments

"ಲಂಚ ನೀಡದೆ ಅಥವಾ ರಾಜಕೀಯದ ಬೆಂಬಲವಿಲ್ಲದೆ ಸಾಮಾನ್ಯ ನಾಗರಿಕರು ಸರ್ಕಾರದಿಂದ ಯಾವುದೇ ಕೆಲಸ ಮಾಡಿಸಿಕೊಳ್ಳಲು ಸಾಧ್ಯವಾಗದ ಸ್ಥಿತಿಗೆ ಬಂದು ತಲುಪಿ ದ್ದೇವೆ."

- ಸಂತೋಷ್ ಹೆಗ್ಡೆ ಲೋಕಾಯುಕ್ತರು

"ಪ್ರೇಮ ಮತ್ತು ಕಾಮಕ್ಕೆ ನಮ್ಮ ಸಂಸ್ಕೃತಿಯಲ್ಲಿ ಉನ್ನತ ಸ್ಥಾನ ನೀಡಲಾಗಿದೆ. ಪ್ರೇಮಿಗಳ ದಿನಾಚರಣೆಯಿಂದ ನಮ್ಮ ಸಂಸ್ಕೃತಿಗೆ ಯಾವುದೇ ಸೋಂಕು ತಗಲುವುದಿಲ್ಲ"

-ಜ್ಯೋತಿಷಿ ಸೋಮಯಾಜಿ

"ಮಹಿಳೆಯರ ಮೇಲೆ ದಾಳಿ ನಡೆಸಿದ ವಿಷಯದಿಂದ ಜನರ ಮನಸ್ಸನ್ನು ಬೇರೆಡೆಗೆ ತಿರುಗಿಸಲು ಪುಂಡರು, ಫ್ಯಾಸಿಸ್ಟರು ನನ್ನ ಮೇಲೆ ಕೇಸು ದಾಖಲಿಸಲು ವ್ಯವಸ್ಥಿತ ಪಿತೂರಿ ನಡೆಸುತ್ತಿದ್ದಾರೆ." -ರೇಣುಕಾ ಚೌಧರಿ

"ನಾನು ರಾಜಕೀಯ ಕ್ಷೇತ್ರಕ್ಕೆ ಸೂಕ್ತ ವ್ಯಕ್ತಿಯಲ್ಲ."

-ಸೌರವ್ ಗಂಗೂಲಿ

"ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ನನಗೆ ಆಸಕ್ತಿ ಇಲ್ಲ. ಆದರೆ ಒಂದು ವೇಳೆ ಸೋನಿಯಾ ಗಾಂಧಿಯವರು ಸೂಚಿಸಿದರೆ ಇಲ್ಲ ಎನ್ನಲಾಗದು."

-ಮಲ್ಲಿಕಾರ್ಜುನ ಖರ್ಗೆ

"ಸಿದ್ಧರಾಮಯ್ಯನವರಿಗೆ ಪ್ರತಿಪಕ್ಷದ ಸ್ಥಾನಮಾನ ಸಿಗುವುದು ಹೆಚ್ಚೂಕಡಿಮೆ ಖಚಿತವಾಗಿರುವುದರಿಂದ ಹೊಸ ಪಕ್ಷ ಕಟ್ಟುವ ಪ್ರಸ್ತಾಪ ಕೈಬಿಟ್ಟಿದ್ದೇವೆ."

-ವರ್ತೂರು ಪ್ರಕಾಶ್

"ರಾಜ್ಯದ ಸಚಿವರಿಗೆ ವಸತಿ ಸಮಸ್ಯೆ ಇರುವುದರಿಂದ 55 ಕೋಟಿ ರೂ. ವೆಚ್ಚದಲ್ಲಿ 15 ವಸತಿ ಗೃಹಗಳನ್ನು ನಿರ್ಮಿಸಲಾಗುವುದು."


-ಕ್ಯಾಬಿನೆಟ್ ತೀರ್ಮಾನ

ನಂಬಿದ್ರೆನಂಬಿ ಬಿಟ್ರೆಬಿಡಿ

"ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಎಸ್‌ಪಿ ಪಕ್ಷವು ಯಾರ ಜೊತೆಯೂ ಹೊಂದಾಣಿಕೆ ಮಾಡಿಕೊಳ್ಳು ವುದಿಲ್ಲ"

-ಮಾರಸಂದ್ರ ಮುನಿಯಪ್ಪ, ಬಿಎಸ್‌ಪಿ ರಾಜ್ಯಾಧ್ಯಕ್ಷ

"ಆಧುನಿಕ ಕಲೆ ಬಗ್ಗೆ ನನಗೆ ಗೌರವವಿದೆ. ಸ್ವತಃ ನಾನೂ ಒಬ್ಬ ಮಾಡರ್ನ್ ಆರ್ಟಿಸ್ಟ್"



-ರಾಮಚಂದ್ರಗೌಡ

"ಪಾಕಿಸ್ತಾನದ ಗಡಿಯುದ್ದಕ್ಕೂ ಕಾರ್ಯನಿರತ ರಾಗಿರುವ ತಾಲಿಬಾನ್‌ಗಳು ಯಾವಾಗ ಬೇಕಾದರೂ ಪಾಕಿಸ್ತಾನವನ್ನು ವಶಪಡಿಸಿ ಕೊಳ್ಳುವ ಸಂಚು ಹೂಡಿದ್ದಾರೆ."

- ಆಸಿಫ್ ಆಲಿ ಜರ್ದಾರಿ, ಪಾಕ್ ಅಧ್ಯಕ್ಷ

"ನಕಲಿ ಸಿಡಿ ಹಾವಳಿಯಿಂದ ಪ್ರತಿ ವರ್ಷ ಕನ್ನಡ ಚಿತ್ರರಂಗಕ್ಕೆ 300 ಕೋಟಿ ರೂ. ನಷ್ಟವಾಗುತ್ತಿದೆ."

- ಜಯಮಾಲ

ಈ ಒಂದು ಕೆಲಸ ಪೂರೈಸಿ, ಸಾಕು!

"ಪಶ್ಚಿಮ ವಲಯ ಡಿಐಜಿಯಾಗಿ ಅಧಿಕಾರ ವಹಿಸಿ



ಕೊಂಡ ನಂತರ ನನ್ನ ಮೊದಲ ಪ್ರಿಯಾರಿಟಿ ಕಾನೂನುಬಾಹಿರವಾಗಿ ವರ್ತಿಸುತ್ತಿರುವ ಕೆಲವು ಹಿಂದೂ ಸಂಘಟನೆಗಳನ್ನು ಹದ್ದು ಬಸ್ತಿಗೆ ತರುವುದು."

-ಗೋಪಾಲ್ ಹೊಸೂರ್

ಹಾಗಾದರೆ ತಾವು ಏನು ಕಾಯುತ್ತಿದ್ದೀರಿ?

"ಸಾಕ್ಷಾತ್ ತಿರುಪತಿ ತಿಮ್ಮಪ್ಪನೇ ಬೆಂಗಳೂರು ನಗರದ



ಪೊಲೀಸ್ ಕಮಿಷನರ್ ಆದರೂ ನಗರದಲ್ಲಿ ನಡೆಯುವ ಅಪರಾಧಗಳನ್ನು ತಡೆಯು ವುದು ಅಸಾಧ್ಯ."

-ಶಂಕರ್ ಬಿದರಿ

ಂದು ಕಲ್ಪಿತ ಆರೋಪ ಮತ್ತು ವಾಸ್ತವ



ಕಂಡಹಾಗೆ

■ ಗೌರಿ ಲಂಕೇಶ್

ಲ್ಕೈದು ವರ್ಷಗಳ ಹಿಂದೆಯೇ ಆ 'ಗೌಪ್ಯ ...ಲೆ'ಯ ಪ್ರತಿಯೊಂದು ನನ್ನ ಕೈ ಸೇರಿದಾಗ ಯಾರೋ ...ಣ ದ್ವೇಷಿಗಳು ಬೇಕೆಂತಲೇ ಇದನ್ನು ...ಬೇಕೆಂದು ನಿರ್ಧರಿಸಿ ಸುಮ್ಮನಾಗಿದ್ದೆ. ಆದರೆ ಆ ...ಲೆ ಪೋಸ್ಟ್ ಮೂಲಕ, ಕರಪತ್ರದ ಮೂಲಕ, ...ಲ್ ಮೂಲಕ ಮತ್ತೆ ಮತ್ತೆ ನನ್ನ ಎದುರು ಬೀಳುತ್ತಿತ್ತು.

...ದೆ-ತಾಯಿ ಯಾರೂ ಇರದಂತಿರುವ ಈ ಗೌಪ್ಯ ...ಲೆ ತುಂಬಾ ಕುತೂಹಲಕಾರಿಯಾಗಿದೆ. ಇದರ ...ಸತ್ಯತೆಗೆ ಬರುವ ಮುನ್ನ ಸುತ್ತೋಲೆಯಲ್ಲಿ ಏನಿದೆ ...ದನ್ನು ಇಲ್ಲಿ ನೀಡುತ್ತೇನೆ.

...ಪ್ಯ ಸುತ್ತೋಲೆ

...ಹ್ಮಣ ಸಮಾಜ

...ಲಘಾಟ್ ಜಿಲ್ಲೆ (ಮಧ್ಯಪ್ರದೇಶ)

... ಶ್ರೀರಾಮ

...ಲಘಾಟ್

...ನಾಂಕ 15 ಆಗಸ್ಟ್ 94

...ಯ ಸ್ನೇಹಿತರೆ,

...ಲಘಾಟ್ ಜಿಲ್ಲೆಯ ಬ್ರಾಹ್ಮಣ ಸಮಾಜದ ಸಭೆ ... 15 ರಂದು ನಡೆಯಿತು. ಜಬಲ್ಪುರ್‌ದ ಸೂತ ...ವೇದಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ...ಕಂಡ ನಿರ್ಣಯಗಳನ್ನು ಸಭೆಯು ಅಂಗೀಕರಿಸಿತು.

...ೂದ್ರ ಸಮುದಾಯಗಳು ತಮ್ಮ ರಾಜಕೀಯ ...ಕ್ಕುಗಳತ್ತ ಗಮನಹರಿಸದೇ ಅವರೆಲ್ಲ ಸದಾಕಾಲ ...ಾಹ್ಮಣರ ಬೆಂಬಲಿಗರಾಗಿ ಮತ್ತು ಗುಲಾಮರಾಗಿ ಮುಂದುವರೆಯಬೇಕಿದ್ದರೆ ಅವರಲ್ಲಿ ಧಾರ್ಮಿಕ ...ಂಧಶ್ರದ್ಧೆ ಹೆಚ್ಚಾಗುವಂತೆ ಮಾಡಬೇಕು.

...ವತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ...ಂದುಳಿದ ವರ್ಗ ಮತ್ತು ಧಾರ್ಮಿಕ ಅಲ್ಪಸಂಖ್ಯಾತರಲ್ಲಿ ...ಮೂಡುತ್ತಿರುವ ರಾಜಕೀಯ ಪ್ರಜ್ಞೆ ಬ್ರಾಹ್ಮಣರ ...ಾಯಕತ್ವಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ...ದ್ದರಿಂದ ಅವರವರ ನಡುವೆಯೇ ಗೊಂದಲ ಮತ್ತು ...ಕ್ಕಾಟಗಳನ್ನು ಸೃಷ್ಟಿಸಿ ಅವರೆಲ್ಲ ಪರಸ್ಪರ ಕಿತ್ತಾಡುವಂತೆ ...ಮಾಡಬೇಕು.


...ೇಶದ ಸಂವಿಧಾನ ಹಿಂದೂ ಹಿತಾಸಕ್ತಿಗೆ ವಿರೋಧಿ ...ಯಾಗಿದೆ. ಆದ್ದರಿಂದ ಅದನ್ನು ಬದಲಾಯಿಸಬೇಕು ...ಎಂಬ ಕಲ್ಪನೆಯನ್ನು ಶೂದ್ರರಲ್ಲಿ ಬಿತ್ತಿ ಅದು ...ವ್ಯಾಪಕವಾಗಿ ಹರಡುವಂತೆ ನೋಡಿಕೊಳ್ಳಬೇಕು.

...ಬ್ರಾಹ್ಮಣ ಜಾತಿಗೆ ಸೇರಿದವರೆಲ್ಲರೂ-ಅವರು ಕಾಂಗ್ರೆಸ್, ಬಿಜೆಪಿ, ಕಮ್ಯೂನಿಸ್ಟ್ ಪಕ್ಷ ಅಥವಾ ಇನ್ನಾವುದೇ ...ಧಾರ್ಮಿಕ, ಸಾಮಾಜಿಕ ಸಂಘಟನೆಗೆ ಸೇರಿದ್ದರೂ- ...ಬ್ರಾಹ್ಮಣರನ್ನು ಕಾಪಾಡಲೆಂದೇ ಒಂದೇ ವೇದಿಕೆಯಡಿ ...ಜೊತೆಗೂಡಬೇಕು. ಏಕೆಂದರೆ ಬ್ರಾಹ್ಮಣರ ಪ್ರಾಮುಖ್ಯತೆ ...ಇವತ್ತು ಅಪಾಯದಲ್ಲಿದೆ.

...ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ/ಪಂಗಡ ಮತ್ತು ...ಧಾರ್ಮಿಕ ಅಲ್ಪಸಂಖ್ಯಾತರ (ಮುಸಲ್ಮಾನ್/ಕ್ರಿಶ್ಚಿಯನ್/ ಬೌದ್ಧರು) ನಡುವೆ ತಪ್ಪು ಕಲ್ಪನೆಗಳು ಹರಡುವಂತೆ ಮಾಡಿ ಅವರೆಲ್ಲ ಪರಸ್ಪರರನ್ನು ಹೊಡೆಯುತ್ತಾ ಮತ್ತು ಕೊಲ್ಲುತ್ತಿರುವಂತೆ ನೋಡಿಕೊಳ್ಳಬೇಕು.

6. ಕಾನ್ಶೀರಾಂ ಅವರ ಬಹುಜನ ಸಮಾಜ ಪಕ್ಷದಿಂದಾಗಿ ದಲಿತರಲ್ಲಿ ರಾಜಕೀಯ ಪ್ರಜ್ಞೆ ಹೆಚ್ಚಾಗುತ್ತಿದೆ. ಇದರಿಂದ ಬ್ರಾಹ್ಮಣರ ಮುಂದಾಳುತನಕ್ಕೆ ಸವಾಲು ಎದುರಾಗಿದೆ. ಇದನ್ನು ನಿಗ್ರಹಿಸಲು ಅದೊಂದು ಹೊಲೆಯರ ಮತ್ತು ಮಾದಿಗರ ಪಕ್ಷ ಎಂದೇ ಬಿಂಬಿಸಬೇಕು ಮತ್ತು ಆ ಮೂಲಕ ಇತರೆ ಸಣ್ಣ ಜಾತಿಗಳು ಅದನ್ನು ಸೇರದಂತೆ ನೋಡಿಕೊಳ್ಳಬೇಕು.

7. ಮೀಸಲಾತಿಯಿಂದಾಗಿ ಸರ್ಕಾರಿ ನೌಕರಿ ಪಡೆದಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರು ಹಾಗೂ ಮುಸಲ್ಮಾನರು ಇವತ್ತು ತಮ್ಮ ದೇಹದಲ್ಲಿ ಕೊಬ್ಬನ್ನು ಬೆಳೆಸಿಕೊಂಡಿದ್ದಾರೆ. ಆದ್ದರಿಂದ ಹಿರಿಯ ಅಧಿಕಾರಿ ಸ್ಥಾನಗಳಲ್ಲಿರುವ ಬ್ರಾಹ್ಮಣರು ಗೌಪ್ಯವಾಗಿ ಅವರಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಬೇಕು.



8. ಉನ್ನತ ಸ್ಥಾನಗಳಲ್ಲಿರುವ ಬ್ರಾಹ್ಮಣ ಅಧಿಕಾರಿಗಳು ನಿರುದ್ಯೋಗಿ ಯುವಕರಲ್ಲಿ ಗೊಂದಲ ಸೃಷ್ಟಿಸಬೇಕು; ಮೀಸಲಾತಿಯಿಂದಾಗಿ ನಿಮಗೆ ಸಿಗಬೇಕಿರುವ ಉದ್ಯೋಗಗಳು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಪಾಲಾಗುತ್ತಿವೆ ಎಂದು ಆ ಯುವಕರನ್ನು ನಂಬಿಸಬೇಕು. ಹಾಗೆ ಮಾಡಿದಾಗ ಅವರೆಲ್ಲ ಪರಸ್ಪರ ಕಿತ್ತಾಟದಲ್ಲಿ ಮಗ್ನರಾಗುತ್ತಾರೆ.

9. ಬ್ರಾಹ್ಮಣರ ಹಿತಾಸಕ್ತಿಯನ್ನು ಕಾಪಾಡಲು ಮತ್ತು ಬ್ರಾಹ್ಮಣರನ್ನು ರಕ್ಷಿಸಲು ಬ್ರಾಹ್ಮಣ ಸಮುದಾಯ ಇವತ್ತು ಜೊತೆಗೂಡದಿದ್ದರೆ ಅದಕ್ಕಿಂತ ದೊಡ್ಡ ನಾಚಿಕೆಗೇಡಿನ ಸಂಗತಿ ಇನ್ನೊಂದಿರಲಾರದು. ಇವತ್ತು ಬ್ರಾಹ್ಮಣರು ಒಗ್ಗೂಡದಿದ್ದರೆ ನಾಳೆ ಬ್ರಾಹ್ಮಣರೇ ಅಸ್ಪೃಶ್ಯ ಜಾತಿಗಳ ಗುಲಾಮರಾಗುವ ಅಪಾಯವಿದೆ. ಹಾಗಾಗಬಾರದಿದ್ದರೆ, ಅವರೇ ಗುಲಾಮರಾಗಿ ಮುಂದುವರೆಯಬೇಕಿದ್ದರೆ, ಎಲ್ಲಾ ತಂತ್ರಗಳನ್ನು ಉಪಯೋಗಿಸಿ ಈ ದೇಶದ ಮೇಲೆ ಬ್ರಾಹ್ಮಣರಿಗಿರುವ ನಾಯಕತ್ವವನ್ನು ಕಾಪಾಡುವುದು ಅಗತ್ಯವಾಗಿದೆ.

10. ಬ್ರಾಹ್ಮಣರ ರಕ್ಷಣೆಗೆಂದೇ ಹಿಂದುಳಿದ ವರ್ಗದವರಿಗೆ 'ಜೈ ಶ್ರೀರಾಮ'ದಂತಹ ಘೋಷವಾಕ್ಯಗಳನ್ನು ನೀಡಿ ಅವರನ್ನು ಮುಂದೆ ಬಿಡಬೇಕು. ಮಾತ್ರವಲ್ಲ ಗಾಯತ್ರಿ ಯಜ್ಞದಂತಹ ಧಾರ್ಮಿಕ ಕ್ರಿಯೆಗಳನ್ನು ಅವರಲ್ಲಿ ಪ್ರಚುರಪಡಿಸಬೇಕು.

11. ಈ ದೇಶದಲ್ಲಿ ಅಂಬೇಡ್ಕರ್‌ವಾದ ಬೆಳೆದರೆ ಬ್ರಾಹ್ಮಣರು ನಾಶವಾದಂತೆಯೇ. ಆಗ ಆರ್‌ಎಸ್‌ಎಸ್‌ನ ಡಾ. ಹೆಗಡೆವಾರ್, ಗೋಳ್ವಾಲ್ಕರ್ ಗುರೂಜಿ ತರಹದ ಮಹಾನ್ ನಾಯಕರ ಹೆಸರನ್ನು ಉಚ್ಚರಿಸಲೂ ಯಾರೂ ಇರುವುದಿಲ್ಲ, ಆದ್ದರಿಂದ ಅವರ ಎಲ್ಲ ಸಂಘಟನೆಗಳ ಒಳಹೊಕ್ಕು ಗೌಪ್ಯವಾಗಿ ಮಾಹಿತಿ ಸಂಗ್ರಹಿಸಿ ಅವರ ಯಾವ ಯೋಜನೆಯೂ ಯಶಸ್ವಿಯಾಗದಂತೆ ನೋಡಿಕೊಳ್ಳಬೇಕು.

12. ಬ್ರಾಹ್ಮಣ್ಯವನ್ನು ಜೀವಂತವಾಗಿ ಉಳಿಸಬೇಕಿದ್ದರೆ ಹಿಂದುಳಿದ ವರ್ಗಗಳ ಯುವಕರಲ್ಲಿ ಧಾರ್ಮಿಕ ಭಾವನೆಗಳನ್ನು ಕೆರಳಿಸಬೇಕು. ಹಾಗೆ ಮಾಡಿದಾಗ ಅವರು ಕೋಮುಗಲಭೆಗಳಂತಹ ಕೃತ್ಯಗಳಲ್ಲಿ ತೊಡಗುತ್ತಾರೆ. ಆಗ ಬ್ರಾಹ್ಮಣರ ಮಕ್ಕಳೇ ರಾಜಕೀಯ ಮತ್ತು ಆಡಳಿತದಲ್ಲಿ ನಾಯಕರಾಗಿ ಮುಂದುವರೆಯುತ್ತಾರೆ.

13. ಬ್ರಾಹ್ಮಣ್ಯವನ್ನು ಉಳಿಸಲು ಬ್ರಾಹ್ಮಣ ಸ್ತ್ರೀಯರು ಮುಂದೆ ಬಂದು ತ್ಯಾಗ ಮಾಡಬೇಕಾಗುತ್ತದೆ. ಹಾಗೆ ತ್ಯಾಗ ಮಾಡುವ ಬ್ರಾಹ್ಮಣ ಮಹಿಳೆಯರಿಗೆ ಮನು ಸ್ಮೃತಿಯ ಪ್ರಕಾರ 'ಪುಣ್ಯ' ಲಭ್ಯವಾಗುತ್ತದೆ.

ಸ್ನೇಹಿತರೆ, ಇದೆಲ್ಲವನ್ನು ಗೌಪ್ಯವಾಗಿ ಜಾರಿಗೆ ತರಬೇಕು. ಯಾವುದೇ ಕಾರಣಕ್ಕೂ ಈ ಸುತ್ತೋಲೆ ಕೆಳಜಾತಿಯ ವರ ಕೈಗೆ ಸೇರದಂತೆ ಎಚ್ಚರ ವಹಿಸಬೇಕು. ಇದು ಗೌಪ್ಯ ಸುತ್ತೋಲೆ.

ಅಧ್ಯಕ್ಷ,
ಬ್ರಾಹ್ಮಣ ಸಮಾಜ
ಜಿಲ್ಲಾ ಸಮಿತಿ
ಬಾಲಘಾಟ

ಈ ಕರಪತ್ರ ಎಷ್ಟು ನಿಜವಾಗಿದ್ದಿರಬಹುದು ಎಂಬುದರ ಬಗ್ಗೆ ಹಲವಾರು ವರ್ಷಗಳಿಂದ ಚರ್ಚೆಯಾಗುತ್ತಿದೆ. ಒಂದು ಮೂಲದ ಪ್ರಕಾರ ಅಂಬೇಡ್ಕರ್‌ವಾದಿಯಾಗಿದ್ದ ಮತ್ತು ಕಾನ್ಶೀರಾಂ ಅವರ ಒಡನಾಡಿ ಯಾಗಿದ್ದ ಡಿ.ಕೆ. ಕಹಪರ್ಡೆಯವರು ತಮ್ಮ ಸಂಪಾದಕತ್ವದ 'ಮೂಲನಿವಾಸಿ ಟೈಮ್ಸ್' ಪತ್ರಿಕೆಯ ಮೊದಲನೇ ಸಂಚಿಕೆ ಜನವರಿ 1995 ರಲ್ಲಿ ಇದನ್ನು ಪ್ರಕಟಿಸಿದ್ದರು. ಆದರೆ ಆ ಸಂಚಿಕೆಯ ಪ್ರತಿ ಈಗ ಯಾರ ಕೈಯಲ್ಲೂ ಇಲ್ಲ. ಮಾತ್ರವಲ್ಲ, ದಿವಂಗತ ಕಹಪರ್ಡೆ ಯವರಿಗೆ ಈ ಸುತ್ತೋಲೆ ಹೇಗೆ ಸಿಕ್ಕಿತು ಎಂಬುದೂ ಯಾರಿಗೂ ಗೊತ್ತಿಲ್ಲ.

ದೈವಿನಾಯಗಂ ಎಂಬುವವರು ಇದೇ ಕರಪತ್ರವನ್ನು ತಮಿಳಿಗೆ ಅನುವಾದಿಸಿ 'ದ್ರಾವಿಡ ಸಮಯಂ' ಎಂಬ ಪತ್ರಿಕೆಯ ಜುಲೈ 1995 ರ ಸಂಚಿಕೆಯಲ್ಲಿ ಮುದ್ರಿಸಿದ್ದರು. ಆದರೆ ದೈವಿನಾಯಗಂ ಅವರು ಕ್ರೈಸ್ತ ಧರ್ಮೀಯ ರಾಗಿದ್ದರಿಂದ, ಇದು ಬ್ರಾಹ್ಮಣ ಸಮುದಾಯದ ವಿರುದ್ಧ ಕ್ರೈಸ್ತ ಮಿಷನರಿಯವರು ಹೂಡಿರುವ ಹುನ್ನಾರ ಎಂದೇ ಬಹಳಷ್ಟು ಜನ ತೀರ್ಮಾನಿಸಿದ್ದರು.

ಇವತ್ತು ಹಿಂದೂತ್ವ ಎಂಬುದು ಬ್ರಾಹ್ಮಣತ್ವದ ಆಧುನಿಕ ರೂಪ; ಮೇಲುಜಾತಿಯ ಮುಂದಾಳತ್ವವನ್ನು ಕಾಪಾಡಿಕೊಳ್ಳಲು ಶೂದ್ರ, ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಜಾತಿ/ಪಂಗಡಗಳನ್ನು 'ಕಲ್ಪಿತ' ಶತ್ರುಗಳಾದ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಎತ್ತಿಕಟ್ಟುವ ಸಿದ್ಧಾಂತ; ಸರ್ವ 'ಹಿಂದೂ'ಗಳ ರಕ್ಷಣೆಗೆ ನಿಂತಿರುವಂತೆ ಪೋಸ್ ಕೊಡುತ್ತಿದ್ದರೂ ತನ್ನ ಅಂತರಾಳದಲ್ಲಿ ಮೇಲುಜಾತಿಗಳ ಹಿತಾಸಕ್ತಿಗಳನ್ನು ಮಾತ್ರ ಇಟ್ಟುಕೊಂಡಿರುವ ಗುಂಪು.

ನನಗಂತೂ ಈ 'ಗೌಪ್ಯ ಸುತ್ತೋಲೆ' ಕೆಲ ಕಿಡಿಗೇಡಿಗಳ ಸೃಷ್ಟಿ ಎಂದೇ ಅನ್ನಿಸುತ್ತಿದೆ. ಆದರೆ ಪ್ರಸ್ತುತ ವಿದ್ಯಮಾನಗಳನ್ನು ಗಮನಿಸಿದರೆ ಆ ಕಿಡಿಗೇಡಿಗಳು ಸಂಘ ಪರಿವಾರವನ್ನೇ ಪರಕಾಯ ಪ್ರವೇಶ ಮಾಡಿ ಇದನ್ನು ಸೃಷ್ಟಿಸಿರಬೇಕು ಎಂದೂ ಅನ್ನಿಸುತ್ತದೆ.


ಬ್ರಾಹ್ಮಣ ಜಾತಿಗೆ ಹುಟ್ಟಿರುವವರೆಲ್ಲ ಹಿಂದೂವಾದಿಗಳಲ್ಲ; 'ಬ್ರಾಹ್ಮಣ ಸಮಾಜ' ಅಥವಾ ಅದರ ವಿರೋಧಿಗಳು ಸೃಷ್ಟಿಸಿರುವ ಈ ಗೌಪ್ಯ ಸುತ್ತೋಲೆಯಲ್ಲಿನ 'ಆಶೆ ಮತ್ತು ಗುರಿ'ಗಳನ್ನು ಹೊಂದಿರುವವರಲ್ಲ. ನಮ್ಮ ಸುತ್ತಲೂ ಬ್ರಾಹ್ಮಣರಾಗಿ ಹುಟ್ಟಿದ್ದರೂ ಪ್ರಗತಿಪರವಾಗಿ, ಸಮಾನ ಸಮಾಜಕ್ಕಾಗಿ, ಜಾತ್ಯತೀತ ವ್ಯವಸ್ಥೆಗಾಗಿ ಹಂಬಲಿಸುವ ಸಹಸ್ರಾರು ಜನರಿದ್ದಾರೆ. ಅದನ್ನು ಗುರುತಿಸದೆ ಅವರನ್ನೆಲ್ಲ ಬ್ರಾಹ್ಮಣಶಾಹಿಗಳು ಎಂದು ಕರೆಯುವುದು ಪೆದ್ದುತನವಾಗುತ್ತದಲ್ಲದೆ, ಬ್ರಾಹ್ಮಣ ದ್ವೇಷಿ ಕ್ರಿಯೆಯೂ ಆಗುತ್ತದೆ. ನಾವು ಖಂಡಿತವಾಗಿಯೂ ಬ್ರಾಹ್ಮಣ ದ್ವೇಷಿಗಳಲ್ಲ. ಆದರೆ ಇವತ್ತು ಬಹಳಷ್ಟು ಶೂದ್ರ, ದಲಿತ ಮತ್ತು ಹಿಂದುಳಿದ ವರ್ಗದ ಜನರೇ ಹಿಂದೂತ್ವದ ಅಮಲನ್ನು ಏರಿಸಿಕೊಂಡು ಕೆಲವೇ ಕೆಲ ಬ್ರಾಹ್ಮಣರು ಪ್ರತಿಪಾದಿಸುವ ಆ ಸಿದ್ಧಾಂತವನ್ನು ಬೆಂಬಲಿಸುತ್ತಾ ಬ್ರಾಹ್ಮಣಶಾಹಿ ವ್ಯವಸ್ಥೆಯನ್ನು ಕಾಪಾಡಲು ಮುಂದಾಗಿರುವುದನ್ನು ಖಂಡಿತವಾಗಿಯೂ ವಿರೋಧಿಸುತ್ತೇವೆ.

ಈ ಕರಪತ್ರ ಒಂದು ಕೃತಕ ಸೃಷ್ಟಿಯೇ ಆಗಿರಬಹುದು. ಆದರೆ ಅದರಲ್ಲಿರುವ ಅಂಶಗಳೆಲ್ಲಾ ವಾಸ್ತವವಾದವುಗಳೇ ಅಲ್ಲವೇ? ■

ಪ್ರಕ್ಷುಬ್ಧ ಪ್ರಜಾವಾಣಿ
ಿಲಕ ಹೋಯ್ತು
ಾಂತಿ ಬಂತು

...ಕರ್ನಾಟಕದ ಸಮಸ್ತ ಜನಕೋಟಿಗೂ ಇದೊಂದು ...ಸುದ್ದಿ.

...ಪ್ರಜಾವಾಣಿ ಮತ್ತೆ ಜನತೆಯ/ಓದುಗರ ...ಕೆಯಾಗುತ್ತಿದೆ. ಕಳೆದ ಎರಡು ವರ್ಷಗಳಿಂದ ಅದರ ...ಯ ಮೇಲೆ ತೂಗುತ್ತಿದ್ದ ಕೇಸರಿ ತಿಲಕ ...ಗಿಹೋಗುವ ಸಾಧ್ಯತೆ ಈಗ ...ದುಬರುತ್ತಿದೆ. ಆತ್ಮವಿಶ್ವಾಸ ...ದುಕೊಂಡಂತೆ ವರ್ತಿಸುತ್ತಿದ್ದ ಸಂಪಾದಕ ...ಕ್ ಕುಮಾರ್ ಬದಲಾಗಿ ಸಮಚಿತ್ತದ ...ತಕುಮಾರ್ ಮತ್ತೆ ಸಂಪಾದಕರಾಗಿ ...ದಿದ್ದಾರೆ. ಅತೀ ಮುಖ್ಯವಾಗಿ ಹಲವಾರು ...ಗಳಿಂದಲೂ ಪತ್ರಿಕೋದ್ಯಮದ ಘನತೆ, ...ಭೀರ್ಯ ಹಾಗೂ ವಿಶ್ವಾಸಾರ್ಹತೆಗೆ ...ಕೇತವಾಗಿದ್ದ ಪ್ರಜಾವಾಣಿ ಕೆಲ ...ಗಳುಗಳಿಂದ ಪ್ರಕ್ಷುಬ್ಧತೆಗೆ ಈಡಾದಂತೆ ...ರ್ತಿಸುತ್ತಿತ್ತು, ಗಂಭೀರ ಓದುಗರು ...ರ್ಶೆ, ಟೀಕೆ, ಹೊಣೆಗಾರಿಕೆಯನ್ನು ...ಸುತ್ತಿದ್ದಾಗ ಪ್ರಜಾವಾಣಿ ಬೇರೊಂದು ದಿಕ್ಕಿನತ್ತ ...ರಳುತ್ತಿತ್ತು, ಪತ್ರಿಕೆಯ ಸಂಪಾದಕೀಯ, ವಾಚಕರ ವಾಣಿ ಹೊರತುಪಡಿಸಿದರೆ ವಿಜಯ ಕರ್ನಾಟಕ ಮತ್ತು ಉದಯವಾಣಿಗೂ ಪ್ರಜಾವಾಣಿಗೂ ವ್ಯತ್ಯಾಸವೇ ಇಲ್ಲದಷ್ಟು ಬದಲಾವಣೆಯನ್ನು ಪ್ರಜಾವಾಣಿ ಮೇಲೆ ಹೇರಲಾಗಿತ್ತು, ಇದೆಲ್ಲದರಿಂದ ಪ್ರಜಾವಾಣಿಗೆ ಅದೇನು ಲಾಭವಾಯಿತೊ ಗೊತ್ತಿಲ್ಲ, ಆದರೆ ಅದು ತನ್ನ ಲಕ್ಷಾಂತರ ಓದುಗರ ನಂಬಿಕೆ ಕಳೆದುಕೊಳ್ಳುವ ಹಂತಕ್ಕೆ ಬಂದು ತಲುಪಿತ್ತು. ಆದರೀಗ ಮತ್ತೆ ಭರವಸೆಯಿಡಬಹುದಾದ ಗಳಿಗೆ ಬಂದಂತಿದೆ.



ಇದು ಕೇವಲ ತಿಲಕ್ ಕುಮಾರ್ ಹೋಗಿ ಶಾಂತ ಕುಮಾರ್ ಬಂದಿದ್ದಾರೆಂಬ ಏಕೈಕ ಕಾರಣಕ್ಕೆ ಇಟ್ಟುಕೊಳ್ಳಬೇಕಾದ ನಿರೀಕ್ಷೆಯೇನಲ್ಲ, ಪ್ರಜಾವಾಣಿಯಲ್ಲಿ ರಾರಾಜಿಸುತ್ತಿದ್ದ ಕೇಸರಿ ತಿಲಕಕ್ಕೆ ಆಗ ಸಂಪಾದಕರಾಗಿದ್ದ ತಿಲಕ್‌ಕುಮಾರ್ ಒಬ್ಬರೇ ಹೊಣೆಗಾರರೂ ಅಲ್ಲ, ಹೊಸ ಕ್ಯಾಪ್ಟನ್ ಶಾಂತಕುಮಾರ್‌ಗೆ ಇದು ಅರ್ಥವಾಗಬೇಕಿದೆ. ಪ್ರಜಾವಾಣಿಯ ಇತಿಹಾಸದಲ್ಲೇ ಅತ್ಯಂತ ಮಿಂಚಿದ ಪತ್ರಕರ್ತನೆಂದರೆ ಅದು ಆರ್.ಪಿ. ಜಗದೀಶ್. ಆದರೆ ಮೂರು ದಶಕಗಳ ಕಾಲ ಒಂದು ಸೆಕ್ಯುಲರ್ ಪತ್ರಿಕೆಯಲ್ಲಿದ್ದರೂ ಕೊನೆಗೂ ಆತ ಕೋಮುವಾದಿಗಳ ಪಾದಕ್ಕೆ ಬಿದ್ದು ತಮ್ಮ ಜನ್ಮ ಪಾವನ ಮಾಡಿಕೊಂಡರು. ನಂತರ ಪತ್ರಿಕೆಯ ಮುಖ್ಯ ಸ್ಥಾನಕ್ಕೆ ಬಂದಿರುವ ಪದ್ಮರಾಜ ದಂಡಾವತಿ ಯಾರನ್ನೂ ವಿರೋಧಿಸಲಾಗದೆ, ಯಾವ ನಿಲುವನ್ನೂ ತೆಗೆದುಕೊಳ್ಳಲಾಗದ ಪತ್ರಿಕೆಯ ವ್ಯಕ್ತಿತ್ವದ ನಾಶಕ್ಕೆ ಗಣನೀಯ ಕೊಡುಗೆ ಕೊಟ್ಟಿದ್ದಾರೆ. ಮೇಲುನೋಟಕ್ಕೇ ಅನ್ಯಾಯ ದುರಾಚಾರ ಎಂದು ಕಂಡುಬರುತ್ತಿದ್ದ ಚಿದ್ವಿಗಳ ಎಷ್ಟೋ ದುಷ್ಕೃತ್ಯಗಳನ್ನು ಪ್ರಜಾವಾಣಿ ಈ ಅವಧಿಯಲ್ಲಿ ಮರೆಮಾಚಿತ್ತು. ತೀರಾ ಇತ್ತೀಚಿನ ಉದಾಹರಣೆ ಹೇಳಬೇಕೆಂದರೆ ಶ್ರೀರಾಮ ಸೇನೆಯವರ ಮಂಗಳೂರು ಪಬ್ ದಾಳಿ ಘಟನೆ. ಮಾರ್ವಾಡಿ ಮಾಲೀಕತ್ವದ ಟೈಮ್ಸ್ ಆಫ್ ಇಂಡಿಯಾ ಕೂಡ ಇದನ್ನು ಖಂಡಿಸಿತು. ಆದರೆ ಪ್ರಜಾವಾಣಿಯ ನಿಲುವು ಮಾತ್ರ ಓದುಗನಿಗೆ ಸ್ಪಷ್ಟವಾಗಿ ತಿಳಿಯಲಿಲ್ಲ. ಆಮೇಲೆ ಮುತಾಲಿಕ್ 'ಪ್ರೇಮಿಗಳ ದಿನ'ಕ್ಕೆ ಬೆದರಿಕೆ ಹಾಕಿ ಎಲ್ಲರಿಂದಲೂ ಛೀಮಾರಿ ಹಾಕಿಸಿಕೊಂಡರೆ ಪ್ರಜಾವಾಣಿ ಮಾತ್ರ ಮುತಾಲಿಕನ ಮಾನ ರಕ್ಷಣೆಗೆ ಇಳಿಯಿತು. ಮುಖಪುಟದಲ್ಲೇ ಅವನ ನಿಲುವು ಅನಿಸಿಕೆಗಳನ್ನು ಎರಡೆರಡು ಬಾರಿ ಪ್ರಕಟಿಸಿ 'ಪಿಂಕ್ ಚಡ್ಡಿ' ಚಳವಳಿಗೆ ತಾನೂ ಗುರಿಯಾಗುವ ಹಂತದಲ್ಲಿ ನಿಂತಿತ್ತು. ಕರಾವಳಿ ಅಲೆಯ ಬಿ.ವಿ. ಸೀತಾರಾಂಗೆ ಬಿಜೆಪಿ ಸರ್ಕಾರ ಹಾಗೂ ಪೊಲೀಸರು ಕಿರುಕುಳ ಕೊಟ್ಟಾಗಲೂ ಅದನ್ನು ತಪ್ಪೆಂದು ಹೇಳಲಿಲ್ಲ. ಆ ಕುರಿತ ಸುದ್ದಿಗಳನ್ನು ಪ್ರಕಟಿಸಲಿಲ್ಲ. ಇನ್ನು ಕ್ರಿಶ್ಚಿಯನ್ನರ ಮೇಲಿನ ದಾಳಿ, ಅಮಾಯಕ ಮುಸ್ಲಿಮರ ಮೇಲೆ ಭಯೋತ್ಪಾದಕರೆಂಬ ಆರೋಪಗಳು ನಡೆಯುತ್ತಿದ್ದಾಗಲೂ ಪ್ರಜಾವಾಣಿ ಸತ್ಯ ಹಾಗೂ ವಾಸ್ತವದಿಂದ ದೂರವೇ ಉಳಿದಿತ್ತು.

ಇದೆಂಥ ಪತ್ರಿಕೋದ್ಯಮ?

ಇದೆಲ್ಲಾ ಯಾರ ಕೈವಾಡ?

ಶಾಂತಕುಮಾರ್ ಈ ಪ್ರಶ್ನೆಗಳಿಗೆಲ್ಲಾ ಉತ್ತರ ಕಂಡುಕೊಂಡಲ್ಲಿ ಮಾತ್ರ ಪತ್ರಿಕೆ ಮತ್ತೆ ಓದುಗರ ವಿಶ್ವಾಸ ಗಳಿಸಲು ಸಾಧ್ಯ. ಕೋಮುವಾದಿಗಳ ಸೇವೆ ಮಾಡಲು ವಿಜಯ ಕರ್ನಾಟಕ, ಉದಯವಾಣಿಗಳು ಹೇಗೂ ಇವೆ. ಪ್ರಜಾವಾಣಿ ಅದೇ ಹಾದಿ ತುಳಿದರೆ ಅದು 2 ನೇ ವಿಜಯ ಕರ್ನಾಟಕ ಅಥವಾ ನಾಲ್ಕನೇ ಹೊಸ ದಿಗಂತ ಆಗುತ್ತದೆ ಹೊರತು ನಂ.1 ಪತ್ರಿಕೆ ಆಗುವುದಿಲ್ಲ. ಆದರೆ ಹಾಗೆ ಮಾಡುವ ಮೂಲಕ ತನ್ನ ನಿಷ್ಠಾವಂತ ಓದುಗರನ್ನು ಕಳೆದುಕೊಳ್ಳುತ್ತದೆ.

ಇನ್ನೊಂದು ವಿಚಾರ: ಕರ್ನಾಟಕದ ಗಂಭೀರ ಓದುಗರಿಗೆ 'ಪ್ರಜಾವಾಣಿ' ಬೇಸರ ತರಿಸಿದರೆ ಅವರಿಗೆ ವಾರ್ತಾ ಭಾರತಿ, ಆಂದೋಲನ ಪತ್ರಿಕೆಗಳಿವೆ. ಆದರೆ ಪ್ರಜಾವಾಣಿ ತನ್ನ ಖಾಯಂ ಓದುಗನ ಬಗ್ಗೆ ಅಸಡ್ಡೆ ತೋರಿಸಿದರೆ ಅದಕ್ಕೆ ಬೇರೆ ಓದುಗನಿರುವುದಿಲ್ಲ.

ನೂತನ ಸಂಪಾದಕ ಶಾಂತಕುಮಾರ್‌ಗೆ ಶುಭಾಶಯಗಳನ್ನು ಹೇಳುತ್ತಾ ಈ ಸೂಕ್ಷ್ಮವನ್ನು ಅವರು ಅರ್ಥಮಾಡಿಕೊಳ್ಳಬಲ್ಲರೆಂದು ಆಶಿಸಬಹುದು.

ಸದ್ಯಕ್ಕೆ ತಿಲಕ್‌ಕುಮಾರ್ ಡೆಕ್ಕನ್ ಹೆರಾಲ್ಡ್ ಮತ್ತು ಸುಧಾ ನೋಡಿಕೊಳ್ಳುವಂತೆಯೂ ಹಾಗೂ ಶಾಂತಕುಮಾರ್ ಪ್ರಜಾವಾಣಿ ಮತ್ತು ಮಯೂರದ ಉಸ್ತುವಾರಿ ವಹಿಸಿಕೊಳ್ಳುವುದೆಂದೂ ತೀರ್ಮಾನಿಸಿಕೊಂಡಿದ್ದಾರೆ.

ಪ್ರಜಾವಾಣಿ ಆಫೀಸ್‌ನಲ್ಲಿ ಈಗ ನಿತ್ಯ ಬೆಳಗ್ಗೆ ಎಡಿಟೋರಿಯಲ್, ಮೀಟಿಂಗ್‌ಗಳಾಗುತ್ತಿವೆ. ಸರಿ-ತಪ್ಪುಗಳ ಬಗ್ಗೆ ಮುಕ್ತ ಚರ್ಚೆ ಶುರುವಾಗಿದೆ.

ವರದಿಗಾರರು ಮತ್ತು ಇತರೆ ಸಂಪಾದಕೀಯ ಸಿಬ್ಬಂದಿಯ ಮುಖದಲ್ಲಿ ನಿರಾಶೆ-ಹತಾಶೆಗಳೆಲ್ಲಾ ಕರಗಿ ಹೊಸ ಹುಮ್ಮಸ್ಸು ಕಾಣಿಸುತ್ತಿದೆ.

ಶಾಂತಕುಮಾರ್‌ರಂತಹ ಆರೋಗ್ಯಕರ ವ್ಯಕ್ತಿತ್ವದ, ಒಬ್ಬ working editor ಅಲ್ಲಿ ಮತ್ತೆ ಕಾಣಿಸಿಕೊಂಡಿರುವುದೇ ಇದಕ್ಕೆ ಕಾರಣ.

ಗುಡ್‌ಲಕ್ ಮಿ. ಶಾಂತಕುಮಾರ್. ■


ಪವನ್ ಕುಮಾರ್ ಚಾಮ್ಲಿಂಗ್

ಸಿದ್ಧಾಂತಗಳಿಗಿಲ್ಲಿ ಬೆಲೆಯಿದೆಯೆ?

ಭಾರತದಲ್ಲಿರೋ ಯಾವುದೇ ರಾಜಕಾರಣಿಯನ್ನು ತೆಗೆದುಕೊಳ್ಳಿ, ಯಾವುದೇ ರಾಜಕೀಯ ಪಕ್ಷವನ್ನು ತೆಗೆದುಕೊಳ್ಳಿ. ಎಲ್ಲಾ ತಮ್ಮದೇ ಆದ ತತ್ವ-ಸಿದ್ಧಾಂತಗಳ ಬಗ್ಗೆ ಬಡಾಯಿ ಕೊಚ್ಚುತ್ತವೆ. ಆದರೆ, ಅಧಿಕಾರದ ವಿಚಾರಕ್ಕೆ ಬಂದರೆ ಅವನ್ನೆಲ್ಲಾ ಗಾಳಿಗೆ ತೂರಿ ಕುರ್ಚಿಯೇರಲು ಏನೇನು ಬೇಕೋ ಅದನ್ನೇ ಮಾಡುತ್ತವೆ; ದಶಕಗಳಿಂದ ನಾಯಿಗಳಂತೆ ಪರಸ್ಪರ ಕಚ್ಚಾಡಿಕೊಂಡಿದ್ದವರೂ ಕೂಡ ದಿಢೀರನೆ ಪರಸ್ಪರ ತಬ್ಬಿಕೊಂಡು ಮುತ್ತಿಡಲಾರಂಭಿಸಿಬಿಡುತ್ತಾರೆ. ಇದು ನಮ್ಮ ಭಾರತೀಯ ಪ್ರಜಾಪ್ರಭುತ್ವದ ಟಿಪಿಕಲ್ ಸ್ವಭಾವ.


ಇತ್ತೀಚಿನ ಉದಾಹರಣೆಯನ್ನೇ ನೋಡಿ. ಸಿಕ್ಕಿಮ್‌ನಲ್ಲಿ ಸ್ಥಳೀಯ ಪಕ್ಷವಾದ ಸಿಕ್ಕಿಮ್ ಡೆಮಾಕ್ರಟಿಕ್ ಫ್ರಂಟ್ ಮತ್ತದರ ನಾಯಕ ಮುಖ್ಯಮಂತ್ರಿ ಪವನ್ ಕುಮಾರ್ ಚಾಮ್ಲಿಂಗ್ ಅವರನ್ನು ಬರಲಿರುವ ಚುನಾವಣೆಯಲ್ಲಿ ತುಳಿಯುವುದಕ್ಕೆ ಬಿಜೆಪಿ ಮತ್ತು ಕಾಂಗ್ರೆಸ್‌ನಂತ ಹಾವು-ಮುಂಗುಸಿಗಳೂ ಒಗ್ಗಟ್ಟಾಗಿಬಿಟ್ಟಿವೆ. ಮಾತ್ರವಲ್ಲ, ಸಿಕ್ಕಿಮ್ ಹಿಮಾಲಿ ರಾಜ್ಯ ಪರಿಷದ್ ಪಕ್ಷ ಮತ್ತು ಸಿಕ್ಕಿಂ ಗೋರ್ಖಾ ಪ್ರಜಾತಾಂತ್ರಿಕ ಪಕ್ಷ ಎಂಬ ಎರಡು ಸ್ಥಳೀಯ ಪಕ್ಷಗಳನ್ನೂ ತಮ್ಮ ಜೊತೆಗೆ ಸೇರಿಸಿಕೊಂಡಿವೆ. ಈ ಒಕ್ಕೂಟಕ್ಕೆ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಯುಡಿಎಫ್) ಎಂದು ಹೆಸರಿಡಲಾಗಿದೆ.

ಎಸ್‌ಡಿಎಫ್‌ನಂಥ ಒಂದು ಸ್ಥಳೀಯ ಪಾರ್ಟಿಯನ್ನು ಮಣ್ಣು ಮುಕ್ಕಿಸುವುದಕ್ಕೆ ಬಿಜೆಪಿ-ಕಾಂಗ್ರೆಸ್‌ನಂಥ ರಾಷ್ಟ್ರೀಯ ತಿಮಿಂಗಿಲಗಳು, ದಶಕಗಳಿಂದ ಪರಸ್ಪರ ಕಚ್ಚಾಡುತ್ತಿರುವ ಬದ್ಧ ವೈರಿಗಳು ಯಾಕೆ ಒಂದಾಗುತ್ತಿವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಕಳೆದ ನಾಲ್ಕು ವಿಧಾನಸಭಾ ಚುನಾವಣೆಗಳ ಫಲಿತಾಂಶಗಳನ್ನು ಒಮ್ಮೆ ವಿಶ್ಲೇಷಿಸಬೇಕು.

ಸಿಕ್ಕಿಂ ವಿಧಾನಸಭೆಯಲ್ಲಿರುವುದು ಒಟ್ಟು 32 ಸ್ಥಾನಗಳು. 1985ರ ಚುನಾವಣೆಯಲ್ಲಿ ಸಿಕ್ಕಿಮ್ ಸಂಗ್ರಾಮ ಸಮಿತಿ ಎಂಬ ಸ್ಥಳೀಯ ಪಕ್ಷ ಅಷ್ಟೂ ಸೀಟುಗಳನ್ನು ಗೆದ್ದುಕೊಂಡಿತ್ತು, ಕಾಂಗ್ರೆಸ್ 31 ಸ್ಥಾನಗಳಲ್ಲಿ ಸ್ಪರ್ಧಿಸಿ ಅಷ್ಟೂ ಕ್ಷೇತ್ರಗಳಲ್ಲಿ ಠೇವಣಿ ಕಳೆದುಕೊಂಡಿತ್ತು! 1994ರ ಚುನಾವಣೆಯಲ್ಲಿ ಎಸ್‌ಡಿಎಫ್ ಮತ್ತು ಎಸ್‌ಎಸ್‌ಪಿ ಪಕ್ಷಗಳು 29 ಸ್ಥಾನಗಳಲ್ಲಿ ಗೆದ್ದರೆ ಬಿಜೆಪಿ ಸ್ಪರ್ಧಿಸಿದ್ದ ಮೂರೂ ಸ್ಥಾನಗಳಲ್ಲಿ ಠೇವಣಿ ಕಳೆದುಕೊಂಡಿತು. ಸಿಪಿಎಂ ತಾನು ಸ್ಪರ್ಧಿಸಿದ್ದ ಎರಡೂ ಸ್ಥಾನಗಳಲ್ಲಿ ಠೇವಣಿ ಕಳೆದುಕೊಂಡಿತು. ಇನ್ನು ಕಾಂಗ್ರೆಸ್ 31 ಸ್ಥಾನಗಳಲ್ಲಿ ಸ್ಪರ್ಧಿಸಿ ಎರಡರಲ್ಲಿ ಗೆದ್ದು 17 ಕ್ಷೇತ್ರಗಳಲ್ಲಿ ಠೇವಣಿ ಕಳೆದುಕೊಂಡಿತ್ತು. 1999ರ ಚುನಾವಣೆಯಲ್ಲಿ ಎಸ್‌ಡಿಎಫ್ 28 ಸ್ಥಾನಗಳನ್ನು ಗೆದ್ದರೆ ಕಾಂಗ್ರೆಸ್ 28 ಸ್ಥಾನಗಳಲ್ಲಿ ಠೇವಣಿ ಕಳೆದುಕೊಂಡಿತ್ತು, ಇನ್ನು ಕಳೆದ 2004 ಚುನಾವಣೆಯಲ್ಲಿ ಎಸ್‌ಡಿಎಫ್ 31 ಸ್ಥಾನಗಳಲ್ಲಿ ಗೆದ್ದರೆ ಕಾಂಗ್ರೆಸ್ ಕೇವಲ ಒಂದೇ ಒಂದು ಸ್ಥಾನ ಗಳಿಸಿತ್ತು.

ಈ ಅಂಕಿಅಂಶಗಳು ವಿಷದಪಡಿಸುವುದೇನೆಂದರೆ ಸಿಕ್ಕಿಮ್ ರಾಜ್ಯ ಸ್ಥಾಪನೆಯಾದಾಗಿನಿಂದಲೂ ಅಲ್ಲಿ ರಾಷ್ಟ್ರೀಯ ಪಕ್ಷಗಳಿಗೆ ಜನ ನೆಲೆಯೂರಲು ಅವಕಾಶ ಮಾಡಿಕೊಟ್ಟಿಲ್ಲ. ಈ ಹತಾಶೆಯಿಂದಲೇ ಕಾಂಗ್ರೆಸ್-ಬಿಜೆಪಿಯಂಥ ರಾಷ್ಟ್ರೀಯ ಹಾವು-ಮುಂಗುಸಿಗಳು ಒಟ್ಟಾಗಿ ಸ್ಥಳೀಯ ಪಕ್ಷಗಳನ್ನು ಹಣಿಯಲು ಪ್ರಯತ್ನಿಸುತ್ತಿವೆ. ಅವರ ಪರಾಭವದ ದಿವ್ಯ ಚರಿತ್ರೆ ಬರುವ ಚುನಾವಣೆಯಲ್ಲೂ ಮರುಕಳಿಸುವುದರಲ್ಲಿ ಯಾವುದೇ ಅನುಮಾನವಿಲ್ಲ. ಒಂದೇ ಒಂದು ವ್ಯತ್ಯಾಸ ಎಂದರೆ, ಹಿಂದೆಲ್ಲಾ ಒಬ್ಬೊಬ್ಬರೇ ಪ್ರತ್ಯೇಕವಾಗಿ ಮಣ್ಣು ತಿಂದಿದ್ದರು. ಈಗ ಜೊತೆಗೂಡಿ ತಿನ್ನುತ್ತಾರಷ್ಟೆ.

ಜನಾಭಿಪ್ರಾಯ ಗೆದ್ದ ಚಾವೇಜ್! ಸಮಾಜವಾದಕ್ಕೆ ಸಿಕ್ಕ ವಿಜಯ


ಚಾವೇಜ್

ವೆನುಜುಯೆಲಾ ಅಧ್ಯಕ್ಷ ಹುಗೋ ರಫೇಲ್ ಚಾವೇಜ್ ಮೊನ್ನೆ ಫೆಬ್ರವರಿ 15ರಂದು ಜನಾಭಿಪ್ರಾಯ ಸಂಗ್ರಹಣೆಯಲ್ಲಿ (referendum) ಗೆದ್ದಿದ್ದಾರೆ. ವೆನುಜಯೆಲಾದ ಅಧ್ಯಕ್ಷರ ಅಧಿಕಾರಾವಧಿ ಆರು ವರ್ಷಗಳಾಗಿದ್ದು ಅಲ್ಲಿನ ಸಂವಿಧಾನದ ಪ್ರಕಾರ ಒಬ್ಬನೇ ವ್ಯಕ್ತಿ ಸತತವಾಗಿ ಎರಡು ಅವಧಿಗಿಂತ ಹೆಚ್ಚು ಬಾರಿ ಅಧ್ಯಕ್ಷನಾಗಿ ಮುಂದುವರೆಯುವಂತಿಲ್ಲ, ಸಂವಿಧಾನಕ್ಕೆ ತಿದ್ದುಪಡಿ ತರಬೇಕೆಂದರೆ ಜನಾಭಿಪ್ರಾಯ ಸಂಗ್ರಹಿಸಬೇಕು. ಚಾವೇಜ್ ಅವರ ಅಧಿಕಾರಾವಧಿ 2013ಕ್ಕೆ ಕೊನೆಗೊಳ್ಳುವುದಿತ್ತು, ಮೊನ್ನೆ ಚಾವೇಜ್ ಸಂವಿಧಾನಿಕ ಅವಕಾಶವನ್ನು ಬಳಸಿಕೊಂಡು ಅಧ್ಯಕ್ಷರ ಅಧಿಕಾರಾವಧಿಯ ಮಿತಿಯನ್ನು ತೊರೆಯುವ ಕುರಿತಂತೆ ಜನಮತ ಸಂಗ್ರಹಣೆ ನಡೆಸಿ ಗೆದ್ದಿದ್ದಾರೆ. ಈ ತಿದ್ದುಪಡಿಯ ಪ್ರಕಾರ ಚಾವೇಜ್ ಅಧ್ಯಕ್ಷೀಯ ಚುನಾವಣೆಗಳನ್ನು ಗೆಲ್ಲುತ್ತಾ ಹೋದರೆ 2021ರ ತನಕ ಅಧ್ಯಕ್ಷರಾಗಿಯೇ ಮುಂದುವರೆಯಬಹುದು.

ಚಾವೇಜ್‌ಗೆ ಸಿಕ್ಕಿರುವ ವಿಜಯ ವೆನುಜುಯೆಲಾದಲ್ಲಿ ಅವರಿಗಿರುವ ಜನಪ್ರಿಯತೆಯನ್ನು, ಅವರು ಜಾರಿಗೆ ತಂದಿರುವ, ತರುತ್ತಿರುವ ರಾಷ್ಟ್ರೀಯ ಮತ್ತು ವಿದೇಶಾಂಗ ನೀತಿಗಳಿಗಿರುವ ಜನಬೆಂಬಲವನ್ನು ಸೂಚಿಸುತ್ತದೆ.

ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿ ದೇಶಗಳು ನಮ್ಮಲ್ಲಿ ತೊಂಭತ್ತರ ದಶಕದಲ್ಲಿ ತಂದ ಜಾಗತೀಕರಣ ನೀತಿಗಳನ್ನು ಲ್ಯಾಟಿನ್ ಅಮೆರಿಕದಲ್ಲಿ ಎಪ್ಪತ್ತು-ಎಂಭತ್ತರ ದಶಕದಲ್ಲಿಯೇ ಜಾರಿ ಮಾಡಿದ್ದರು. ಪರಿಣಾಮವಾಗಿ, ವೆನುಜುಯೆಲಾವನ್ನು ಒಳಗೊಂಡಂತೆ ಇಡೀ ಲ್ಯಾಟಿನ್ ಅಮೆರಿಕ ಬಡತನ, ನಿರುದ್ಯೋಗ, ಅನಕ್ಷರತೆ, ದಾರಿದ್ರ್ಯಗಳಿಂದ ಬಡಕಲಾಗಿ ಹೋಗಿತ್ತು. ವೆನುಜುಯೆಲಾದಲ್ಲಿ ಅದನ್ನೆಲ್ಲಾ ಮತ್ತೆ ತಿರುವು-ಮುರುವು ಮಾಡಿ ವೆನುಜುಯೆಲಾವನ್ನು ಅಭಿವೃದ್ಧಿಯತ್ತ ಕೊಂಡೊಯ್ದ ಕೀರ್ತಿ ಚಾವೇಜ್‌ಗೆ ಸಲ್ಲಬೇಕು.

ಚಾವೇಜ್ ಮೂಲತಃ ಸಮಾಜವಾದಿ. ಬಡತನ, ನಿರುದ್ಯೋಗ, ಅನಕ್ಷರತೆಗಳಂಥ ಸಾಮಾಜಿಕ ಪಿಡುಗುಗಳನ್ನು ವೆನುಜುಯೆಲಾದ ನೆಲದಿಂದ ಮೂಲೋತ್ಪಾಟನೆ ಮಾಡುವುದಕ್ಕೆ ಅವರು ದೊಡ್ಡ ಮಟ್ಟದಲ್ಲಿ ಜನಾಂದೋಲನಗಳನ್ನು ನಡೆಸಿದ್ದಾರೆ. ಈ ಅಭಿಯಾನಗಳ ಮೂಲಕವೇ ಬಡವರಿಗೆ ಉಚಿತ ವೈದ್ಯಕೀಯ ಸೌಲಭ್ಯ ನೀಡುವುದಕ್ಕಾಗಿ ಸಾವಿರಾರು ಆಸ್ಪತ್ರೆಗಳನ್ನು ಕಟ್ಟಿದ್ದಾರೆ; ಒಂದು ಮಿಲಿಯನ್‌ಗೂ ಹೆಚ್ಚು ಅನಕ್ಷರಸ್ಥ ವಯಸ್ಕರನ್ನು ಶಿಕ್ಷಿತರನ್ನಾಗಿ ಮಾಡಿದ್ದಾರೆ; ಆಹಾರ ಮತ್ತು ವಸತಿ ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದಿದ್ದಾರೆ. 1998 ರಿಂದ 2006ರ ವರೆಗಿನ ಅವಧಿಯಲ್ಲಿ ಶಿಶು ಸಾವಿನ ಪ್ರಮಾಣ ಶೇ.18ಕ್ಕಿಂತ ಕಡಿಮೆಗೆ ಇಳಿದಿದೆ. 2007ರ ಬಜೆಟ್‌ನ ಹೆಚ್ಚೂಕಡಿಮೆ ಅರ್ಧದಷ್ಟನ್ನು ಸಾಮಾಜಿಕ ಅಭಿವೃದ್ಧಿಗಾಗಿಯೇ ಮೀಸಲಿರಿಸಲಾಗಿದೆ. ಚಾವೇಜ್ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಬಡತನ ಮತ್ತು ಕಡುಬಡತನ ಅತ್ಯಂತ ಕಡಿಮೆ ಮಟ್ಟಕ್ಕೆ ಇಳಿದಿದೆ. ಈ ಅಭಿವೃದ್ಧಿಯ ಕಾರಣಕ್ಕಾಗಿಯೇ ಚಾವೇಜ್ ಜನಮನ್ನಣೆ ಪಡೆದಿದ್ದಾರೆ.

ಜನಾಂದೋಲನದ ಮೂಲಕ ವೆನುಜುಯೆಲಾವನ್ನು ಒಂದು ಸಮಾಜವಾದಿ ರಾಷ್ಟ್ರವಾಗಿ ನಿರ್ಮಾಣ ಮಾಡುವುದಕ್ಕೆ ಅವರು ಕೈಗೆತ್ತಿಕೊಂಡಿರುವ ಕಾರ್ಯಕ್ಕೆ ಇನ್ನೂ ಒಂದು ದಶಕ ಬೇಕೆಂದು ಅವರೇ ಹೇಳಿದ್ದಾರೆ. ನಮ್ಮ ದೇಶದಲ್ಲಿ ನಷ್ಟದಲ್ಲಿರುವ ಉದ್ಯಮಗಳನ್ನು 'ನಷ್ಟದಲ್ಲಿವೆ' ಎಂಬ ಕಾರಣ ಕೊಟ್ಟು ಖಾಸಗೀಯವರಿಗೆ ಮಾರಾಟ ಮಾಡುತ್ತಾರೆ, ಲಾಭದಲ್ಲಿರುವ ಉದ್ಯಮಗಳನ್ನು 'ಲಾಭದಲ್ಲಿದ್ದಾಗಲೇ ಕೊಟ್ಟರೆ ಯಾರಾದರೂ ಕೊಂಡುಕೊಳ್ಳುತ್ತಾರೆ, ನಷ್ಟವಾಗಲು ಪ್ರಾರಂಭಿಸಿದರೆ ಖಾಸಗಿಯವರು ಕೊಳ್ಳಲು ಮುಂದೆ ಬರುವುದಿಲ್ಲ' ಎಂಬ ನೆಪವೊಡ್ಡಿ ಮಾರಾಟ ಮಾಡುತ್ತಾರೆ. ಆದರೆ, ಚಾವೇಜ್ ಇದಕ್ಕೆ ತದ್ವಿರುದ್ಧವಾಗಿ ಖಾಸಗಿ ಒಡೆತನದ ಕಂಪನಿಗಳನ್ನು ರಾಷ್ಟ್ರೀಕರಣ ಮಾಡುತ್ತಿದ್ದಾರೆ; ಸಮಾಜ ಮತ್ತು ಆರ್ಥಿಕತೆಯ ಮೇಲೆ ಜನರಿಂದ ಆಯ್ಕೆಯಾದ ಪ್ರಭುತ್ವದ ಹಿಡಿತವಿರುವಂತೆ ರೂಪಿಸುತ್ತಿದ್ದಾರೆ.

ಅಮೆರಿಕದಂಥ ದೈತ್ಯ ಅಮೆರಿಕಕ್ಕೆ ಸೆಡ್ಡು ಹೊಡೆದು, ಅದರ ನಿತ್ಯ ಕಿರುಕುಳಗಳ ನಡುವೆಯೂ ಯಶಸ್ವಿಯಾಗಿ ಅಭಿವೃದ್ಧಿಯೆಡೆಗೆ

ಸಾಗುತ್ತಿರುವ ಫಿಡೆಲ್ ಕ್ಯಾಸ್ಟ್ರೋ ನೇತೃತ್ವದ ಕ್ಯೂಬ ಚಾವೇಜ್‌ಗೆ ಮಾದರಿ. ಚಾವೇಜ್ ಕೂಡ ಸಾಮ್ರಾಜ್ಯಶಾಹಿ ಅಮೆರಿಕಕ್ಕೆ ಸೆಡ್ಡು ಹೊಡೆದು ವೆನುಜುಯೆಲಾದಲ್ಲಿ ಸಮಾಜವಾದವನ್ನು ನಿರ್ಮಾಣ ಮಾಡುತ್ತಿದ್ದಾರೆ. ಹಾಗಾಗಿ ಚಾವೇಜ್‌ಗೆ ಸಿಕ್ಕಿರುವ ಜಯ ಕೇವಲ ಚಾವೇಜ್‌ಗೆ ಸಿಕ್ಕಿರುವ ಜಯವಲ್ಲ; ಅದು ಕ್ರೂರ ಸಾಮ್ರಾಜ್ಯಶಾಹಿ ವ್ಯವಸ್ಥೆಗೆ ಇದಿರಾಗಿ ಸಮಾಜವಾದಕ್ಕೆ ಸಿಕ್ಕಿರುವ ಜಯ. ■


ಸುತ್ತ ಮುತ್ತ

ಕುಮಾರ್ ಬುರಡಿಕಟ್ಟಿ




ಗಂಗಾಜಲ ಕುಡಿಯುವ ದೌರ್ಭಾಗ್ಯ!





ಗಂಗಾನದಿಯಲ್ಲಿ ತೇಲುತ್ತಿರುವ ಹೆಣಗಳು...

ನಮ್ಮ ರಾಜ್ಯದ ಮುಜರಾಯಿ ಮಂತ್ರಿ ಕೃಷ್ಣಯ್ಯ ಶೆಟ್ಟಿ ಈ ಹಿಂದೆ ವೈಕುಂಠ ಏಕಾದಶಿಯಂದು ಸರ್ಕಾರದ ವತಿಯಿಂದ ಲಾಡುಗಳನ್ನು ಹಂಚಿ ಸುದ್ದಿಯಾಗಿದ್ದ. ದೇವಸ್ಥಾನವೊಂದರಲ್ಲಿ ಲಡ್ಡು ಹಂಚುತ್ತಾರೋ, ಹುಗ್ಗಿ ಹಂಚುತ್ತಾರೋ ಅದು ಆಯಾ ದೇವಸ್ಥಾನಕ್ಕೆ ಬಿಟ್ಟ ವಿಚಾರ. ಆದರೆ ಭಾರತದಂತ ಪ್ರಜಾಪ್ರಭುತ್ವದಲ್ಲಿ ಸರ್ಕಾರವೇ ಆ ಕೆಲಸಕ್ಕಿಳಿಯಬಾರದು, ಮಂತ್ರಿಯೊಬ್ಬನಂತೂ ಒಂದು ಧರ್ಮದ ಅರ್ಚಕನಂತೆ ವರ್ತಿಸಬಾರದು ಎಂದು ನಾಡಿನ ಜನ ಕೃಷ್ಣಯ್ಯ ಶೆಟ್ಟಿಗೆ ಉಗಿದಿದ್ದರು. ಆದರೆ ಅಂದು ಜನರ ಎಂಜಲನ್ನು ತನ್ನ ಮುಖದಿಂದ ಒರೆಸಿಕೊಂಡಿದ್ದ ಕೃಷ್ಣಯ್ಯ ಶೆಟ್ಟಿಗೆ ಇನ್ನೂ ಬುದ್ಧಿಬಂದಂತಿಲ್ಲ.




ಕೃಷ್ಣಯ್ಯ ಶೆಟ್ಟಿ ಈಗ ಮತ್ತೊಂದು ಅಂತಹುದೇ ಕೆಲಸಕ್ಕೆ ಕೈ ಹಾಕಿದ್ದಾನೆ. ಮಹಾಶಿವರಾತ್ರಿಯ ದಿನ ಮುಜರಾಯಿ ಇಲಾಖೆಯ ಅಡಿಯಲ್ಲಿ ಬರುವ ರಾಜ್ಯದ ಎಲ್ಲಾ ಶೈವ ದೇವಾಲಯಗಳಲ್ಲಿ ಪವಿತ್ರ 'ಗಂಗಾಜಲ'ವನ್ನು ವಿತರಿಸಲು ಹೊರಟಿದ್ದಾನೆ. ಅಂದು ತಮ್ಮ ದೇಗುಲಗಳಲ್ಲಿ ವಿಶೇಷ ಪೂಜೆ ಮಾಡಬೇಕೆಂದೂ, ಸರ್ಕಾರ ಒದಗಿಸುವ ಗಂಗಾಜಲವನ್ನು ಭಕ್ತರಿಗೆ ಕುಡಿಸಬೇಕೆಂದು ಸಚಿವ ಅರ್ಚಕರಿಗೆ ತಾಕೀತು ಮಾಡಿದ್ದಾನೆ. ಇದಕ್ಕಾಗಿ ಉತ್ತರ ಭಾರತದಲ್ಲಿ ಹರಿಯುವ ಗಂಗಾ ನದಿಯಿಂದ 50,000 ಲೀಟರ್ ನೀರನ್ನು ಹೊತ್ತುಕೊಂಡು ಎರಡು ಟ್ಯಾಂಕರ್‌ಗಳು ಈಗಾಗಲೇ ಬೆಂಗಳೂರು ತಲುಪಿವೆ.

ಗಂಗಾಜಲವೆಂದರೆ ಪವಿತ್ರ, ಪರಿಶುದ್ಧ ಎಂಬ ಕಾಲವೊಂದಿತ್ತು. ಅದನ್ನು ಕುಡಿದರೆ ಮೈಯಲ್ಲಿರುವ ಕಾಯಿಲೆ ಕಸಾಲೆಗಳೆಲ್ಲಾ ವಾಸಿಯಾಗಿ ಮೋಕ್ಷವೂ ಸಿಗುತ್ತದೆಂಬ ಭಾವನೆಯಿತ್ತು. ಆದರೆ ಈಗ ಗಂಗಾಜಲವನ್ನು ಕುಡಿದರೆ ಕಾಯಿಲೆ ಕಸಾಲೆಗಳು ವಾಸಿಯಾಗುವುದಿರಲಿ, ಆರೋಗ್ಯದಿಂದಿರುವ ವ್ಯಕ್ತಿಗೂ ಬರಬಾರದಂಥ ಕಾಯಿಲೆಗಳು ಬಂದು ನರಳುವುದು ಗ್ಯಾರಂಟಿ ಎಂಬಂತಾಗಿದೆ.

ಇತ್ತೀಚೆಗೆ Uttarakhand Environment Conservation and Pollution Control Board (UECPCB) ನಡೆಸಿರುವ ಅಧ್ಯಯನದ ಪ್ರಕಾರ ಗಂಗಾನದಿ ನಮ್ಮ ಊಹೆಗೂ ನಿಲುಕದಷ್ಟು ಮಲಿನವಾಗಿದೆ. ಎಷ್ಟರಮಟ್ಟಿಗೆ ಎಂದರೆ ಕುಡಿಯುವ, ಸ್ನಾನಮಾಡುವ ಮಾತು ಪಕ್ಕಕ್ಕಿರಲಿ, ಅದು ವ್ಯವಸಾಯಕ್ಕೂ ಯೋಗ್ಯವಲ್ಲ ಎಂದು ಈ ಅಧ್ಯಯನ ತಿಳಿಸಿದೆ. ಯಾವುದೇ ನೀರು ಕುಡಿಯಲು ಯೋಗ್ಯವಾಗಿರಬೇಕೆಂದರೆ ಅದರಲ್ಲಿ coliform ಪ್ರಮಾಣ 50ಕ್ಕಿಂತ ಕಡಿಮೆ ಇರಬೇಕು, ಸ್ನಾನಕ್ಕಾದರೆ 500ಕ್ಕಿಂತ ಕಡಿಮೆಯಿರಬೇಕು, ವ್ಯವಸಾಯಕ್ಕಾದರೆ ಅದು 5000ಕ್ಕಿಂತ ಕಡಿಮೆಯಿರಬೇಕು. ಆದರೆ, ಗಂಗಾನದಿಯಲ್ಲಿ ಇದರ ಪ್ರಮಾಣ 5500ಕ್ಕಿಂತ ಜಾಸ್ತಿಯಿದೆ ಎಂದು ಈ ಅಧ್ಯಯನ ತಿಳಿಸಿದೆ.

ಹಿಮಾಲಯದ ಗಂಗೋತ್ರಿ ತಪ್ಪಲಿನಲ್ಲಿ ಹುಟ್ಟುವ ಗಂಗಾನದಿ ಉತ್ತರಖಂಡ, ಉತ್ತರಪ್ರದೇಶ, ಬಿಹಾರ, ಪಶ್ಚಿಮ ಬಂಗಾಳಗಳಲ್ಲಿ ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತದೆ. ಉದ್ದಕ್ಕೂ ಈ ನದಿಯ ಇಕ್ಕೆಲಗಳಲ್ಲಿ ಸ್ಥಾಪನೆಗೊಂಡಿರುವ ಕಾರ್ಖಾನೆಗಳ ತ್ಯಾಜ್ಯವೆಲ್ಲಾ ನೇರವಾಗಿ ಯಾವುದೇ ಸಂಸ್ಕರಣೆಯಿಲ್ಲದೆ ಗಂಗಾನದಿಗೆ ಸೇರುತ್ತದೆ. ಹರಿದ್ವಾರದ ತನಕದ 12 ಮುನಿಸಿಪಲ್ ನಗರಗಳಿಂದ ಪ್ರತಿದಿನ ಒಂಭತ್ತು ಕೋಟಿ ಲೀಟರ್ ಟಾಯ್ಲೆಟ್ ನೀರು ಗಂಗೆಗೆ ಸೇರುತ್ತದೆ! ಇನ್ನು 2510 ಕಿ.ಮೀ. ಉದ್ದದ ಗಂಗಾನದಿಯ ತಟದಲ್ಲಿರುವ ಕಾನ್ಪುರ, ಅಲಹಾಬಾದ್, ವಾರಣಾಸಿ, ಪಾಟ್ನಾ, ಬಾಗಲ್ಪೂರ್ ಮುಂತಾದ 27 ದೊಡ್ಡ ದೊಡ್ಡ ನಗರಗಳಿಂದ ಸೇರುವ ಟಾಯ್ಲೆಟ್ ನೀರನ್ನು ಲೆಕ್ಕ ಹಾಕಿದರೆ ಪ್ರತಿದಿನ ಗಂಗಾನದಿಗೆ ಸೇರುವ ಟಾಯ್ಲೆಟ್ ನೀರಿನ ಪ್ರಮಾಣ 170 ಕೋಟಿ ಲೀಟರ್‌ಗಳು! ಹಿಂದೂಗಳು ಸತ್ತಮೇಲೆ ಅವರ ಚಿತಾಭಸ್ಮವನ್ನು ಗಂಗಾನದಿಯಲ್ಲಿ ಬಿಡುವುದು ಪವಿತ್ರ ಎಂದು ಭಾವಿಸಿರುವುದರಿಂದ ಪ್ರತಿನಿತ್ಯ ಟನ್‌ಗಟ್ಟಲೆ ಹೆಣಗಳ ಬೂದಿ ಗಂಗಾನದಿ ಸೇರುತ್ತಿದೆ. ಜೊತೆಗೆ ಅರ್ಧಂಬರ್ಧ ಸುಟ್ಟ ನೂರಾರು ಶವಗಳೂ ಗಂಗಾನದಿಯಲ್ಲಿ ಪ್ರತೀದಿನ ತೇಲುತ್ತಿರುತ್ತವೆ! ಇದು ಭಗೀರಥ ಭೂಮಿಗೆ ಕರೆತಂದ ಗಂಗೆಯ ಇಂದಿನ ಪರಿಸ್ಥಿತಿ. ಕೃಷ್ಣಯ್ಯ ಶೆಟ್ಟಿಯಂಥ ಮಂತ್ರಿಯ ದೆಸೆಯಿಂದ ಆ ನೀರನ್ನು ಕುಡಿಯಬೇಕಿರುವುದು ಕರ್ನಾಟಕದ ಶೈವಭಕ್ತರ ದುಸ್ಥಿತಿ! ■





ಕೊಚ್ಚೆ ನೀರಿನಿಂದ ಕಲುಷಿತಗೊಂಡಿರುವ ಗಂಗ..

ಮಂಗಳೂರಿನ ದೇಶಭಕ್ತರು!




ಮಂಗಳೂರಿನಲ್ಲಿ ಇತ್ತೀಚೆಗೆ ನಡೆದ ಪಬ್ ದಾಳಿಯ ...ತರ, ಆ ಕುರಿತು ತಮ್ಮ ಪ್ರತಿಕ್ರಿಯೆ ನೀಡುತ್ತ ಕೇಂದ್ರ ...ವೆ ರೇಣುಕಾ ಚೌಧುರಿ, ಮಂಗಳೂರು ತಾಲೀಬಾನೀ ...ಣಾಗೊಂಡಿದ್ದು ಇಲ್ಲಿ ಹಿಂದೂ ಹುಡುಗಿಯರು ...ಸ್ಲಿಮ್ ಹುಡುಗರ ಜೊತೆ ಮಾತಾಡಿದರೆ ಹಲ್ಲೆ ...ಸುತ್ತಾರೆ ಎಂದು ಹೇಳಿದರು. ಇದು ನಗರದ ಮೇಯರ್ ...ಶ ಹೊಸಬೆಟ್ಟು ಮತ್ತು ಸಂಘಪರಿವಾರದ ಇತರೆ ...ಡರುಗಳಿಗೆ ಕೆಂಡದಂತಹ ಕೋಪ ತರಿಸಿದೆ. ...ಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿ ...ಂಡ' ಎಂಬಂತೆ, ತಾಲಿಬಾನ್ ಎಂದರೆ ಸಂಘ ಪರಿವಾರ ...ರು 'ಓ' ಎಂದು ಎದ್ದು ಬರುತ್ತಾರೆ; ಮಂಗಳೂರಿನ ...ಯರ್ ಕೇಂದ್ರ ಸಚಿವೆಯ ವಿರುದ್ಧ ಕ್ರಿಮಿನಲ್ ...ಕದ್ದಮೆ ದಾಖಲಿಸುತ್ತಾರೆ. ಮೇಯರ್ ಪ್ರಕಾರ, ಕೇಂದ್ರ ...ಚಿವೆ ಮಂಗಳೂರು ಪ್ರತಿಷ್ಠೆಗೆ ಧಕ್ಕೆ ಉಂಟು ಮಾಡಿದ್ದಾರೆ. ...ತ್ತೀಚೆಗೆ ನಗರದ ಕಾರ್ಪೊರೇಷನ್ ಸರ್ವಸದಸ್ಯರ ...ಭೆಯಲ್ಲಿ ಮಹಿಳಾ ಸದಸ್ಯರೊಬ್ಬರು ಪಬ್ ದಾಳಿಯ ...ಸ್ತಾಪ ಮಾಡಿದಾಗ, 'ಹೊರಗಿನ ರಾಜಕೀಯ ...ಷಯಗಳನ್ನು ಈ ಸಭೆಯಲ್ಲಿ ಚರ್ಚಿಸುವ ಹಾಗಿಲ್ಲ' ...ಎಂದು ಮೇಯರ್, ಆಕೆಯ ಬಾಯಿ ಮುಚ್ಚಿಸಿದ್ದರು. ...ಂತಹದ್ದರಲ್ಲಿ ಈಗ ಕೇಂದ್ರ ಸಚಿವೆಯೊಬ್ಬರ ವಿರುದ್ಧ ...ಮಿನಲ್ ಮೊಕದ್ದಮೆ ಹೂಡುವ ಹಕೀಕತ್ತು ಅವರಿಗೆ ...ನಿದೆ? ಮೇಯರ್‌ಗೆ ಮಾಡಲು ಬೇರೆ ಕೆಲಸವಿಲ್ಲವೆ?

ಇನ್ನು ನಗರದ ಘನತೆಯ ಮಾತಿಗೆ ಬಂದರೆ, ಇವರ ...ಡಳಿತವೇ ನಗರಕ್ಕೆ ತಗುಲಿಕೊಂಡ ಅತಿದೊಡ್ಡ ಕಳಂಕ. ...ಲವು ತಿಂಗಳುಗಳ ಕೆಳಗೆ ಮಂಗಳೂರಿನಲ್ಲಿ ನೀರಿನ ...ದರ ಏರಿಕೆಯ ವಿರುದ್ಧ ಪ್ರತಿಭಟಿಸುತ್ತಿದ್ದ ಡಿ.ವೈ.ಎಫ್.ಐ. ...ಕಾರ್ಯಕರ್ತರ ಮೇಲೆ ನಡೆದ ಪೊಲೀಸರ ...ಅಮಾನುಷ ಹಲ್ಲೆಗೆ ಮೇಯರ್ ಅವರೇ ...ಕಾರಣಕರ್ತರಾಗಿದ್ದುದನ್ನು ಜನ ಇನ್ನೂ ...ಮರೆತಿಲ್ಲ. ಶಾಂತರೀತಿಯಲ್ಲಿ ಪ್ರತಿಭಟಿಸುತ್ತಿದ್ದ ...ಡಿ.ವೈ.ಎಫ್.ಐ. ಮುಖಂಡರ ಅಹವಾಲು ...ಕೇಳಿಸಿಕೊಳ್ಳಲು, ಮೇಯರ್ ತನ್ನ ...ಚೇಂಬರ್ ಬಿಟ್ಟು ಹೊರಬರುವ ...ಸೌಜನ್ಯ ಕೂಡ ತೋರಿಸಲಿಲ್ಲ. ...ಸಹಜವಾಗಿಯೇ ಅವರ ಈ ...ದರ್ಪದ ಧೋರಣೆ ಅಲ್ಲಿ ...ನೆರೆದಿದ್ದವರನ್ನು ಕೆರಳಿಸಿತು. ...ಅನಂತರ ಮಂಗಳೂರಿನ ...ಪೊಲೀಸರು ...ಡಿ.ವೈ.ಎಫ್.ಐ ...ಮುಖಂಡ ಮುನೀರ್ ...ಕಾಟಿಪಳ್ಳ ಮತ್ತು ಇತರರ ...ಮೇಲೆ ನಡೆಸಿದ ಪ್ರಹಾರ ...ನಾಗರಿಕರನ್ನು ಬೆಚ್ಚಿ ...ಬೀಳಿಸಿತು. ಮಂಗ...ಳೂರಿನ ಘನತೆ ಆಗಲೇ ...ಮಣ್ಣು ಪಾಲಾಗಿತ್ತು. ...ಇಷ್ಟಕ್ಕೂ, ...ರೇಣುಕಾ ...ಚೌಧುರಿಯವರ ...ಮಾತಿನ ಬಗ್ಗೆ ...ನ್ಯಾಯಾಲಯ ...ವಿಚಾರಣೆ ...ಮಾಡಲು

ಏನಿದೆ? ಮಂಗಳೂರಿನ ತಾಲಿಬಾನೀಕರಣ ಕುರಿತು ಅವರು ಹೇಳಿದ ಮಾತು ಅಸಂಗತವೂ ಅಲ್ಲ, ಅತಿಶಯೋಕ್ತಿಯೂ ಅಲ್ಲ ಎನ್ನುವುದಕ್ಕೆ, ಸಂಘ ಪರಿವಾರದವರು, ದಿನಕ್ಕೊಂದು ಪುರಾವೆಯನ್ನು ತಾವೇ ಒದಗಿಸುತ್ತಿದ್ದಾರೆ. ಉದಾಹರಣೆಗೆ ಇತ್ತೀಚೆಗೆ ನಗರದಲ್ಲಿ ನಡೆದ ಈ ಪ್ರಕರಣವನ್ನು ನೋಡಿ:


ಮಂಗಳೂರಿನ ಹೊರವಲಯದಲ್ಲಿರುವ ಇಂಜಿನಿಯರಿಂಗ್ ಕಾಲೇಜು ಒಂದರ ವಿದ್ಯಾರ್ಥಿಗಳು ಫೆ 13ರ ಶುಕ್ರವಾರ ರಾತ್ರಿ ಬೆಂಗಳೂರಿಗೆ ಹೊರಟಿದ್ದರು. ಮಾರನೆಯ ದಿನ ತಮ್ಮ ವಿಶ್ವವಿದ್ಯಾಲಯದ (V.T.U) ವಿವಿಧ ಸ್ಪರ್ಧೆಗಳಲ್ಲಿ ಅವರು ತಮ್ಮ ಕಾಲೇಜಿನ ಪರವಾಗಿ ಭಾಗವಹಿಸಬೇಕಾಗಿತ್ತು. ಅವರು ಪ್ರಯಾಣಿಸುತ್ತಿದ್ದ ಬಸ್ ನಗರದ ಎ.ಬಿ. ಶೆಟ್ಟಿ ಸರ್ಕಲ್ ಬಳಿ ಬಂದಾಗ ಹಿಂದೂ ಸಂಘಟನೆಯೊಂದರ (ಕೆಲವು ಪತ್ರಿಕೆಗಳ ಪ್ರಕಾರ ಭಜರಂಗದಳ) ಯುವಕರು ಬಸ್ಸನ್ನು ಅಡ್ಡಗಟ್ಟಿ ವಿದ್ಯಾರ್ಥಿಗಳು ಪ್ರವಾಸ ಮುಂದುವರಿಸಕೂಡದು ಎಂದು ಆಜ್ಞಾಪಿಸಿದರು. ಬಸ್ಸಿನಲ್ಲಿ ಹಿಂದೂ ವಿದ್ಯಾರ್ಥಿನಿಯರು, "ಅನ್ಯಮತೀಯ" ವಿದ್ಯಾರ್ಥಿಗಳ ಜೊತೆ ಪ್ರಯಾಣ ಮಾಡುವುದಕ್ಕೆ ಅವರ ವಿರೋಧವಿತ್ತು. ಆ ವಿದ್ಯಾರ್ಥಿಗಳು ತಮ್ಮದು ಮೋಜಿನ ಪ್ರವಾಸವಲ್ಲ, ತಾವು ವಿಶ್ವವಿದ್ಯಾಲಯದ ಕಾರ್ಯಕ್ರಮವೊಂದರಲ್ಲಿ ತಮ್ಮ ಕಾಲೇಜನ್ನು ಪ್ರತಿನಿಧಿಸಲು ಬೆಂಗಳೂರಿಗೆ ಹೋಗುತ್ತಿದ್ದೇವೆ ಎಂದು ಪರಿಪರಿಯಾಗಿ ಗೋಗರೆದರು. ಆ ಕಾಲೇಜಿನ ಉಪನ್ಯಾಸಕರೂ, ತಮ್ಮ ಪ್ರವಾಸದ ಉದ್ದೇಶವನ್ನು ಬಸ್ಸನ್ನು ತಡೆದ ಯುವಕರ ಗುಂಪಿಗೆ ವಿವರಿಸಿದರು. ಅಷ್ಟು ಹೊತ್ತಿಗೆ ಬಸ್ಸನ್ನು ಬಲಾತ್ಕಾರವಾಗಿ ನಿಲ್ಲಿಸಿದ ಸುದ್ದಿ ತಿಳಿದು ಆತಂಕಗೊಂಡು ಸ್ಥಳಕ್ಕೆ ಬಂದ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಹೆತ್ತವರೂ ತಮ್ಮ ಸಮ್ಮತಿಯಿಂದಲೇ ಈ ವಿದ್ಯಾರ್ಥಿಗಳು ಬೆಂಗಳೂರಿಗೆ ಹೊರಟಿದ್ದಾರೆ ಎಂದು ಸ್ಪಷ್ಟಪಡಿಸಿದರು. ಇಷ್ಟೆಲ್ಲ ನಡೆಯುವಾಗ ಆ ಸರ್ಕಲ್‌ಗೆ ಅತಿ ಸಮೀಪದಲ್ಲೇ ಇರುವ ಪಾಂಡೇಶ್ವರ ಪೊಲೀಸು ಠಾಣೆಯ ಪೊಲೀಸರೂ ಸ್ಥಳದಲ್ಲಿ ಹಾಜರಿದ್ದರು.

ಅವರು ಕೂಡ ವಿದ್ಯಾರ್ಥಿಗಳ ಬಸ್ಸನ್ನು ಮುಂದೆಬಿಡಲು, ಹಿಂದೂ ವೀರರನ್ನು ವಿನಂತಿಸಿಕೊಂಡರು; ಹೌದು 'ವಿನಂತಿಸಿಕೊಂಡರು' ಎಂಬುದೇ ಸೂಕ್ತವಾದ ಮಾತು. ಮಂಗಳೂರಿನಲ್ಲಿ ಪೊಲೀಸರ ಲಾಠಿಗಳು ಇರುವುದು ಡಿ.ವೈ.ಎಫ್.ಐ. ಮತ್ತಿತರ ಎಡಸಂಘಟನೆಗಳವರ ಬೆನ್ನುಮೂಳೆ ಮುರಿಯಲು ಮಾತ್ರ. ಬಸ್ಸನ್ನು ತಡೆಹಿಡಿದ ಯುವಕರ ಜೊತೆ ಪೊಲೀಸರ ಸಂಧಾನವೂ(!) ವಿಫಲವಾಗಿ ವಿದ್ಯಾರ್ಥಿಗಳು ತಮ್ಮ ಪ್ರಯಾಣವನ್ನು ನಿಲ್ಲಿಸಿ ಮನೆಗೆ ತೆರಳಿದರು. ಅವರ ಬೆಂಗಳೂರು ಪ್ರಯಾಣವನ್ನು ಬಲಾತ್ಕಾರವಾಗಿ ನಿಲ್ಲಿಸಿದ ಗುಂಪಿನವರ ಮೇಲೆ ಇದುವರೆಗೆ ಪೊಲೀಸರು ಯಾವುದೇ ಕಾನೂನು ಕ್ರಮ ತೆಗೆದುಕೊಂಡ ಹಾಗಿಲ್ಲ. ಮಂಗಳೂರಿನಲ್ಲಿ ಕಾನೂನಿನ ಆಳ್ವಿಕೆಯೇ ಇಲ್ಲ; ಇನ್ನು ಕಾನೂನಿನ ಕ್ರಮ ಎಲ್ಲಿಯದು?



ರೇಣುಕಾ ಚೌಧರಿ

ಇತ್ತೀಚೆಗೆ ನಗರದ ಕಾರ್ಪೊರೇಷನ್ ಸರ್ವಸದಸ್ಯರ ಸಭೆಯಲ್ಲಿ ಮಹಿಳಾ ಸದಸ್ಯರೊಬ್ಬರು ಪಬ್ ದಾಳಿಯ ಪ್ರಸ್ತಾಪ ಮಾಡಿದಾಗ, 'ಹೊರಗಿನ ರಾಜಕೀಯ ವಿಷಯಗಳನ್ನು ಈ ಸಭೆಯಲ್ಲಿ ಚರ್ಚಿಸುವ ಹಾಗಿಲ್ಲ' ಎಂದು ಮೇಯರ್ ಆಕೆಯ ಬಾಯಿ ಮುಚ್ಚಿಸಿದ್ದರು. ಅಂತಹದ್ದರಲ್ಲಿ ಈಗ ಕೇಂದ್ರ ಸಚಿವೆಯೊಬ್ಬರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವ ಹಕೀಕತ್ತು ಅವರಿಗೆ ಏನಿದೆ? ಮೇಯರ್‌ಗೆ ಮಾಡಲು ಬೇರೆ ಕೆಲಸವಿಲ್ಲವೆ? ■



ಗಣೇಶ್ ಹೊಸಬೆಟ್ಟು

ಮಂಗಳೂರಿನಲ್ಲಿ ಕಾನೂನಿನ ಆಳ್ವಿಕೆ ಇಲ್ಲ ಎಂಬ ಸತ್ಯವನ್ನು ಜಿಲ್ಲಾ ಪೊಲೀಸು ವರಿಷ್ಠಾಧಿಕಾರಿ ಸತೀಶ್ ಕುಮಾರ್ ಅವರೇ ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ. ಇತ್ತೀಚೆಗೆ ಎನ್.ಡಿ.ಟಿ.ವಿ. ನಡೆಸಿದ ಸಂದರ್ಶನದಲ್ಲಿ ಮಾತನಾಡುತ್ತ "ಮಂಗಳೂರಿನಲ್ಲಿ ಕೋಮು ಸಂಬಂಧಿ ಘಟನೆಗಳ ಆರೋಪಿಗಳ ಮೇಲೆ ಕ್ರಮ ತೆಗೆದುಕೊಂಡರೆ ಒಂದು ಗಂಟೆಯ ಒಳಗೆ ನಗರದಲ್ಲಿ ಗಲಭೆ ಪ್ರಾರಂಭವಾಗುತ್ತದೆ" ಎಂದು ಅವರು ಹೇಳಿದ್ದಾರೆ. ಪೊಲೀಸರ ನಿಷ್ಕ್ರಿಯತೆಗೆ ಅವರು ಕೊಟ್ಟ ವಿವರಣೆ ಇದು! ಮಂಗಳೂರಿನಲ್ಲಿ ಈಗ ಎಂತಹ ಭಯದ ವಾತಾವರಣವಿದೆಯೆಂದರೆ ಮೇಲೆ ಹೇಳಿದ ಇಂಜಿನಿಯರಿಂಗ್ ಕಾಲೇಜಿನ ಮುಖ್ಯಸ್ಥರು ಈ ಘಟನೆಗೆ ಸಂಬಂಧಿಸಿದಂತೆ ತಮ್ಮ ಸಂಸ್ಥೆಯ ಹೆಸರನ್ನು ಎಲ್ಲಿಯೂ ಕಾಣಿಸದಂತೆ ಮಾಧ್ಯಮದವರನ್ನು ವಿನಂತಿಸಿಕೊಂಡಿದ್ದಾರೆ! ಪೆಟ್ಟುತಿಂದವ ತನ್ನ ಹೆಸರು ಹೇಳಲೂ ಹಿಂಜರಿಯುವುದು, ನಾಳೆ ಇನ್ನಷ್ಟು ಪೆಟ್ಟು ತಿನ್ನಬೇಕಾದೀತು ಎಂಬ ಭಯವಿದ್ದಾಗ ಮಾತ್ರ. ಇಲ್ಲಿ ಈಗ ನಿರ್ಭಯರಾಗಿರುವವರು ಎಂದರೆ ಸಂಘ ಪರಿವಾರದವರು ಮಾತ್ರ; ಅವರಿಗೆ ಕಾನೂನಿನ ಭಯವೂ ಇಲ್ಲ; ದೇವರ ಭಯವೂ ಇಲ್ಲ.

ಮಂಗಳೂರಿನ ಯೂನಿವರ್ಸಿಟಿ ಕಾಲೇಜಿನ ಉದಾಹರಣೆಯನ್ನೇ ತೆಗೆದುಕೊಳ್ಳಿ. ಅಲ್ಲಿ ಕಳೆದ ಹಲವು ವರ್ಷಗಳಿಂದ, ಪ್ರಾಧ್ಯಾಪಕ ಪಟ್ಟಾಭಿರಾಮ ಸೋಮಯಾಜಿಯವರ ವಿರುದ್ಧ ಕಾಲೇಜಿನ ಎಬಿವಿಪಿ ಸಂಘಟನೆಗೆ ಸೇರಿದ ವಿದ್ಯಾರ್ಥಿಗಳು ದೊಂಬಿ, ಅಪಪ್ರಚಾರ, ಅವಮಾನಗಳ ಒಂದು ಅಭಿಯಾನವನ್ನೇ ನಡೆಸುತ್ತಿದ್ದಾರೆ. ವಿಶ್ವವಿದ್ಯಾಲಯವಾಗಲೀ, ಕಾಲೇಜಾಗಲೀ, ಎಬಿವಿಪಿಯ ಈ ವಿದ್ಯಾರ್ಥಿಗಳ ವಿರುದ್ಧ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ.

ಮಂಗಳೂರಿನ ಹಲವು ಕಾಲೇಜು ಅಧ್ಯಾಪಕರು, ವಿಹಿಂಪ, ಆರ್‌ಎಸ್‌ಎಸ್ ಮುಂತಾದ ಸಂಘಟನೆಗಳ ಜೊತೆ ತುಂಬ ಹಿಂದಿನಿಂದಲೂ ಸಂಬಂಧವಿಟ್ಟುಕೊಂಡಿದ್ದಾರೆ. ಅವರ ಈ 'ಪಾಠೇತರ ರಾಜಕೀಯ' ಚಟುವಟಿಕೆಗೆ ವಿಶ್ವವಿದ್ಯಾಲಯದ ಅನುಮತಿಯೂ ಇಲ್ಲ, ಅವರ ಕಾಲೇಜಿನ ಅನುಮತಿಯೂ ಇಲ್ಲ, ಯಾರೂ ಇದುವರೆಗೆ ಆ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ, ನಮಗೆ ವೈಚಾರಿಕ ಸ್ವಾತಂತ್ರ್ಯ ಅಭಿವ್ಯಕ್ತಿ ಸ್ವಾತಂತ್ರ್ಯಗಳು ಇರುವುದೇ ಹೌದಾದಲ್ಲಿ ಅದು ಹಾಗೆಯೇ ಇರಬೇಕಾದದ್ದು. ಆದರೆ ಈಗ, ಒಂದು ರಾಷ್ಟ್ರೀಯ ಟಿವಿ ಚಾನೆಲ್‌ಗೆ ತಮ್ಮ ಅಭಿಪ್ರಾಯ ತಿಳಿಸಿದರು ಎಂಬ ಕಾರಣಕ್ಕೆ ಪಟ್ಟಾಭಿರಾಮ ಸೋಮಯಾಜಿಯವರಿಗೆ ಅವರ ಕಾಲೇಜು ಮತ್ತು ಮಂಗಳೂರು ವಿಶ್ವವಿದ್ಯಾಲಯ ಎರಡೂ ನೋಟೀಸು ನೀಡಿವೆ. ಹಾಗಾದರೆ ವೈಚಾರಿಕ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಮಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯ ಒಳಗೆ ಸಂಘಪರಿವಾರಕ್ಕೆ ಸೇರಿದವರಿಗೆ ಮಾತ್ರ ಇರುವಂತಹದ್ದೋ?

ಎಬಿವಿಪಿ ವಿದ್ಯಾರ್ಥಿಗಳು ಪಟ್ಟಾಭಿರಾಮ ಸೋಮಯಾಜಿಯವರ ವಿರುದ್ಧ ಕಾಲೇಜಿನ ಆವರಣದ ಒಳಗೆ, ತರಗತಿಗಳು ನಡೆಯುತ್ತಿದ್ದಾಗಲೇ ಬೊಬ್ಬೆ ಹೊಡೆಯಬಹುದು; ತರಗತಿಗಳಿಂದ ವಿದ್ಯಾರ್ಥಿಗಳು ಬಲಾತ್ಕಾರದಲ್ಲಿ ಹೊರಬರುವಂತೆ ಮಾಡಬಹುದು. ಆ ಕಾಲೇಜಿನ ಪ್ರಿನ್ಸಿಪಾಲರು ಅದನ್ನು ಮೌನವಾಗಿ ಸಹಿಸಿಕೊಳ್ಳುತ್ತಾರೆ. ಇತ್ತೀಚೆಗೆ ಸೋಮಯಾಜಿಯವರಿಗೆ ಬೆಂಬಲ ವ್ಯಕ್ತಪಡಿಸುವ ಹೇಳಿಕೆಯೊಂದಕ್ಕೆ ಎಸ್‌ಎಫ್‌ಐ ಸಂಘಟನೆಗೆ ಸೇರಿದ ಮನೋಜ್‌ಕುಮಾರ್ ಮತ್ತು ಸಾದಿಕ್ ಎಂಬ ಇಬ್ಬರು ವಿದ್ಯಾರ್ಥಿಗಳು ಎಬಿವಿಪಿ ಕಡೆಯವರಿಂದ ಹೊಡೆತ ತಿಂದರು. ಅವರು ಆ ಬಗ್ಗೆ ಕಾಲೇಜಿನ ಪ್ರಿನ್ಸಿಪಾಲರ ಬಳಿ ದೂರು ಹೇಳಿದಾಗ ಅವರು "ನಿಮಗೆ ಇದೆಲ್ಲ ಯಾಕೆ ಅಧಿಕಪ್ರಸಂಗ?" ಎಂದು ಈ ಹುಡುಗರನ್ನೇ ತರಾಟೆಗೆ ತೆಗೆದುಕೊಂಡಿದ್ದಾರೆ!

ಮಂಗಳೂರು ಯೂನಿವರ್ಸಿಟಿ ಕಾಲೇಜಿನಲ್ಲಿ ಎಬಿವಿಪಿಯನ್ನು ಧೈರ್ಯವಾಗಿ ಎದುರು ಹಾಕಿಕೊಂಡಿರುವ ಈ ಇಬ್ಬರು ಹುಡುಗರ ಪೈಕಿ ಸಾದಿಕ್ ಅಂತೂ ಎಬಿವಿಪಿಯವರಿಂದ ಎಷ್ಟು ಸಲ ಪೆಟ್ಟು ತಿಂದಿದ್ದಾನೆ ಎಂದರೆ ಅವನಿಗೆ ಅದರಲ್ಲೇ ಒಂದು ಡಿಗ್ರಿ ಕೊಡಬಹುದು. ಈ ಪೆಟ್ಟಿನ ಪ್ರಕರಣಗಳಲ್ಲಿ ಒಂದಂತೂ ಸಂಘ ಪರಿವಾರದ ರೋಗಿಷ್ಠ ಮನಸ್ಸಿನ ರೂಪಕದಂತಿದೆ. ಸಾದಿಕ್, ಯೂನಿವರ್ಸಿಟಿ ಕಾಲೇಜಿನ NSS ಚಟುವಟಿಕೆಗಳಲ್ಲಿ ಮುಂದಾಳತ್ವ ವಹಿಸಿ ಸದಾ ತನ್ನನ್ನು ತೊಡಗಿಸಿಕೊಂಡವನು. ಈ ಕಾಲೇಜಿನ ಪಕ್ಕದಲ್ಲಿಯೇ ಮಂಗಳೂರಿನ ಸರ್ಕಾರಿ ಆಸ್ಪತ್ರೆ (ವೆನ್‌ಲಾಕ್) ಇದೆ. ಹಾಗಾಗಿ ಅಲ್ಲಿನ ರೋಗಿಗಳಿಗೆ ತುರ್ತು ರಕ್ತ ಬೇಕಾದರೆ, ಆಸ್ಪತ್ರೆಯ ಅಧಿಕಾರಿಗಳು ರಕ್ತದಾನಕ್ಕಾಗಿ ಮೊದಲು ಸಂಪರ್ಕಿಸುವುದು ಸಾದಿಕ್‌ನನ್ನು. ಅವನಿಗೆ ಕಾಲೇಜಿನಲ್ಲಿ ರಕ್ತದಾನ ಮಾಡುವ, ಬಹುತೇಕ ವಿದ್ಯಾರ್ಥಿಗಳ ಬ್ಲಡ್‌ಗ್ರೂಪ್ ಗೊತ್ತಿದೆಯಂತೆ. ಒಮ್ಮೆ ವೆನ್‌ಲಾಕ್‌ನಿಂದ ರಕ್ತದಾನಕ್ಕೆ ತುರ್ತು ಕರೆ ಬಂದಾಗ ಸಾದಿಕ್ ತನ್ನ ಕ್ಲಾಸಿನ ಇಬ್ಬರು ಹುಡುಗಿಯರನ್ನು ಕರೆದುಕೊಂಡು ಹೋಗಿ ರಕ್ತ ಕೊಡಿಸಿದ. ಅಷ್ಟರಲ್ಲಿ ಅವನು ಇಬ್ಬರು ಹುಡುಗಿಯರ ಜೊತೆ ಹೋಗಿದ್ದಾನೆ ಎಂಬ ಸುದ್ದಿ ಕಾಲೇಜಿನಲ್ಲಿ ಹಬ್ಬಿ ಎಬಿವಿಪಿ ಹುಡುಗರು ಅವನು ವಾಪಸ್ಸು ಬಂದಾಗ, ಚೆನ್ನಾಗಿ ಥಳಿಸಿದರು. ಕಾರಣ, ಸಾದಿಕ್ ರಕ್ತದಾನಕ್ಕೆ ಕರೆದುಕೊಂಡು ಹೋದ ಆ ಇಬ್ಬರು ಹುಡುಗಿಯರು ಹಿಂದೂಗಳು!

ಈ ಘಟನೆ ಮಂಗಳೂರಿನ ರೋಗಗ್ರಸ್ತ ಸ್ಥಿತಿಗೂ ಒಂದು ರೂಪಕ. ಕೇಂದ್ರ ಸಚಿವೆ ರೇಣುಕಾ ಚೌಧುರಿ ಇದನ್ನೇ ಬೇರೆ ಶಬ್ದಗಳಲ್ಲಿ ಹೇಳಿದ್ದಾರೆ. ಮಂಗಳೂರಿನ ಹಾಲೀ ಸಂಸ್ಕೃತಿಯನ್ನು ತಾಲಿಬಾನೀಕರಣವೆಂದು ಕರೆದ ಸಚಿವೆ ಇಡೀ ದೇಶಕ್ಕೆ ಈ ಊರಿನ ನಿಜ ಸ್ವರೂಪವನ್ನು ತಿಳಿಯಪಡಿಸಿದ್ದಾರೆ. ಅವರ ಮಾತಿಗೆ ಸಿಟ್ಟಾಗುವುದರಿಂದ ಅಥವಾ ನ್ಯಾಯಾಲಯದಲ್ಲಿ ಕ್ರಿಮಿನಲ್ ಕೇಸು ಜಡಿಯುವುದರಿಂದ, ಮಂಗಳೂರಿನ ಪ್ರತಿಷ್ಠೆ ಉಳಿಯುವುದಿಲ್ಲ. ಬಿಜೆಪಿ ಮತ್ತು ಎಬಿವಿಪಿ ಮುಂತಾದ ಅದರ ಸಂಘಟನೆಗಳವರು ಇಲ್ಲಿ ಮನುಷ್ಯರ ಹಾಗೆ ವರ್ತಿಸಲು ಕಲಿತರೆ ಮಾತ್ರ ಈ ಊರು ಕೂಡ ಒಂದು ಊರು ಅನ್ನಿಸಿಕೊಂಡೀತು. ಹಾಗೆ ನೋಡಿದರೆ ಸಂಘ ಪರಿವಾರದ ಸ್ವಘೋಷಿತ ದೇಶಭಕ್ತರಿಗೆ ತಾಲಿಬಾನ್‌ಗಳ ಅಫಘಾನಿಸ್ತಾನವೇ ಸೂಕ್ತವಾದ ದೇಶ. ಅಲ್ಲಿ ಪಬ್‌ಗಳಿಲ್ಲ, ಸಂಪೂರ್ಣ ಪಾನ ನಿಷೇಧವಿರುವುದರಿಂದ ಹೆಂಗಸರು ಯಾಕೆ, ಗಂಡಸರು ಸಹ ಆ ದೇಶದಲ್ಲಿ ಹೆಂಡ ಸಾರಾಯಿ ಕುಡಿಯುವ ಹಾಗಿಲ್ಲ. ಇತ್ತೀಚೆಗೆ ಹೆಣ್ಣುಮಕ್ಕಳು, ಶಾಲೆ ಕಾಲೇಜುಗಳಿಗೂ ಹೋಗಕೂಡದು ಎಂದು ಅಲ್ಲಿ ತಾಲಿಬಾನ್‌ನ ಆಜ್ಞೆ ಹೊರಟಿದೆಯಂತೆ. ಸಂಸ್ಕೃತಿ ಮತ್ತು ರಕ್ತ-ವರದ ಪರಿಶುದ್ಧತೆಯೂ ಅಲ್ಲಿ ಗ್ಯಾರಂಟಿ. ಸಂಘ ಪರಿವಾರದವರಿಗೆ ಇನ್ನೇನು ಬೇಕು?

■ ಜಿ. ರಾಜಶೇಖರ

ಬಡ ಲಿಂಗಾಯತರಿಗೆ ಯಡ್ಡಿ ಬತ್ತಿ


ಕುಮಾರ್ ಬುರಡಿಕಟ್ಟಿ

ಭಾರತದಂಥ ಜಾತ್ಯತೀತ ರಾಷ್ಟ್ರದಲ್ಲಿ ಜನಪ್ರತಿನಿಧಿಯಾದವನು ತನ್ನ ಜಾತಿ, ಸಮುದಾಯದ ಪ್ರತಿನಿಧಿಯಾಗಿರದೇ ಇಡೀ ಸಮಾಜದ ಸರ್ವ ವರ್ಗ, ಜಾತಿ, ಧರ್ಮಗಳ ಪ್ರತಿನಿಧಿಯಾಗಿರಬೇಕು. ಆದರೆ, ಜನಪ್ರತಿನಿಧಿಗಳು ಈ ಮೂಲಭೂತ ಸಂವಿಧಾನಿಕ ಬದ್ಧತೆಯನ್ನು ಮರೆತು ತಮ್ಮ ತಮ್ಮ ಜಾತಿಗಳ, ಧರ್ಮಗಳ, ಪಕ್ಷಗಳ ಪ್ರತಿನಿಧಿಗಳಂತೆ ವರ್ತಿಸುತ್ತಾ ಸ್ವಜನಪಕ್ಷಪಾತ ನೀತಿಗಳನ್ನು ಅನುಸರಿಸುತ್ತಿರುವುದು ನಮ್ಮ ದುರಂತ. ಈ ಕೆಟ್ಟ ಪರಂಪರೆ ನಿನ್ನೆ ಮೊನ್ನೆ ಹುಟ್ಟಿಕೊಂಡಿಲ್ಲವಾದರೂ ಮುಖ್ಯಮಂತ್ರಿ ಯಡಿಯೂರಪ್ಪನವರ ಅಧಿಕಾರಾವಧಿಯಲ್ಲಿ ಹಿಂದೆಂದಿಗಿಂತಲೂ ಅದು ಹೆಚ್ಚು ವೇಗ ಪಡೆದುಕೊಂಡಿದೆ.

ಯಡಿಯೂರಪ್ಪನವರು ತಾವು ಮುಖ್ಯಮಂತ್ರಿಗಳಾದಾಗಿನಿಂದ ಇಲ್ಲಿಯತನಕ ಎಂದೂ ಈ ರಾಜ್ಯದ ಮುಖ್ಯಮಂತ್ರಿಗಳಂತೆ ವರ್ತಿಸಿಯೇ ಇಲ್ಲ. ಅಧಿಕಾರಕ್ಕೇರಿದ ತಕ್ಷಣ ತಾವು ರಾಜ್ಯದ ಮುಖ್ಯಮಂತ್ರಿ ಎಂಬುದನ್ನೇ ಮರೆತು ಬಿಜೆಪಿ ಪಕ್ಷದ ಮುಖ್ಯಮಂತ್ರಿಯಂತೆ ಕಾರ್ಯನಿರ್ವಹಿಸಿದರು. ತದನಂತರದಲ್ಲಿ ತಮ್ಮ ಸ್ವಂತ ಜಾತಿಯಾದ ಲಿಂಗಾಯತರ ಮುಖ್ಯಮಂತ್ರಿಯಂತೆ ವರ್ತಿಸತೊಡಗಿದರು. ಈಗ ಅದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ಲಿಂಗಾಯತರೊಳಗೇ ಇರುವ ಮುಂದುವರಿದ, ಪ್ರಬಲ ಲಿಂಗಾಯತ ಒಳಪಂಗಡಗಳ ಮುಖ್ಯಮಂತ್ರಿಯಂತೆ ವರ್ತಿಸತೊಡಗಿದ್ದಾರೆ, ಹತ್ತು ಹಲವು ಜಾತಿ-ಧರ್ಮಗಳ ವೈವಿಧ್ಯಮಯ ಕರ್ನಾಟಕಕ್ಕೆ ಲಿಂಗಾಯತ-ವಿಭೂತಿ ಬಳಿಯುತ್ತಿದ್ದಾರೆ.


ಲಿಂಗಾಯತನೊಬ್ಬ ಮುಖ್ಯಮಂತ್ರಿಯಾಗಲಿ ಎಂಬ ಕಾರಣಕ್ಕೆ ರಾಜ್ಯದ ಲಿಂಗಾಯತ ಸಮುದಾಯ ಅವರ ಬೆನ್ನಿಗೆ ನಿಂತಿದ್ದರಿಂದ ರಾಜ್ಯದಲ್ಲಿ ಬಿಜೆಪಿ ಮೊದಲ ಬಾರಿಗೆ ಗೆದ್ದು ಅಧಿಕಾರಕ್ಕೇರಿತು. ಲಿಂಗಾಯತರ ಬೆಂಬಲದಿಂದಲೇ ತಾನು ಮುಖ್ಯಮಂತ್ರಿಯಾಗಿದ್ದೆಂದು ಯಡ್ಡಿಗೂ ಚೆನ್ನಾಗಿ ಗೊತ್ತು. ತನ್ನ ಅಧಿಕಾರ ಹೀಗೇ ನಿರಂತರವಾಗಿ, ನಿರಾತಂಕವಾಗಿ ಮುಂದುವರೆಯಬೇಕೆಂದರೆ, ಪಕ್ಷದೊಳಗೆ ಬ್ರಾಹ್ಮಣ ಅನಂತಕುಮಾರ್ ಹಾಕುತ್ತಿರುವ ಅಡ್ಡಗಾಲನ್ನು ಯಶಸ್ವಿಯಾಗಿ ಮೆಟ್ಟನಿಲ್ಲಬೇಕೆಂದರೆ, ಇಡೀ ಬಿಜೆಪಿ ಪಕ್ಷವನ್ನು ತನ್ನ ನಿಯಂತ್ರಣಕ್ಕೆ ತಂದುಕೊಳ್ಳಬೇಕೆಂದರೆ ರಾಜ್ಯಾದ್ಯಂತ ತನಗಿರುವ ಲಿಂಗಾಯತರ ಬೆಂಬಲವನ್ನು **consolidate** ಮಾಡಿಕೊಳ್ಳಬೇಕೆಂಬುದು ಯಡ್ಡಿಗೆ ಚೆನ್ನಾಗಿ ಗೊತ್ತಿದೆ.

ಮುಖ್ಯಮಂತ್ರಿಯಾಗಿ ಅಧಿಕಾರಕ್ಕೇರುತ್ತಿದ್ದಂತೆಯೇ ವಿಧಾನಸೌಧವನ್ನೇ ಆರ್‌ಎಸ್‌ಎಸ್‌ನ ಗರ್ಭಗುಡಿಯಂತೆ ಶಿಂಗರಿಸಿ ಹೋಮ ಹವನಗಳನ್ನು ಮಾಡಿ ತಾನು ರಾಜ್ಯದ ಸರ್ವಧರ್ಮ, ಸರ್ವಜಾತಿಗಳ ಮುಖ್ಯಮಂತ್ರಿಯಲ್ಲ, ಬಿಜೆಪಿ-ಆರೆಸ್ಸೆಸ್‌ನ ಮುಖ್ಯಮಂತ್ರಿ ಎಂಬುದನ್ನು ತೋರಿಸಿ ಕೊಟ್ಟರು. ರಾಜ್ಯದ ಸಂಪತ್ತಾದ 'ಅಮೃತಮಹಲ್' ಎಂಬ ಚಿನ್ನದ ಗಣಿಯನ್ನು ರಾಮಚಂದ್ರಾಪುರ ಮಠದ ರಾಘವೇಶನಂಥ ಸಗಣಿಗಳ್ಳನ ಪಾದಾರವಿಂದಗಳಿಗರ್ಪಿಸಲು ಪ್ರಯತ್ನಿಸಿದರು. ರಾಜ್ಯದ ಜನತೆ ಒಡ್ಡಿದ ವಿರೋಚಿತ ಪ್ರತಿರೋಧದಿಂದಾಗಿ ಅದು ತಪ್ಪಿತಾದರೂ ಮತ್ತೊಂದು ಚಿನ್ನದ ಮೊಟ್ಟೆಯಿಡುವ ಕೋಳಿಯಂತಿರುವ ಗೋಕರ್ಣದ ದೇವಳವನ್ನು ಅರ್ಪಿಸುವಲ್ಲಿ ಯಶಸ್ವಿಯಾದರು. ನಂತರ, ಭಜರಂಗದಳದ ಪುಂಡರ ಮೇಲಿದ್ದ ಕ್ರಿಮಿನಲ್ ಕೇಸುಗಳನ್ನೆಲ್ಲಾ ವಾಪಸ್ಸು ಪಡೆದು ತಾನು ಪುಂಡರ ಬೆಂಬಲಕ್ಕೆ ನಿಂತಿರುವ ಮುಖ್ಯಮಂತ್ರಿ ಎಂಬುದನ್ನು ತೋರಿಸಿಕೊಟ್ಟರು.



ಆಮೇಲೆ, ಮತ್ತೊಂದು ಹೆಜ್ಜೆ ಮುಂದೆ ಹೋಗಿ ತಾವು ಬಿಜೆಪಿ-ಆರೆಸ್ಸೆಸ್‌ನ ಮುಖ್ಯಮಂತ್ರಿ ಮಾತ್ರವಲ್ಲ ತಮ್ಮದೇ ಜಾತಿಯಾದ ಲಿಂಗಾಯತರ ಮುಖ್ಯಮಂತ್ರಿ ಎಂಬುದನ್ನು ತೋರಿಸಲಾರಂಭಿಸಿದರು. ಒಂದು ದಿನವೂ ಒಂದು ಕಡೆ ನೆಲೆಯೂರದೇ ಹೆಲಿಕಾಪ್ಟರ್ ಹತ್ತಿ ರಾಜ್ಯಾದ್ಯಂತ ಇರುವ ವೀರಶೈವ ಲಿಂಗಾಯತ ಮಠಮಾನ್ಯಗಳನ್ನೆಲ್ಲಾ ಸುತ್ತುವರೆದು ಸರ್ಕಾರದ ಕೋಟಿ ಕೋಟಿ ದುಡ್ಡು ಕೊಟ್ಟು ಬಂದರು. ಈ ರೀತಿ ಮಠಮಾನ್ಯಗಳಿಗೆ ತಿರುಗಾಡುವುದಕ್ಕೇ ಇವರ ಹೆಲಿಕಾಪ್ಟರ್ ಖರ್ಚು ಪ್ರತಿತಿಂಗಳಿಗೆ ಮೂವತ್ತೊಂದೂವರೆ ಲಕ್ಷವಾಗಿದೆ. ಮೊನ್ನೆ ಬಜೆಟ್ ಮಂಡಿಸಿದಾಗಲೂ ಬರೊಬ್ಬರಿ 130 ಕೋಟಿ ರೂಪಾಯಿಗಳನ್ನು ಮಠಮಾನ್ಯಗಳಿಗೆ ಮೀಸಲಿರಿಸಿದ್ದಾರೆ. ಅದರಲ್ಲಿ ಲಿಂಗಾಯತ ಮಠಗಳೂ ಗಣನೀಯ ಪ್ರಮಾಣದಲ್ಲಿವೆ.

ಈಗ ಯಡಿಯೂರಪ್ಪ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಲಿಂಗಾಯತರಲ್ಲೇ ತನ್ನ ಸ್ವಂತ ಒಳ ಪಂಗಡವಾದ ಗಾಣಿಗ ಹಾಗೂ ಗಾಣಿಗರಂತೆಯೇ ಲಿಂಗಾಯತರಲ್ಲಿಯೇ ಮುಂದುವರಿದ, ಪ್ರಬಲ ಒಳಪಂಗಡಗಳಾದ ಪಂಚಮಸಾಲಿ, ಬಣಜಿಗ, ಸಾದರ, ಆರಾಧ್ಯರಂಥ ಒಳಪಂಗಡಗಳ ಒಲೈಕೆಯಲ್ಲಿ ನಿರತರಾಗಿದ್ದಾರೆ. ಅದಕ್ಕೆ ಇನ್ನಿತರ ಹಿಂದುಳಿದ



ವರ್ಗಗಳ (ಒಬಿಸಿ) 3-ಬಿ ಕ್ಯಟಗರಿಗೆ ಗಾಣಿಗರನ್ನೂ ಒಳಗೊಂಡಂತೆ ಪ್ರಬಲ ಲಿಂಗಾಯತರ 19 ಉಪಪಂಗಡಗಳನ್ನು ಸೇರಿಸಿದ್ದಾರೆ. ಈ ಕ್ರಮದಿಂದಾಗಿ ಲಿಂಗಾಯತರೊಳಗೆ ಹಿಂದುಳಿದವರು, ಮುಂದುವರೆದವರನ್ನೂ ಒಳಗೊಂಡಂತೆ ಹೆಚ್ಚೂಕಡಿಮೆ ಇಡೀ ಲಿಂಗಾಯತ ಜಾತಿಯನ್ನು ಒಬಿಸಿ ಕ್ಯಟಗರಿಯ ಒಳಗೆ ತಂದಂತಾಗಿದೆ. ಈ ಕ್ಯಟಗರಿಗೆ ಶೇ.5 ಮೀಸಲಾತಿ ಸೌಲಭ್ಯವಿದೆ. ಯಡಿಯೂರಪ್ಪನವರ ಈ ರಾಜಕೀಯ ಅರ್ಥವಾಗದ ವಿಚಾರವೇನಲ್ಲ. ಕಳೆದ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಇಡೀ ಲಿಂಗಾಯತ ಸಮುದಾಯ ತಮ್ಮ ಬೆನ್ನಿಗೆ ನಿಂತಂತೆಯೇ ಬರುವ ಲೋಕಸಭಾ ಚುನಾವಣೆಯಲ್ಲಿಯೂ ಅವರ ಬೆಂಬಲ ಪಡೆಯುವುದಕ್ಕಾಗಿ ಅವರಿಗೆ ಈ ಮೀಸಲಾತಿಯ ಆಮಿಷ ಒಡ್ಡಲಾಗಿದೆ.

ಯಡ್ಡಿಯ ಈ ಕ್ರಮದಿಂದ ಇಡೀ ಲಿಂಗಾಯತ ಸಮುದಾಯಕ್ಕೆ ಉಪಯೋಗವಾಗುತ್ತದೆಯೆ? ಖಂಡಿತ ಇಲ್ಲ. ಮೇಲ್ನೋಟಕ್ಕೆ ಇದು ಲಿಂಗಾಯತರ ಪರವಾಗಿರುವ ಕ್ರಮದಂತೆ ಕಂಡರೂ ವಾಸ್ತವದಲ್ಲಿ ಲಿಂಗಾಯತರೊಳಗೇ ಇರುವ ಪಂಚಮಸಾಲಿ, ಬಣಜಿಗರಂಥ ಪ್ರಬಲ ಪಂಗಡಗಳಿಗೆ ಅನುಕೂಲವಾಗುತ್ತದೆ; ಲಿಂಗಾಯತರೊಳಗೇ ಇರುವ ದುರ್ಬಲ ಜಾತಿಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ.



ಲಿಂಗಾಯತರಲ್ಲಿ ಹೆಚ್ಚೂ ಕಡಿಮೆ 36 ಒಳಪಂಗಡಗಳಿವೆ. ಅದರಲ್ಲಿ 78 ಲಕ್ಷದಷ್ಟು ಜನಸಂಖ್ಯೆ ಹೊಂದಿರುವ ಪಂಚಮಸಾಲಿಗಳೇ ಬಹುಸಂಖ್ಯಾತರಾಗಿದ್ದಾರೆ. 36 ಲಕ್ಷದಷ್ಟು ಜನಸಂಖ್ಯೆ ಹೊಂದಿರುವ ಗಾಣಿಗರು ಎರಡನೇ ಸ್ಥಾನದಲ್ಲಿದ್ದಾರೆ. ಬಣಜಿಗರದ್ದು ಮೂರನೇ ಸ್ಥಾನ. ಈ ಮೂರೂ ಪಂಗಡಗಳು ಸಾಮಾಜಿಕಾರ್ಥಿಕವಾಗಿ ಮುಂದುವರೆದ ಜಾತಿಗಳಾಗಿವೆ. ಇಲ್ಲಿಯವರೆಗೆ ಲಿಂಗಾಯತರಲ್ಲೇ ಸಾಮಾಜಿಕಾರ್ಥಿಕವಾಗಿ ಹಿಂದುಳಿದ ಒಳಪಂಗಡಗಳಾದ ಭಂಡಾರಿ, ಭಜಂತ್ರಿ, ಹಡಪದ, ಕುರುಶಿನಚೆಟ್ಟಿ, ಜಾಡರು, ಉಪ್ಪಾರ, ಅಕ್ಕಸಾಲಿ, ಕಮ್ಮಾರ, ಕಮ್ಮಸಾಲಿ, ಬಡಿಗ, ಅಗಸ, ಮಡಿವಾಳ, ಬಳೆಗಾಳ, ಸಿಂಪಿ, ನೀಲಗಾರ, ಬಳಿಜೇಡರು, ಹಟ್ಗಾರ್, ಸಜ್ಜನ, ಗೌಳಿ, ಹೂಗಾರ ಮುಂತಾದ ಪಂಗಡಗಳು ಮಾತ್ರವೇ ಒಬಿಸಿಯ 3-ಬಿ ಕ್ಯಟಗರಿಯ ಭಾಗವಾಗಿದ್ದವು. ಈ ಕ್ಯಟಗರಿಗೆ ಸಿಗುತ್ತಿದ್ದ ಶೇ.5 ಮೀಸಲಾತಿ ಸೌಲಭ್ಯ ನ್ಯಾಯಯುತವಾಗಿ ಈ ದುರ್ಬಲ ಪಂಗಡಗಳಿಗೇ ಸಿಗುತ್ತಿತ್ತು. ಈಗ ಪಂಚಮಸಾಲಿ, ವೀರಶೈವ ಸಾದರ, ಬಣಜಿಗ, ವೀರಶೈವ ಆರಾಧ್ಯರಂಥ ಲಿಂಗಾಯತರಲ್ಲೇ ಮುಂದುವರೆದ ಒಳಪಂಗಡಗಳನ್ನೂ ಈ ಕ್ಯಟಗರಿಗೆ ಸೇರಿಸಿರುವುದರಿಂದ ಶೇ.5ರಷ್ಟಿರುವ ತುಂಡು ಮೀಸಲಾತಿಯೆಲ್ಲವನ್ನೂ ಈ ಪ್ರಬಲ ಜಾತಿಗಳೇ ಬಾಚಿಕೊಳ್ಳುತ್ತವೆ. ಮೇಲೆ ತಿಳಿಸಲಾದ ದುರ್ಬಲ ಲಿಂಗಾಯತರು ಮತ್ತೆ ಮೀಸಲಾತಿಯಿಂದ ವಂಚಿತರಾಗಬೇಕಾಗುತ್ತದೆ; ಎಂದಿನಂತೆ ಅವರು ಪ್ರಬಲ ಲಿಂಗಾಯತರ ಕಾಲ್ತುಳಿತಕ್ಕೆ ಒಳಗಾಗಿ ನಲುಗಬೇಕಾಗುತ್ತದೆ.

ಈ ಸರಳ ಸತ್ಯ ಯಡ್ಡಿಗೆ ಅರ್ಥವಾಗದ ವಿಚಾರವೇನಲ್ಲ. ಲಿಂಗಾಯತರಲ್ಲಿರುವ ದುರ್ಬಲ ಜಾತಿಗಳನ್ನು ಉದ್ಧಾರ ಮಾಡುವುದು ಅವರ ಉದ್ದೇಶವಲ್ಲ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಅತಿ ಹೆಚ್ಚು ಸೀಟು ಗೆಲ್ಲುವುದು ಅವರ ಗುರಿ. ಅದಕ್ಕಾಗಿ ಬಹುಸಂಖ್ಯಾತರಾಗಿರುವ ಪಂಚಮಸಾಲಿ, ಗಾಣಿಗ, ಬಣಜಿಗರಂಥ ಜಾತಿಗಳನ್ನು ಒಲೈಸುವುದಕ್ಕೆ ಮುಂದಾಗಿದ್ದಾರೆ.


ಈಗ ಮೀಸಲಾತಿ ಪಟ್ಟಿಗೆ ಸೇರಿಸಿದ ಲಿಂಗಾಯತ ಒಳಪಂಗಡಗಳು ಎಷ್ಟು ಪ್ರಬಲವಾಗಿವೆ ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ಬೇಕಾದರೆ ಕೊಡಬಹುದು. ಬಣಜಿಗ ಪಂಗಡವನ್ನೇ ತೆಗೆದುಕೊಳ್ಳಿ. ಇದು ಲಿಂಗಾಯತರಲ್ಲಿ ಸಂಖ್ಯಾತ್ಮಕವಾಗಿ ದೊಡ್ಡ ಪಂಗಡವಾಗಿರದಿದ್ದರೂ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಬಹಳ ಪ್ರಬಲ ಪಂಗಡ. ಬ್ರಾಹ್ಮಣರು ಸಂಖ್ಯಾತ್ಮಕವಾಗಿ ಬೆರಳೆಣಿಕೆಯಷ್ಟಿದ್ದರೂ ಇಡೀ ಸಮಾಜವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುವಂತೆಯೇ ಲಿಂಗಾಯತರಲ್ಲಿ ಬಣಜಿಗರು ಸಂಖ್ಯಾತ್ಮಕವಾಗಿ ಕಡಿಮೆಯಿದ್ದರೂ ಇಡೀ ಲಿಂಗಾಯತ ಸಮುದಾಯವನ್ನು ನಿಯಂತ್ರಿಸುತ್ತಾರೆ. ರಾಜಕೀಯ ಕ್ಷೇತ್ರದಲ್ಲಿ ಅವರ ಪ್ರಾಬಲ್ಯವನ್ನೇ ನೋಡಿ. ಬಾದಾಮಿಯ ಪಟ್ಟಣಶೆಟ್ಟಿ, ಬಿಜಾಪುರದ ಅಪ್ಪು ಪಟ್ಟಣಶೆಟ್ಟಿ, ಸಿಂದಗಿಯ ಅಶೋಕ ಶಾಬಾದಿ, ರಾಯದುರ್ಗದ ಮಹಾದೇವ ಯಾದವಾಡ, ಬೈಲಹೊಂಗಲದ ಮೆಟಗುಡ್ಡ, ಕಿತ್ತೂರಿನ ಸುರೇಶ್ ಮಾರಿಹಾಳ, ಹಾನಗಲ್‌ನ ಸಿ.ಎಂ. ಉದಾಸಿ, ಸಿಗ್ಗಾಂವ್‌ನ ರಾಜಶೇಖರ್ ಸಿಂಧೂರ, ಬಾಲ್ಕಿಯ ಪ್ರಕಾಶ್ ಖಂಡ್ರೆ, ಹುಬ್ಬಳ್ಳಿಯ ಜಗದೀಶ್ ಶೆಟ್ಟರ್, ಅರಭಾವಿಯ ವಿ.ಎಸ್. ಕೌಜಲಗಿ, ಬೆಳಗಾಂವ್‌ನ ಸುರೇಶ್ ಅಂಗಡಿ – ಹೀಗೆ ಬಣಜಿಗ ಎಮ್ಮೆಲ್ಲೆ ಎಂಪಿಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಅಲ್ಲದೇ, ಈ ಹಿಂದೆ ಕರ್ನಾಟಕದ ಮುಖ್ಯಮಂತ್ರಿಗಾದಿಗೇರಿದ ಎಸ್.ಆರ್.ಕಂಠಿ, ಎಸ್.ನಿಜಲಿಂಗಪ್ಪ ವೀರೇಂದ್ರ ಪಾಟೀಲ್ ಮತ್ತು ಜೆ.[illegible] ಪಟೇಲ್ – ಎಲ್ಲರೂ ಬಣಜಿಗರೆ. ಈಗ ಮುಖ್ಯ[illegible] ಯಾಗಿರುವ ಬಿ.ಎಸ್.ಯಡಿಯೂರಪ್ಪ ಮುಂದು[illegible] ಗಾಣಿಗ ಲಿಂಗಾಯತ ಸಮುದಾಯಕ್ಕೆ ಸೇರಿದ[illegible] ಅದನ್ನೂ ಈಗ ಒಬಿಸಿಯ 3-ಬಿ ಕ್ಯಟಗರಿಗೆ ಸೇ[illegible] ಕೊಂಡಿದ್ದಾರೆ.

ಹಿಂದುಳಿದ ವರ್ಗಗಳ ಆಯೋಗದ ಮಾ[illegible] ಅಧ್ಯಕ್ಷರಾಗಿದ್ದ ಎಸ್.ಸಿದ್ದಲಿಂಗಯ್ಯ 2005ರಲ್ಲಿ ಹಿಂದು[illegible] ವರ್ಗಗಳಿಗೆ ಸಂಬಂಧಿಸಿದಂತೆ ಒಟ್ಟು 34 ಶಿಫಾರಸ್ಸುಗಳ[illegible] ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದರು. ಅದರಲ್ಲಿ ಗಾಣಿ[illegible] ಪಂಚಮಸಾಲಿ, ಬಣಜಿಗ, ಆರಾಧ್ಯರಂಥ ಲಿಂಗಾಯತರ[illegible] ಮುಂದುವರೆದ 19 ಒಳಪಂಗಡಗಳನ್ನು ಒಬಿಸಿಯ 3-[illegible] ಕ್ಯಟಗರಿಗೆ ಸೇರಿಸುವುದೂ ಒಂದಾಗಿತ್ತು. ಆದರ[illegible] ಯಡಿಯೂರಪ್ಪ ಉಳಿದ 33 ಶಿಫಾರಸ್ಸುಗಳನ್ನು ಬಿಟ್ಟು ಕೇವಲ ಇದನ್ನೊಂದೇ ಏಕೆ ಆಯ್ಕೆ ಮಾಡಿಕೊಂಡು ಜಾರಿಮಾಡಿದ್ದಾರೆ? ಅದೂ ಲೋಕಸಭಾ ಚುನಾವಣೆಗಳು ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ? ಈ ನಿರ್ಧಾರವ[illegible] ತೆಗೆದುಕೊಳ್ಳುವ ಮುಂಚೆ ಈಗಿನ ಹಿಂದುಳಿದ ಆಯೋಗದ ಅಧ್ಯಕ್ಷರಾಗಿರುವ ಡಾ.ಸಿ.ಎಸ್.ದ್ವಾರಕಾನಾಥ್ ಅವ[illegible] ಅಭಿಪ್ರಾಯವನ್ನು ನೆಪಮಾತ್ರಕ್ಕೂ ಕೇಳಿಲ್ಲ ಯಾಕೆ?

ಈ ಪ್ರಶ್ನೆಗಳಿಗೆ ಯಡಿಯೂರಪ್ಪನವರ ಹತ್ತಿ[illegible] ಉತ್ತರವಿಲ್ಲ. ಇದ್ದರೂ ಅದನ್ನು ಬಹಿರಂಗವಾಗಿ ಹೇಳಿಕೊಳ್ಳಲು ಆಗುವುದಿಲ್ಲ. ಆದರೆ, ಜನರ ಬಳಿ ಅದಕ್ಕೆ ಉತ್ತರವಿದೆ. ಈಗಾಗಲೇ ವಿವರಿಸಿರುವಂತೆ ಇಂಥ ನಿರ್ಧಾರಕ್ಕೆ ಮೊದಲನೆಯ ಕಾರಣ ಮುಂಬರುವ ಲೋಕಸಭಾ ಚುನಾವಣೆಗಳು. ಚುನಾವಣೆಯಲ್ಲಿ ಅತಿ ಹೆಚ್ಚು ಸೀಟು ಗೆಲ್ಲಬೇಕೆಂದರೆ ಬಹುಸಂಖ್ಯಾತರಾಗಿರುವ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಪ್ರಬಲರಾಗಿರುವ ಪಂಚಮಸಾಲಿ, ಗಾಣಿಗ, ಬಣಜಿಗರಂಥ ಜಾತಿಗಳನ್ನು ಬುಟ್ಟಿಗೆ ಹಾಕಿಕೊಳ್ಳಬೇಕು. ಇದು ಅವರ ಕಾರ್ಯತಂತ್ರ. ಅದಕ್ಕಾಗಿ ದುರ್ಬಲ ಲಿಂಗಾಯತರು ಬಲಿಯಾದರೂ ಪರವಾಗಿಲ್ಲ.

ಇನ್ನು ಎರಡನೆಯದಾಗಿ, ತಮ್ಮ ತಮ್ಮ ಜಾತಿಗಳೇ ಉಳಿದವರನ್ನು ಕಂಟ್ರೋಲ್ ಮಾಡಬೇಕು, ಉಳಿದವರ ಮೇಲೆ ಅಧಿಪತ್ಯ ಸಾಧಿಸಬೇಕು ಎಂಬ ಸ್ವಜನಪಕ್ಷಪಾತ. ಇದು ಅವರ ವ್ಯೂಹತಂತ್ರ. ಇವರ ಕಾರ್ಯತಂತ್ರ-ವ್ಯೂಹತಂತ್ರಗಳನ್ನೆಲ್ಲಾ ಚೆನ್ನಾಗಿ ಅರ್ಥಮಾಡಿಕೊಂಡಿರುವ, ಮೂಲತಃ ನಿಷ್ಪಕ್ಷಪಾತವಾಗಿ ಮತ್ತು ಪ್ರಗತಿಪರವಾಗಿ ಯೋಚಿಸುವ ಪ್ರಸ್ತುತ ಕರ್ನಾಟಕ ಹಿಂದುಳಿದ ವರ್ಗಗಳ ಅಧ್ಯಕ್ಷ ದ್ವಾರಕಾನಾಥ್ ಅಂಥವರ ಅಭಿಪ್ರಾಯ ಕೇಳಿದರೆ ಯಾವ ಪ್ರತಿಕ್ರಿಯೆ ಸಿಗುತ್ತದೆಂಬುದೂ ಯಡ್ಡಿಗೆ ಗೊತ್ತಿರುವ ಸತ್ಯ. ಆದ್ದರಿಂದ ಯಡ್ಡಿ ತೋರಿಕೆಗಾದರೂ ಅವರ ಅಭಿಪ್ರಾಯ ಕೇಳುವ ಗೋಜಿಗೆ ಹೋಗಿಲ್ಲ.

ಒಟ್ಟಿನಲ್ಲಿ ಯಡ್ಡಿಯು ನೈಜ ಮುಖ ಈಗ ಅನಾವರಣಗೊಳ್ಳುತ್ತಿದೆ. ಒಬಿಸಿ ಕುರಿತ ಅವರ ಈ ತೀರ್ಮಾನ ಅವರಿಗೇ ತಿರುಗು ಬಾಣವಾಗುವ ಸಾಧ್ಯತೆಯೇ ಹೆಚ್ಚು. ಕಳೆದ ಚುನಾವಣೆಯಲ್ಲಿ ಲಿಂಗಾಯತರಲ್ಲೇ ಸಾಮಾಜಿಕಾರ್ಥಿಕವಾಗಿ, ರಾಜಕೀಯವಾಗಿ ದುರ್ಬಲವಾಗಿರುವ ಒಳಪಂಗಡಗಳ ಜನರೂ ಕೂಡ "ಯಡಿಯೂರಪ್ಪ ನಮ್ಮವನು" ಎಂದು ಬಿಜೆಪಿಗೆ ಓಟು ಹಾಕಿದ್ದರು. ಈಗ ಅದೇ ಜನರಿಗೆ ನ್ಯಾಯಬದ್ಧವಾಗಿ ದೊರಕಬೇಕಿದ್ದ ಮೀಸಲಾತಿಯನ್ನು ಕಿತ್ತುಕೊಂಡು ಪ್ರಬಲರಿಗೆ ಕೊಡುವ ಮೂಲಕ ಅವರನ್ನು ಹೊಸಕಿಹಾಕುವ ತಂತ್ರ ಹೆಣೆದಿರುವುದು ಆ ಜನರಿಗೆ ಅರ್ಥವಾಗದ ವಿಚಾರವೇನಲ್ಲ. ಈಗ ಅವರು "ಯಡಿಯೂರಪ್ಪ ನಮ್ಮವನಲ್ಲ, ಗಾಣಿಗ ಜಾತಿಯವನು" ಎಂದು ನೋಡುತ್ತಾರೆ. ಅಷ್ಟರ ಮಟ್ಟಿಗದು ಯಡ್ಡಿಗೇ ತಿರುಗುಬಾಣ.



ಎರಡನೆಯದಾಗಿ ಈ ದುರ್ಬಲ ಒಳಪಂಗಡಗಳ ನಾಯಕರೂ ಯಡ್ಡಿಯ ಈ ತೀರ್ಮಾನದ ವಿರುದ್ಧ ಸಂಘಟಿತರಾಗುತ್ತಿದ್ದಾರೆ. ಒಳಗೊಳಗೇ ಕುದಿಯುತ್ತಿರುವ ಅಸಮಾಧಾನ ಸ್ಫೋಟಗೊಂಡರೆ ರಾಜ್ಯಾದ್ಯಂತ ದೊಡ್ಡ ದಂಗೆಯಾಗುವುದು ಖಚಿತ. ಈಗಾಗಲೇ ಯಡ್ಡಿಯ ಮುಖ್ಯಮಂತ್ರಿ ಕುರ್ಚಿ ಅಲ್ಲಾಡಿಸುತ್ತಿರುವ ಅನಂತಕುಮಾರ್ ಇಂತಹದ್ದೊಂದು ದಂಗೆಗಾಗಿ ಕಾಯುತ್ತಿದ್ದಾರೆ. ಹಾಗೇನಾದರೂ ಆದರೆ ಅದನ್ನೇ ನೆಪಮಾಡಿಕೊಂಡು ಅನಂತು[illegible] ಮುಖ್ಯಮಂತ್ರಿ ಕುರ್ಚಿಯನ್ನು ಇನ್ನಷ್ಟು ಅಲುಗಾಡಿಸಿ ಯಡ್ಡಿಯನ್ನು ಉರುಳಿಸುತ್ತಾರೆ...

ಕೊಲೆಯಾದವನು ಪೊಲೀಸನ ಮಗ ಕೊಂದದವರು ಮಾಜಿ ಮಿತ್ರರು


■ ರಾ. ಸೋಮನಾಥ್

ಗಳೂರಿನ ಲಾಭದಾಯಕ ಪೊಲೀಸ್
ಲ್ಲಿ ಬಂದರೇಟಿಗೆ ಮಾರಿಕೊಂಡ ಮುಖ್ಯ
ಗ ವಿಜಯೇಂದ್ರನ ದುರಾಚಾರ ತಕ್ಕ ಮುಲನ್ನೇ

ೀಸ್ ಹೆಡ್‌ಕಾನ್ಸ್‌ಟೇಬಲ್ ಒಬ್ಬನ ಮಗನೇ
ದರೆ ಅದೇ ಇಲಾಖೆಯ ಉನ್ನತಾಧಿಕಾರಿ
ುಗ್ಗ ಹುಡುಗರನ್ನು ಕೇಸಿಗೆ ಸಿಲುಕಿಸುತ್ತಾನೆ.
ಗಳಿಗೆ ಕೊಲೆಯಾದವನ ವಿರುದ್ಧವೇ ಹೇಳಿಕೆ
ನೆ ಮತ್ತು ಈ ಕಾರಣಕ್ಕೇ ಮಾನವಹಕ್ಕು
ದಿಂದ ಛೀಮಾರಿ ಹಾಕಿಸಿಕೊಳ್ಳುತ್ತಾನೆ.

ಬೆಂಗಳೂರಿನ ಆಯಕಟ್ಟಿನ ಪೊಲೀಸ್
ನ್ನೆಲ್ಲ ಹರಾಜಿಗಿಟ್ಟು ರೊಕ್ಕ ಬಾಚಿಕೊಂಡ
ತಂತ್ರಿ ಮಗ ವಿಜಯೇಂದ್ರನ ಪಾಪದ
ನೆ ಇನ್ನೇನು?

ಂಥಾ ಭೀಕರ ಕೊಲೆಯೆಂದರೆ, ಫೆಬ್ರವರಿ 17
್ಯಾಹ್ನ ಜಯನಗರದ ನಂದಿನಿ ಹೋಟೆಲ್‌ನ
ಕಣ್ಣಿಗೆ ಖಾರದ ಪುಡಿ ಎರಚಿದ ಹಂತಕರ



ಯಾದ ನವೀನ್

ಸಶಸ್ತ್ರ ಮೀಸಲು ಪಡೆಯ ಮುಖ್ಯಪೇದೆ ಜೆ.
ಣ್ಣನವರ ಮಗ ನವೀನ್ ಎಂಬಾತನನ್ನು ಕೊಚ್ಚಿ
ಲ್ಲುತ್ತದೆ. ಕೊಂದ ಹುಡುಗರು ತ್ಯಾಗರಾಜನಗರದ
ಗಳಷ್ಟೇ ಅಲ್ಲ, ಶ್ರೀರಾಮಸೇನೆಯ ನಾಯಕ
ಾಲಿಕ್ ನಂಬಿಕಸ್ತ ಬಂಟರು. ಇಪ್ಪತ್ತು ಮಂದಿಯ
ಕೊಚ್ಚಿದ ಏಟಿಗೆ ನವೀನ್‌ನ ಮುಖವೇ
ಹೋಗಿತ್ತು, ತಲೆ ಹೋಳಾಗಿ ನೇತುಬಿದ್ದಿತ್ತು,
ಬೆರಳುಗಳು ತುಂಡಾಗಿ ಬಿದ್ದಿದ್ದವು. ಬೆನ್ನೊಂದರಲ್ಲೇ
ಮೂವತ್ತಕ್ಕೂ ಹೆಚ್ಚು ಇರಿತದ ಗಾಯಗಳಿದ್ದವೆಂದರೆ;
ಷ್ಟು ಬರ್ಬರವಾಗಿ ಕೊಂದಿದ್ದ ರೆಂಬುದಕ್ಕೆ ಬೇರೆ
ಕಣೆ
ಲ್ಲ.
ಅದು
ುಡುಗರು
ಕ ಜಗಳ.
ನ್
ಆ ರ
ಮುಖ್ಯಪೇದೆ
ರಾಜಣ್ಣನ
ನ್ನೇ ಮಗ.
ರಾಜಣ್ಣ ಪೊಲೀಸ್ ಇಲಾಖೆಗೆ ರಾಷ್ಟ್ರೀಯ ಮಟ್ಟ
ಪ್ರಶಸ್ತಿ ಗಳಿಸಿಕೊಟ್ಟ ಕ್ರೀಡಾಪಟು. ಆತನ ಮಗ
ನ್ ಬೆಂಗಳೂರು ಮಹಾನಗರ ಪಾಲಿಕೆಯ ಕಬಡ್ಡಿ
ುಗೆ ಆಡುತ್ತಿದ್ದ, ಜೊತೆಗೆ ಉದಯೋನ್ಮುಖ ಬಾಕ್ಸರ್
ದ. ಹಿಂದೊಮ್ಮೆ ಕತ್ರಿಗುಪ್ಪೆಯ ರೌಡಿ ಪರಂಧಾಮನ
ಗ್ ಮಂತ್ರಿ, ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು ಜೊತೆ
ಗಳ್ಳತನ ಮಾಡಿಕೊಂಡಿದ್ದ ಗೋವಿಂದು ಎಂಬಾತನ
ಲೆ. ದಾಳಿ ನಡೆಸಿದ ಕೇಸಿಗೆ ಈ ನವೀನ್ ಕೂಡ
ುಕಿಕೊಂಡ. ನಾಲ್ಕು ತಿಂಗಳು ಜೈಲಲ್ಲೂ ಇದ್ದ.
ನವೀನ್‌ನ ತಂದೆ ರಾಜಣ್ಣ ಪೊಲೀಸ್ ಪೇದೆಯಾ
ಕಷ್ಟಪಟ್ಟು ಫೈನಾನ್ಸಿಂಗ್ ಮಾಡುತ್ತಾನೆ. ತ್ಯಾಗರಾಜ
ನಗರ ಸಾಯಿಬಾಬಾ ದೇವಸ್ಥಾನದ ಎದುರಿಗೇ ಬಾಡಿಗೆ
ಮನೆಯಲ್ಲಿದ್ದ ನವೀನ್‌ಗೆ ಅದೇ ರಸ್ತೆಯ ಶಿವಕುಮಾರ್
ಉರ್ಫ್ ಕೋದಂಡ, ಸಾಗರ್, ನಾಗಸಂದ್ರದ ಮೆಕ್ಕಾರಘು,
ಕರಿಬೇವು ಸೊಪ್ಪು ಮಂಜ, ಕಡ್ಡಿ ನವೀನ, ಅಜಯ್,

ಕಲರ್, ದಿಲೀಪ ಮುಂತಾದವರೆಲ್ಲ ಚಡ್ಡಿ ದೋಸ್ತ್‌ಗಳು.


ಈ ಪೈಕಿ ಶಿವಕುಮಾರ್ ಉರ್ಫ್ ಕೋದಂಡ, ಸಾಗರ್, ಮೆಕ್ಕಾರಘು ಮುಂತಾದವರೆಲ್ಲ ಪ್ರಮೋದ್ ಮುತಾಲಿಕ್‌ನ ಶ್ರೀರಾಮಸೇನೆಯ ಪಕ್ಕಾ ಕಾರ್ಯಕರ್ತರು. ಪ್ರತಿವರ್ಷ ಗಣೇಶೋತ್ಸವದ ಹೆಸರಲ್ಲಿ ಸರಿಸುಮಾರು ಹತ್ತು ಲಕ್ಷದಷ್ಟು ರೋಲ್‌ಕಾಲ್ ಮಾಡುವ ಕೋದಂಡನ ಗ್ಯಾಂಗ್ ಪ್ರೇಮ್ ನಿರ್ದೇಶನದ 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರದ ವಿರುದ್ಧ ಕಪಾಲಿ ಚಿತ್ರಮಂದಿರದ ಮೇಲೆ ದಾಳಿ ನಡೆಸಿತ್ತು. ತ್ಯಾಗರಾಜನಗರದ ಆತ್ಮಶ್ರೀ ವಿದ್ಯಾ ಸಂಸ್ಥೆಯ ಮೈದಾನವೇ ಕೋದಂಡನ ಅಡ್ಡೆ.

ಇಲ್ಲಿಗೆ ವರ್ಷದ ಹಿಂದಷ್ಟೇ ಕೋದಂಡನ ಗ್ಯಾಂಗ್ ಇದೇ ತ್ಯಾಗರಾಜನಗರದಲ್ಲಿ ಪ್ರಮೋದ್ ಮುತಾಲಿಕ್‌ಗೊಂದು ಬಾಡಿಗೆ ಮನೆ ಹುಡುಕುತ್ತಿತ್ತು. ಗಣೇಶೋತ್ಸವಕ್ಕೆಂದು ಚಂದಾ ಎತ್ತಿದ ರೋಲ್‌ಕಾಲ್ ದುಡ್ಡನ್ನೇ ಬಡ್ಡಿಗೆ ಬಿಡಲಾರಂಭಿಸಿದ ಕೋದಂಡ ಕುಮಾರನ್ಸ್ ಸ್ಕೂಲಿನ ಹುಡುಗಿಯೊಬ್ಬಳ ಅತ್ಯಾಚಾರಕ್ಕೆ ಯತ್ನಿಸಿ ತ್ಯಾಗರಾಜನಗರ ಪೊಲೀಸರಿಗೆ ಸಿಕ್ಕಿಬಿದ್ದ. ಆಗ ಕೋದಂಡನ ನೆರವಿಗೆ ಬಂದವನು ಸಾಕಮ್ಮ ತೋಪಿನ ಪಾತಕಿ ಬಾಕ್ಸರ್ ಮಂಜು. ಈತ ಸುರಾನಾ ಕಾಲೇಜಿನಲ್ಲಿ ಅಡ್ಡೆ ಹಾಕುತ್ತಾನೆ.

ಶ್ರೀರಾಮಸೇನೆಯ ರೌಡಿಗಳಾದ ಕೋದಂಡ, ಸಾಗರ್, ಮೆಕ್ಕಾರಘು ಮಾತ್ರವಲ್ಲದೇ ಬಾಕ್ಸರ್ ಮಂಜ, ದೆಡ್ಡಿ ಸೋಮನ ಶಿಷ್ಯ ವಿಜಯಸಾರಥಿ, ಮತ್ತೊಬ್ಬ ರೌಡಿ ತೋಪುರಾಜ, ನರಸಿಂಹ, ಕಡ್ಡಿ ನವೀನ, ಮಧು, ಕರಿಬೇವಿನಸೊಪ್ಪು ಮಂಜ ಮುಂತಾದವರ ಹೆಸರು ಬರೆದೇ ದೂರುಕೊಟ್ಟಿದ್ದ.

ಈ ಥರದ ಕೊಲೆಗಳಾದಾಗಲೆಲ್ಲ ಬೆಂಗಳೂರು ಪೊಲೀಸರು ಸಾಮಾನ್ಯವಾಗಿ ಸಂಬಂಧಿಗಳು ನೀಡಿದ ದೂರಿನ ಆಧಾರದ ಮೇಲೆ ಎಫ್‌ಐಆರ್ ಹಾಕುತ್ತಾರೆ. ಕೊಲೆಯಾದವನ ರಕ್ತಸಂಬಂಧಿಗಳು ಕೊಟ್ಟ ದೂರನ್ನು ಆಧಾರವಾಗಿಟ್ಟುಕೊಂಡೇ ಆರೋಪಿಗಳನ್ನು ಬಂಧಿಸುತ್ತಾರೆ. ಗಾರ್ಡನ್ ಸಿಟಿ ಆಸ್ಪತ್ರೆಯಲ್ಲಿದ್ದ ಮಗನ ಹೆಣದ ಮುಂದೆ ನಿಂತು ನ್ಯಾಯಕೊಡಿಸುವಂತೆ ಬೆಂಗಳೂರು ದಕ್ಷಿಣದ ಡಿಸಿಪಿ ರವಿಯವರ ಕಾಲಿಗೆ ಬಿದ್ದ ಪೇದೆ ರಾಜಣ್ಣನಿಗೆ ಎಂಥಾ ಆಘಾತವಾಯಿತೆಂದರೆ; ಜಂಟಿ ಪೊಲೀಸ್ ಕಮೀಷನರ್ ಪೂಜಾರ್‌ಗೆ 'ಈತನ ಮಗ ರೌಡಿ. ಆತನ ವಿರುದ್ಧ ಅಲ್ಲಿ ಕೇಸಿದೆ" ಇಲ್ಲಿ ಕೇಸಿದೆ ಎಂದು ಹೇಳಲಾರಂಭಿಸಿದ್ದಾರೆ.

ಇಷ್ಟಾದ ಮೇಲಾದರೂ ಡಿಸಿಪಿ ರವಿ ಆರೋಪಿಗಳನ್ನು ನ್ಯಾಯವಾಗಿ ಬಂಧಿಸಿದ್ದರೆ ಆ ಮಾತು ಬೇರೆಯಿತ್ತು. ವಿಚಿತ್ರವೆಂದರೆ ಮಗನ ಹತ್ಯೆಯ ವಿರುದ್ಧ ತಂದೆಯೇ ದೂರು ಕೊಟ್ಟಾಗಲೂ ಆ ದೂರನ್ನು ದಾಖಲಿಸಿಕೊಳ್ಳಲಿಲ್ಲ. ಕಾನೂನಿನಂತೆ ಕೊಡಬೇಕಿದ್ದ ಎಫ್‌ಐಆರ್ ಪ್ರತಿಯನ್ನೂ ಕೊಡಲಿಲ್ಲ. ಫೆಬ್ರವರಿ 17ರ ಮಧ್ಯಾಹ್ನ ನಡೆದ ಕೊಲೆಯ ಆರೋಪಿಗಳೆಲ್ಲ ಮರುದಿನ ಬೆಳಿಗ್ಗೆ ಎಂಟು ಗಂಟೆಗೇ ಜಯನಗರ ಪೊಲೀಸ್ ಠಾಣೆಯಲ್ಲಿದ್ದರು. ಈ ಪೈಕಿ ಸಾಗರ್, ಮಧು, ಕಡ್ಡಿ ನವೀನ ಮತ್ತು ಅಜಯ್ ಬಿಟ್ಟರೆ ಉಳಿದಂತೆ ದಿಲೀಪ, ಕಲರ್, ಚಂದು ಮತ್ತು ರಾಘವೇಂದ್ರ ಎಂಬ ನಾಲ್ಕು ಮಂದಿ ಹುಡುಗರು ತ್ಯಾಗರಾಜನಗರದ ಮೋನಿಕಾ ಫಾರ್ಮ್ ಎಂಬ ಔಷಧಿ ಕಂಪನಿಯ ಕೆಲಸಗಾರರು. ಕೊಲೆ ನಡೆದ ದಿನ ಅವರೆಲ್ಲ ಕೆಲಸ ಮಾಡಿದ ಬಗ್ಗೆ ಮೋನಿಕಾ ಫಾರ್ಮಾದ ಹಾಜರಿ ಪುಸ್ತಕವೇ ಸಾಕ್ಷಿಯಾಗಿತ್ತು.



ಡಿಸಿಪಿ ರವಿ


ಕೊಲೆಗೆ ಮೂಲ ಕಾರಣರಾದ ಕೋದಂಡ, ಬಾಕ್ಸರ್ ಮಂಜು, ವಿಜಯಸಾರಥಿ, ನರಸಿಂಹ, ತೋಪುರಾಜ, ಮೆಕ್ಕಾ ರಘು, ಕರಿಬೇವಿನ ಸೊಪ್ಪು ಮಂಜ ಮುಂತಾದವರನ್ನು ಕೊಲೆ ಕೇಸಿನಿಂದಲೇ ಡಿಸಿಪಿ ರವಿ ಕೈಬಿಟ್ಟಿದ್ದರು.

ಸರಿ, ಡಿಸಿಪಿ ರವಿ ಹೇಳಿದಂತೆ ಕೊಲೆಯಾದ ನವೀನ್ ವಿರುದ್ಧ ಕ್ರಿಮಿನಲ್ ಕೇಸೇ ಇತ್ತೆಂದುಕೊಂಡರೂ ಈ ಭಾಗದ ಯಾರೇ ರೌಡಿಗಳು ಬಡಿದಾಡಿಕೊಂಡರೂ ಪೊಲೀಸ್ ಕೇಸಾಗದ ಹಾಗೇ ಡೀಲು ಕುದುರಿಸುವುದರಲ್ಲಿ ಬಾಕ್ಸರ್ ಮಂಜ ನಿಸ್ಸೀಮ.

ಈ ಬಾಕ್ಸರ್ ಮಂಜನೇ ಪೊಲೀಸ್ ಪೇದೆ ರಾಜಣ್ಣನ ಮಗ ನವೀನನನ್ನು ಹೈದ್ರಾಬಾದಿಗೆ ಒಯ್ದು ಬಾಕ್ಸಿಂಗ್ ತರಬೇತಿ ಕೊಡಿಸಿದ್ದ. ಆತನನ್ನು ರೌಡಿಯನ್ನಾಗಿ ಮಾಡಿ ತನ್ನ ಫೈನಾನ್ಸಿಂಗ್ ದಂಧೆಗೆ ಬಳಸಿಕೊಳ್ಳುವ ದುರಾಶೆ ಬಾಕ್ಸರ್ ಮಂಜನಿಗಿತ್ತು. ಅಪ್ಪ ರಾಜಣ್ಣನಿಗೂ ಶ್ರೀರಾಮಸೇನೆಯ ಪಾತಕಿ ಕೋದಂಡ ಮತ್ತು ಬಾಕ್ಸರ್ ಮಂಜು ಒಟ್ಟೊಟ್ಟಿಗೆ ಸೇರಿಕೊಂಡೇ ಮೀಟರ್ ಬಡ್ಡಿ ದಂಧೆ ನಡೆಸುತ್ತಾರೆ. ಯಾವತ್ತು ರೌಡಿ ಪರಂಧಾಮನ ಜೊತೆ ಕೇಸಿಗೆ ಫಿಟ್ಟಾಗಬೇಕಾಗಿ ಬಂತೋ ಆವತ್ತಿನಿಂದ



ಕೊಲೆ ಯಾದ ನವೀನ್



ಕೋದಂಡ




ಸಾಗರ್

ಕೋದಂಡ ಮತ್ತು ಬಾಕ್ಸರ್ ಮಂಜು ಗ್ಯಾಂಗಿನಿಂದಲೇ ಹೊರಬಿದ್ದು ತನ್ನ ಪಾಡಿಗೆ ತಾನಿದ್ದುದ್ದೇ ನವೀನ ಮಾಡಿದ ತಪ್ಪಾಗಿತ್ತು. ಈ ಮಧ್ಯೆ ಪೀಸಿ ರಾಜಣ್ಣ ಮಗ ನವೀನ ಒಂದಷ್ಟು ಹುಡುಗರ ಗ್ಯಾಂಗ್ ಕಟ್ಟಿಕೊಂಡು ಹೋಗಿ ಬಾಕ್ಸರ್ ಮಂಜನಿಗೆ ಹೊಡೆದು ಬಂದಿದ್ದರು.

ತನ್ನ ಗೆಳೆಯನ ಮೊಬೈಲಿಗೆ ಮಿಸ್‌ಕಾಲ್ ಕೊಟ್ಟು ತರಲೆ ಮಾಡುತ್ತಿದ್ದ ಕೋದಂಡನ ಶಿಷ್ಯ ಸಾಗರ್ ಎಂಬಾತನಿಗೆ ನವೀನ್ ಬಯ್ದಿದ್ದನ್ನೇ ನೆಪ ಮಾಡಿಕೊಂಡ ಕೋದಂಡ ಮಂಜನ ಹುಡುಗರನ್ನು ಬಿಟ್ಟು ಫೆಬ್ರವರಿ 17ರ ಮಧ್ಯಾಹ್ನ ನವೀನ್‌ನನ್ನು ಕೊಲ್ಲಿಸಿಬಿಟ್ಟ. ತ್ಯಾಗರಾಜನಗರ ಸುತ್ತಮುತ್ತ ತಮ್ಮನ್ನು ಬಿಟ್ಟರೆ ಬೇರೆ ಯಾರೂ ತಲೆ ಎತ್ತಕೂಡದೆಂಬ ಸೊಕ್ಕನ್ನು ಬಿಟ್ಟರೆ ನವೀನ್ ಹತ್ಯೆಗೆ ಬೇರೆ ಯಾವುದೇ ಕಾರಣವಿಲ್ಲ. ಮಗನ ಕೊಲೆ ನಡೆದ ವಿಷಯ ಗೊತ್ತಾಗಿದ್ದೇ ಜಯನಗರ ಪೊಲೀಸ್ ಠಾಣೆಗೆ ಬಂದ ಹೆಡ್‌ಕಾನ್ಸ್‌ಟೇಬಲ್ ರಾಜಣ್ಣ ತನ್ನ ದೂರಿನಲ್ಲಿ ಶ್ರೀರಾಮಸೇನೆಯ ರೌಡಿಗಳಾದ...

ಅಪ್ಪ ಹಾಕಿದ ಹಾದಿ....



ನವೀನನ ಬದುಕು ಹೀಗೆ ದುರಂತಮಯವಾಗಿ ಕೊನೆಗೊಳ್ಳಲು ಅವರಪ್ಪ ಪೀಸಿ ರಾಜಣ್ಣನೂ ಬಹುಮಟ್ಟಿಗೆ ಕಾರಣ.


ಕೆಎಸ್‌ಆರ್‌ಪಿ ದಫೇದಾರ್ ಆಗಿರುವ ರಾಜಣ್ಣ ನಾಗಸಂದ್ರ ಏರಿಯಾದಲ್ಲಿ ಪೀಸಿರಾಜ ಎಂದೇ ಕುಖ್ಯಾತ. ಮೊದಲಿಂದಲೂ ಪಾತಕ ಜಗತ್ತಿನ ಸೈಕಲ್ ರವಿ ಜೊತೆ ರಾಜಣ್ಣನಿಗೆ ಲಿಂಕ್ ಇತ್ತು. ಎನ್.ಆರ್. ಕಾಲೋನಿಯ ಹಣ್ಣು-ಹೂ ತರಕಾರಿ ಮಾರುವ ಹೆಂಗಸರಿಗೆ ಮೀಟರ್ ಬಡ್ಡಿ ಲೆಕ್ಕದಲ್ಲಿ ಸಾಲ ಕೊಡುತ್ತಿದ್ದ. ನಂತರ ಮಗ ನವೀನ ಕೆಟ್ಟವರ ಸಹವಾಸಕ್ಕೆ ಬಿದ್ದಮೇಲೂ ರಾಜಣ್ಣ ಎಚ್ಚೆತ್ತುಕೊಳ್ಳಲಿಲ್ಲ. ಬೆಂಗಳೂರಿನ ರೌಡಿ ಜಗತ್ತಿನಲ್ಲಿ ಮಿತ್ರರು-ಶತ್ರುಗಳು ಸದಾ ಬದಲಾಗುತ್ತಿರುತ್ತಾರೆ. ಆ ಸುಳಿಯೊಳಗೆ ನವೀನನೂ ಸಿಕ್ಕಿಬಿದ್ದ. ಒಂದು ಕಾಲದಲ್ಲಿ ಗೆಣೆಕಾರರಾಗಿದ್ದವರೇ ಅವನ ಶತ್ರುಗಳಾದರು. ತಾನು ಪೊಲೀಸ್ ಆಗಿರುವುದರಿಂದ ಮಗನಿಗೆ ಯಾರಿಂದಲೂ ಆಪತ್ತು ಬರಲಾರದೆಂದು ರಾಜಣ್ಣ ಕಲ್ಪಿಸಿಕೊಂಡಿದ್ದನೇನೊ.

ಅದೀಗ ಸುಳ್ಳಾಗಿದೆ.

ಡಿಸಿಪಿ ರವಿ ಕಾಲಿಗೆ ಬಿದ್ದಾಗ ಅವರು ಒದ್ದರೆಂದು ರಾಜಣ್ಣ ಹೇಳುತ್ತಾನೆ. ಇಲ್ಲ ಕಾಲು ಬಿಡಿಸಿಕೊಳ್ಳಲು ಹೋದಾಗ ರಾಜಣ್ಣನೇ ಕೆಳಗೆ ಬಿದ್ದ ಎಂದು ಬೇರೊಬ್ಬರು ಹೇಳುತ್ತಿದ್ದಾರೆ. ಈ ಹತ್ಯೆಯ ಹಿಂದಿರುವ ಅಸಲಿ ಆರೋಪಿಗಳಿಗೆ ಶಿಕ್ಷೆಯಾಗಲೇ ಬೇಕು. ಆ ಬಗ್ಗೆ ಡಿಸಿಪಿ ರವಿ ಹಾಗೂ ಪೀಸಿ ರಾಜಣ್ಣನಾದಿಯಾಗಿ ಎಲ್ಲರೂ ನಿಗಾ ಇಡಲಿ. ■

ಹಾಗಂತ ಆತನನ್ನು ಕೊಂದವರೇನು ಸಾಚಾಗಳೇ. ಕೊಂದವರ ಪೈಕಿ ತೋಪುರಾಜ ಈ ಹಿಂದೆ ಬಹಾದ್ದೂರ್ ಎಂಬಾತನ ಕೊಲೆ ಕೇಸಿನಲ್ಲಿದ್ದ. ಶಾಂತಿ ಟಾಕೀಸ್ ಪಕ್ಕದಲ್ಲಿ ನಡೆದ ಮತ್ತೊಂದು ಕೊಲೆಯಲ್ಲೂ ತೋಪುರಾಜನೇ ಪ್ರಮುಖ ಆರೋಪಿ. ನಾಗಸಂದ್ರದ ಕರಿಬೇವು ಸೊಪ್ಪು ಮಂಜ ಮತ್ತು ನರಸಿಂಹ ಇಬ್ಬರೂ ಪುಡಿ ರೌಡಿಗಳೇ. ಇಂಥವರ ವಿರುದ್ಧ ಕೊಲೆಯಾದವನ ತಂದೆಯೇ ದೂರುಕೊಟ್ಟರೂ ಅವನ್ನು ಬಂಧಿಸದೇ ಯಾರೋ ಅಬ್ಬೇಪಾರಿಗಳನ್ನು ಯಾಕೆ ರವಿ ಸಿಲುಕಿಸಿದರು?

ಹೋಗಲಿ, ಯಾರನ್ನೆಲ್ಲ ಹಂತಕರೆಂದು ಜಯನಗರದ ಇನ್ಸ್‌ಪೆಕ್ಟರ್ ಲೋಕೇಶ್ ತೋರಿಸುತ್ತಾರೋ ಈ ಬಗ್ಗೆ ಕೊಲೆಯಾದವನ ತಂದೆಗೆ ಕಾಟಾಚಾರಕ್ಕಾದರೂ ಮಾಹಿತಿ ಕೊಡಬೇಕಲ್ಲವೆ? ಈತನಕ ಹತನ ತಂದೆಯನ್ನು ಕರೆದು ಕೊಲೆ ಕೇಸಿನ ಬಗ್ಗೆ ನೆಪಕ್ಕೂ ಪೊಲೀಸರು ಮಾತಾಡಿಲ್ಲ. ಬದಲಾಗಿ ಇದು ಹುಡುಗಿ ವಿಷಯಕ್ಕಾದ ಗಲಾಟೆ ಎನ್ನುತ್ತಾರೆ. ಹುಡುಗಿ ವಿಷಯಕ್ಕೇ ಆಗಿದ್ದರೆ ಹಳೇ ಜಿದ್ದಿಗೆ ನಡೆದದ್ದೆಂದು ಮತ್ತೆ ಏಕೆ ಡಿಸಿಪಿ ರವಿ ಪತ್ರಕರ್ತರಿಗೆ ಸ್ಪಷ್ಟನೆ ಕೊಡುತ್ತಾರೆ?



ಐಪಿಎಸ್ ಮಟ್ಟದ ಓರ್ವ ಡಿಸಿಪಿಯೇ ಹೀಗೆ ಮಾತಾಡುತ್ತಾರೆಂದರೆ ಬಿಜೆಪಿ ಸರ್ಕಾರದ ಪೊಲೀಸ್ ವ್ಯವಸ್ಥೆ ಇನ್ನೆಷ್ಟು ಕುಲಗೆಟ್ಟಿರಬೇಕ? ■

ಎಮ್ಮೆಲ್ಲೆ ವಿಜಯ್‌ಕುಮಾರ್ ಬೆಂಬಲಿಗರು?

ಯಾವ ಶ್ರೀರಾಮಸೇನೆಯ ಕೋದಂಡನೇ ತನ್ನ ಮಗನ ಕೊಲೆಗೆ ಮೂಲ ಕಾರಣನೆಂದು ಪೊಲೀಸ್ ಪೇದೆ ರಾಜಣ್ಣನೇ ದೂರು ಬರೆದು ಕೊಟ್ಟನೋ ಅದೇ ಕೋದಂಡನನ್ನು ಬಂಧಿಸದೇ ಕೈಬಿಟ್ಟಿದ್ದಾರೆ ಪೊಲೀಸರು. ಹಂತಕರ ಪೈಕಿ ಬಹುತೇಕರು ಶ್ರೀರಾಮ ಸೇನೆಯ ಸೈನಿಕರು. ಎಮ್ಮೆಲ್ಲೆ ವಿಜಯ್‌ಕುಮಾರ್ ಹೇಳದೇ ಡಿಸಿಪಿ ರವಿ ಹಂತಕರನ್ನು ಕೈಬಿಟ್ಟಿರಲಿಕ್ಕಿಲ್ಲ ಎಂಬುದು ಒಂದು ಆರೋಪ.

ಕನಿಷ್ಠ ಕಮೀಷನರ್ ಶಂಕರ್ ಬಿದರಿಯವರಾದರೂ ಅಸಲೀ ಹಂತಕರನ್ನು ಶಿಕ್ಷಿಸಲು ಆಸಕ್ತಿ ವಹಿಸುತ್ತಿದ್ದಾರಲ್ಲ ಅದೊಂದೇ ಪೇದೆ ರಾಜಣ್ಣನ ಪಾಲಿನ ಆಶಾಕಿರಣ. ■

ಭಿನ್ನಾಭಿಪ್ರಾಯ, ಬಂಡಾಯದ ನಡುವೆ
ಸಿನಿಮಾ ಮಹೋತ್ಸವ





ಇನ್ನು ಹತ್ತೇ ದಿನಗಳಲ್ಲಿ ಚಿತ್ರರಂಗದ ಅಮೃತ ಮಹೋತ್ಸವ ಕಾರ್ಯಕ್ರಮ ನಡೆಯಲಿದೆ. ಒಂದೆಡೆ ಈ ಕಾರ್ಯಕ್ರಮಕ್ಕೆಂದು ಈಗಾಗಲೇ ಹದಿನೈದು ದಿನಗಳ ರಜೆಯನ್ನು ಘೋಷಿಸಿರುವುದರಿಂದ ಗಾಂಧಿನಗರದಲ್ಲಿ ಯಾವುದೇ ಚಿತ್ರೀಕರಣ, ರೆಕಾರ್ಡಿಂಗ್ ಇತ್ಯಾದಿ ನಡೆಯುತ್ತಿಲ್ಲ. ಇನ್ನೊಂದೆಡೆ ನಾಯಕ-ನಾಯಕಿಯರು ಕ್ರೇಜಿಸ್ಟಾರ್ ರವಿಚಂದ್ರನ್ ನಾಯಕತ್ವದಲ್ಲಿ ನೃತ್ಯಗಳ ತಾಲೀಮು ನಡೆಸುತ್ತಿದ್ದಾರೆ.

ಆದರೆ ಇವುಗಳ ಮಧ್ಯೆ ಒಳಗೊಳಗೇ ಈ ಅಮೃತಮಹೋತ್ಸವ ಗೊಂದಲಗಳಿಂದ, ಕಿತ್ತಾಟದಿಂದು ತುಂಬತುಳುಕುತ್ತಿದೆ. ಚಿತ್ರರಂಗದಲ್ಲೇ ಈ ಕಾರ್ಯಕ್ರಮದ ಬಗ್ಗೆ ಅತೃಪ್ತಿ ಮತ್ತು ಅಸಮಾಧಾನಗಳಿವೆ. ಇಡೀ ಕಾರ್ಯಕ್ರಮವನ್ನು ಚೇಂಬರ್‌ನವರು ಮೂರು ಕೋಟಿ ರೂಪಾಯಿಗಳಿಗೆ ಉದಯಟಿವಿಗೆ ಧಾರೆಯೆರೆದದ್ದು ಅನೇಕ ನಾಯಕ-ನಾಯಕಿಯರಿಗೆ ಕೋಪತರಿಸಿದೆ. "ನಾವು ಒಂದು ಖಾಸಗಿ ಚಾನೆಲ್‌ಗೋಸ್ಕರ ನೃತ್ಯ ಮಾಡಬೇಕೆ?" ಎಂದು ಅವರೆಲ್ಲ ಅಪಸ್ವರ ಎತ್ತಿದ್ದಾರೆ. ಇಂತಹ ಬಹುದೊಡ್ಡ ಅದ್ದೂರಿ ಕಾರ್ಯಕ್ರಮಕ್ಕೆ ಪ್ರಾಯೋಜಕರು ಬೇಕು ನಿಜ. ಹಾಗಂತ ಇಡೀ ಕಾರ್ಯಕ್ರಮವನ್ನು ಒಂದು ಟಿವಿ ಚಾನೆಲ್‌ಗೆ ಮಾತ್ರ ನೀಡಬಾರದಿತ್ತು ಎಂಬುದು ಅವರೆಲ್ಲರ ಅಭಿಪ್ರಾಯವಾಗಿದೆ. ಚೇಂಬರ್‌ನಲ್ಲೂ ಈ ಬಗ್ಗೆ ಈಗ ಎರಡು ಗುಂಪುಗಳಾಗಿವೆ. ಚೇಂಬರ್ ಅಧ್ಯಕ್ಷೆ ಜಯಮಾಲಾರವರು ಮಾಡಿದ ಈ ಯಡವಟ್ಟಿನಿಂದ ಸಂಭ್ರಮದ ವಾತಾವರಣದಲ್ಲಿ ಅಪಸ್ವರ ಕಾಣಿಸಿಕೊಂಡಿದೆ.

ಕೋಪಗೊಂಡ ಯಡ್ಡಿ

ಸರ್ಕಾರವನ್ನು ಒಂದು ಮಾತೂ ಕೇಳದೆ ಉದಯ ಟಿವಿಯವರಿಗೆ ಈ ಕಾರ್ಯಕ್ರಮದ ಪ್ರಾಯೋಜಕತ್ವವನ್ನು ವಹಿಸಿದ್ದು ಯಡಿಯೂರಪ್ಪನವರಿಗೆ ಸಿಟ್ಟುತರಿಸಿತು. ಆದ್ದರಿಂದ ಈ ಸಮಾರಂಭವನ್ನು ಅದ್ದೂರಿಯಿಂದ ಆಚರಿಸಬೇಕೆಂಬ ಉತ್ಸಾಹದಲ್ಲಿದ್ದ ಯಡ್ಡಿ ಸುಮ್ಮನಾದರು. ಅವರಿಗೆ ಈ ಉದ್ಯಮದ ಮೇಲೆ ಎಷ್ಟೊಂದು ಸಿಟ್ಟಿದೆಯೆಂದರೆ ಹೋದಲ್ಲೆಲ್ಲಾ ಮಠ ಮತ್ತು ದೇವಸ್ಥಾನಗಳಿಗೆ ಕೋಟ್ಯಂತರ ರೂಪಾಯಿಗಳ ದೇಣಿಗೆ ನೀಡುವ ಯಡ್ಡಿ ಮೊನ್ನಿನ ಬಜೆಟ್‌ನಲ್ಲಿ ಚಿತ್ರರಂಗಕ್ಕೆ ಏನನ್ನೂ ನೀಡಲಿಲ್ಲ. ಅಷ್ಟೇ ಅಲ್ಲ ಅಮೃತ ಮಹೋತ್ಸವದ ಭವನಕ್ಕೆ ಜುಜುಬಿ ಐದು ಕೋಟಿ ರೂಪಾಯಿಗಳನ್ನು ಘೋಷಿಸಿದ ಯಡ್ಡಿ ಪರಭಾಷಾ ಚಿತ್ರಗಳ ತೆರಿಗೆಯನ್ನು ಸ್ವಲ್ಪ ಇಳಿಸಿ ಗಾಂಧಿನಗರದವರು ಬೆಚ್ಚಿ ಬೀಳಿಸಿದರು.

ಬಂಡೆದ್ದ ಕಾರ್ಮಿಕರು

ಒಂದೆಡೆ ಯಡ್ಡಿ ತಮ್ಮ ಕೋಪವನ್ನು ಈ ರೀತಿ ವ್ಯಕ್ತಪಡಿಸಿದರೆ ಇನ್ನೊಂದೆಡೆ ಕಾರ್ಮಿಕ ಸಂಘದ ನಾಯಕ ಅಶೋಕ್ ಕೂಡಾ ಬಂಡಾಯದ ಬಾವುಟ ಹಾರಿಸಿದರು. "ಚಿತ್ರೋದ್ಯಮಕ್ಕೆ ಹದಿನೈದು ದಿನ ರಜಾ ಘೋಷಿಸಿದಾಗ ಸಮಾರಂಭದ ತಯಾರಿ ಸಂದರ್ಭದಲ್ಲಿ ನಮ್ಮ ಕಲಾ ನಿರ್ದೇಶಕರು, ಇತರ ಕಾರ್ಮಿಕರನ್ನು ಬಳಸುತ್ತಾರೆ ಎಂದು ನಂಬಿದ್ದೆವು. ಆದರೆ ಈಗ ಅದಕ್ಕೆ ತಮಿಳು ನಾಡಿನಿಂದ ಕೆಲಸಗಾರರನ್ನು ಕರೆದುಕೊಂಡು ಬಂದಿದ್ದಾರೆ. ಇದರಿಂದಾಗಿ ನಮ್ಮ ಕಾರ್ಮಿಕರನ್ನು ಅನಾಥಪ್ರಜ್ಞೆ ಕಾಡುತ್ತಿದೆ" ಎಂದರು ಅಶೋಕ್. ಮಾತ್ರವಲ್ಲ ಅವರು ತಮ್ಮದೇ ಆದ ಕಾರ್ಯಕ್ರಮಗಳನ್ನು ರೂಪಿಸಿಕೊಂಡರು. ಅದರಂತೆ ಕಾರ್ಮಿಕರ ಒಕ್ಕೂಟ ರಾಜ್‌ಕುಮಾರ್ ಸಮಾಧಿ ಬಳಿ ನಾಲ್ಕು ದಿನಗಳ ಯೋಜನೆಯನ್ನು ಹಮ್ಮಿಕೊಂಡಿದೆ.

ಇವರ ಕಾರ್ಯಕ್ರಮದಲ್ಲಿ ನಾಟಕ ಸಂಜೆ, ನೃತ್ಯ ಸಂಜೆ, ಸಂಗೀತ ಸಂಜೆ, ಸಾಹಸ ಸಂಜೆ, ಹಾಸ್ಯ ಸಂಜೆ ಮೊದಲಾದವು ಇವೆ. ಕೊನೆಯ ದಿನ ಸುಮಾರು ಹತ್ತು ಸಾವಿರ ಜನಗಳಿಗೆ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. "ಈ ಕಾರ್ಯಕ್ರಮಕ್ಕೆ ಸುಮಾರು 30 ಲಕ್ಷ ರೂ.ಗಳು ವೆಚ್ಚವಾಗಲಿದ್ದು ಇದನ್ನು ಯಾವುದೇ ಖಾಸಗಿ ಚಾನೆಲ್‌ಗೆ ಗುತ್ತಿಗೆ ನೀಡಿಲ್ಲ" ಎಂದು ಅಶೋಕ್ ಮತ್ತು ರವೀಂದ್ರನಾಥ್ ಚೇಂಬರ್ ವಿರುದ್ಧ ವ್ಯಂಗ್ಯವಾಡಿದ್ದಾರೆ.



ಒಂದೆಡೆ ಸರ್ಕಾರದಿಂದ ನೀರಸ ಪ್ರತಿಕ್ರಿಯೆ, ಮತ್ತೊಂದೆಡೆ ಉದ್ಯಮದಲ್ಲೇ ಒಳಜಗಳಗಳಿಂದ ಈ ಸಮಾರಂಭ ನಿರೀಕ್ಷಿಸಿದಷ್ಟು ವರ್ಣರಂಜಿತವಾಗದೇ ಹೋಗಬಹುದು ಎಂದು ಅನ್ನಿಸುತ್ತಿದೆ. ಆದರೂ ರವಿಚಂದ್ರನ್ ನೇತೃತ್ವದಲ್ಲಿ ನಡೆಯುವ ಮನರಂಜನಾ ಕಾರ್ಯಕ್ರಮ ನೋಡುಗರನ್ನು ದಿಗ್ಭ್ರಮೆಗೊಳಿಸಿದರೂ ಆಶ್ಚರ್ಯವಿಲ್ಲ. ಅದೇರೀತಿ ಬರಗೂರು ನಾಯಕತ್ವದಲ್ಲಿ ಹೊರಬರುವ 75 ಪುಸ್ತಕಗಳೂ ಮುಂದಿನ ಜನಾಂಗಕ್ಕೆ ದಾಖಲೆಯಾಗಲಿದೆ. ಇದರ ಜೊತೆಗೆ ಇಡೀ ಚಿತ್ರರಂಗ ಮೊಟ್ಟಮೊದಲ ಬಾರಿಗೆ ಒಂದುಗೂಡಿ ಒಂದೇ ವೇದಿಕೆಯಲ್ಲಿ ಕಾಣಿಸಿಕೊಳ್ಳುತ್ತಿರುವುದೇ ವಿಶೇಷವೇ ಸರಿ.

■ ಶೆಣೈ

ಬೆಳೆಯುತ್ತಿರುವ ಸನ್ಮಾನಿತರ ಪಟ್ಟಿ

ಈ ಸಮಾರಂಭದ ಯಶಸ್ಸಿಗೆ ಅತ್ಯಂತ ಪ್ರಾಮಾಣಿಕವಾಗಿ ಹಗಲು ರಾತ್ರಿಯೆನ್ನದೇ ಕೆಲಸ ಮಾಡುತ್ತಿರುವ ಚೇಂಬರ್ ಅಧ್ಯಕ್ಷೆ ಜಯಮಾಲಾ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆರಂಭದಲ್ಲಿ ಸಮಾರಂಭದ ಮೂರನೇ ದಿನ 75 ಕಲಾವಿದರಿಗೆ ಸನ್ಮಾನ ಮಾಡುವುದೆಂದು ಘೋಷಿಸಲಾಗಿತ್ತು. ಆದರೆ ಈಗ ಅನೇಕರ ಒತ್ತಡದ ಫಲವಾಗಿ ಸನ್ಮಾನಿತರ ಪಟ್ಟಿ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಲೇಟೆಸ್ಟ್ ಸುದ್ದಿಯ ಪ್ರಕಾರ ಈಗ ಅವರ ಸಂಖ್ಯೆ 108ಕ್ಕೆ ಏರಿದೆಯಂತೆ. ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯೋತ್ಸವ ಪ್ರಶಸ್ತಿಯ ಪಟ್ಟಿ ಕೊನೆಯ ಕ್ಷಣದತನಕ ಬೆಳೆದಂತೆ ಇಲ್ಲೂ ಪಟ್ಟಿ ಬೆಳೆದರೆ ಆಶ್ಚರ್ಯವೇನೂ ಇಲ್ಲ ಎಂದು ಕೆಲವರು ನೆಟಿಕೆ ಮುರಿಯುತ್ತಿದ್ದಾರೆ. ಈ ವಿಷಯದಲ್ಲಿ ಜಯಮಾಲಾ ಅಸಹಾಯಕರಾಗಿ ಕೈಚೆಲ್ಲಿ ಕುಳಿತಿದ್ದಾರೆ.

ರಾಜ್ಯ ಸಾರಿಗೆ ಪ್ರಾಧಿಕಾರ ಮುನಿವೀರೇಗೌಡನ ಲಂಚಾವತಾರ

ರಾಜ್ಯ ಬೊಕ್ಕಸಕ್ಕೇ ಕನ್ನಕೊರೆದ ಸರ್ಕಾರಿ ಅಧಿಕಾರಿಯೊಬ್ಬನನ್ನು ಲೋಕಾಯುಕ್ತವೇ ರೆಡ್‌ಹ್ಯಾಂಡ್ ಆಗಿ ಹಿಡಿದ ನಂತರವೂ ಸರ್ಕಾರವೇಕೆ ಆತನನ್ನು ರಕ್ಷಿಸುತ್ತಿದೆ? ಬೆಂಬಲಿಸುತ್ತಿದೆ?

ಒಂದೋ ಅದು ಸಾರಿಗೆ ಮಂತ್ರಿ ಅಶೋಕನ ಜಾತಿಪ್ರೇಮವಾಗಿರಬೇಕು ಅಥವಾ ಹೊಡೆದ ಕೊಳ್ಳೆಯ ಪಾಲಾದರೂ ಮಂತ್ರಿ ಅಶೋಕ್‌ರನ್ನು ಬೆಚ್ಚಗಿಟ್ಟಿರಬೇಕು. ಈ ಎರಡರ ಪೈಕಿ ಯಾವುದು ಸತ್ಯ?

ಪ್ರಶ್ನೆಗಳ ಕತೆ ಹಾಳಾಗಲಿ, ಮೊದಲು ಕರ್ನಾಟಕ ಸಾರಿಗೆ ಪ್ರಾಧಿಕಾರವೆಂಬ ಸಮೃದ್ಧ ಸಂಸ್ಥೆಯೊಂದನ್ನು ಮುನಿವೀರೇಗೌಡನೆಂಬ ಕೆಎಎಸ್ ಖದೀಮನೊಬ್ಬ ಮುಕ್ಕುತ್ತಿರುವ ರೀತಿಯನ್ನೇ ನೋಡಿ.


ಕಳೆದ ನಾಲ್ಕು ವರ್ಷಗಳಿಂದ State Transport Authority (STA) ಅಂದರೆ ಕರ್ನಾಟಕ ಸಾರಿಗೆ ಪ್ರಾಧಿಕಾರ ಕಾರ್ಯದರ್ಶಿ ಹುದ್ದೆಗೆ ವಕ್ಕರಿಸಿಕೂತ ಮುನಿವೀರೇಗೌಡನ ಛೇಂಬರಿಗೆ ಇಲ್ಲಿಗೆ ತಿಂಗಳ ಹಿಂದಷ್ಟೇ ಲೋಕಾಯುಕ್ತ ದಾಳಿ ನಡೆಸಿತು. ಎಂಥಾ ಅಸಹ್ಯವೆಂದರೆ; ಮಲ್ಟಿಸ್ಟೋರ್ಡ್ ಬಿಲ್ಡಿಂಗ್‌ನ ಮುನಿವೀರೇಗೌಡರ ಛೇಂಬರಿನ ಕಿಟಕಿಯಿಂದ ಲೋಕಾಯುಕ್ತರ ಕಣ್ಣೆದುರೇ ರಾಶಿ ನೋಟುಗಳನ್ನು ಎರಚಾಡಿಬಿಟ್ಟರು. ಕಿಟಕಿಯಿಂದ ಎರಚಾಡಿದ ನೋಟುಗಳೆಲ್ಲ ಐನೂರು; ಸಾವಿರದ ನೋಟುಗಳೇ. ಈ ಪೈಕಿ ಒಂದು ಲಕ್ಷದ ಎಂಭತ್ತು ಸಾವಿರ ರೂಪಾಯಿಗಳಷ್ಟು ಚೆಲ್ಲಿದ ನೋಟುಗಳನ್ನು ಲೋಕಾಯುಕ್ತರ ಸಿಬ್ಬಂದಿಯೇ ಆಯ್ದುಕೊಂಡರೆ ಉಳಿದಂತೆ ಮುನಿವೀರೇಗೌಡರ ಟೇಬಲ್ಲಿನ ಡ್ರಾಯರಿನಲ್ಲಿ ಸಿಕ್ಕಿದ್ದು ಕಿಟಕಿಯಿಂದ ಎಸೆಯಲಾಗದೇ ಉಳಿದಿದ್ದ 56 ಸಾವಿರ ರೂಪಾಯಿಗಳ ಗರಿಗರಿ ನೋಟುಗಳು!

ಅಲ್ಲಿಗೆ ಮುನಿವೀರೇಗೌಡರಿಗೆ ದಿನವೊಂದಕ್ಕೆ ಕಮ್ಮಿಯೆಂದರೂ ಎರಡು ಲಕ್ಷದ ಲಂಚದ ದುಡ್ಡು ಹುಟ್ಟುತ್ತದೆಯೆಂಬುದು ಲೋಕಾಯುಕ್ತರಿಗೆ ಗ್ಯಾರಂಟಿಯಾಗಿತ್ತು. ದುರಂತವೆಂದರೆ ಮುನಿವೀರೇಗೌಡರ ವಿರುದ್ಧ ಲೋಕಾಯುಕ್ತ ಸರ್ಕಾರಕ್ಕೆ ವರದಿ ಕೊಟ್ಟು ತಿಂಗಳಾಗುತ್ತಾ ಬಂದರೂ ಮುನಿವೀರೇಗೌಡರ ವಿರುದ್ಧ ಯಾವುದೇ ಕ್ರಮವಿಲ್ಲ. ಸ್ವತಃ ಕೆಎಸ್ಸಾರ್ಟಿಸಿಯ ಅಧಿಕಾರಿಗಳೇ ರಾಜ್ಯ ಸಾರಿಗೆ ಪ್ರಾಧಿಕಾರದ ಭ್ರಷ್ಟಾಚಾರದ ವಿರುದ್ಧ ಸರ್ಕಾರಕ್ಕೆ ದೂರು ಕೊಟ್ಟಾಗಲೂ ಸರ್ಕಾರ ತೆಪ್ಪಗಿದೆಯೆಂದರೆ ಏನರ್ಥ?

ಇಷ್ಟೆಲ್ಲಾ ಅನಾಹುತದ ಮೂಲವಾದ ಸಾರಿಗೆ ಪ್ರಾಧಿಕಾರಕ್ಕೆ ಈ ಮುನಿವೀರೇಗೌಡ ವಕ್ಕರಿಸಿದ್ದು ಚಲುವರಾಯಸ್ವಾಮಿ ಸಾರಿಗೆ ಮಂತ್ರಿಯಾಗಿದ್ದ ಕಾಲಕ್ಕೆ. ಒಂದೆಡೆ ಜಾತಿ ಮತ್ತೊಂದೆಡೆ ರೊಕ್ಕ ಎರಡನ್ನೂ ಹದವಾಗಿ ಬೆರೆಸಿ ಪ್ರಾಧಿಕಾರದ ಸೆಕ್ರೆಟರಿ ಹುದ್ದೆಗೆ ವಕ್ಕರಿಸಿದ ಮುನಿವೀರೇಗೌಡ ಈ ಹಿಂದೆ ಮೈಸೂರಿನಲ್ಲಿ ಡಿಸಿಟಿಯಾಗಿದ್ದ, ಅದಕ್ಕೂ ಮುನ್ನ ಆರ್‌ಟಿಓ ಆಗಿದ್ದು ಸಾರಿಗೆ ಲೂಟಿಯ ಆಳ-ಅಗಲ ಅರಿತಿದ್ದ. ಹೇಗಿದ್ದರೂ ಪ್ರತಿ ವರ್ಷ ಸಾವಿರಾರು ಲಾರಿ, ಬಸ್ಸು, ರಿಕ್ಷಾಗಳಿಗೆ ಪರ್ಮಿಟ್ ನವೀಕರಿಸಲೇಬೇಕು. ಅದು ಸಾರಿಗೆ ಪ್ರಾಧಿಕಾರದ ಮೂಲಕವೇ ಆಗಬೇಕು. ಇಂಥ ಪ್ರತಿಯೊಂದು ಲಾರಿ, ಬಸ್ಸುಗಳ ಪರ್ಮಿಟ್ ನವೀಕರಣಕ್ಕೆಂದು ತನ್ನದೇ ಲಂಚದ ಪಟ್ಟಿಯೊಂದನ್ನು ಹೊರಡಿಸಿದ ಮುನಿವೀರೇಗೌಡ ಅದರ ಎತ್ತುವಳಿಗೆಂದೇ ಮೂವರು ಖತರ್‌ನಾಕ್ ಏಜೆಂಟರನ್ನಿಟ್ಟ.

ಈ ಪೈಕಿ ಒಬ್ಬಾತ ಧರ್ಮೇಗೌಡನಾದರೆ ಆತನಿಗೆ ಸಹಾಯಕನಾಗಿ ಕೂತವರು ವೆಂಕಟಾಚಲ ಮತ್ತು ಪ್ರಸನ್ನ. ಈ ಮೂವರೂ ಮುನಿವೀರೇಗೌಡನ ಛೇಂಬರಿನ ಆಧಾರಸ್ತಂಭಗಳಂತೆ ಪ್ರತಿಷ್ಠಾಪಿಸಲ್ಪಟ್ಟರು. ಜೊತೆಗೆ ಕಿರಣ ಎಂಬ ನಾಲ್ಕನೇ ವಸೂಲಿ ವೀರನೊಬ್ಬ ಹುಟ್ಟಿಕೊಂಡ. ಈ ಪೈಕಿ ವೆಂಕಟಾಚಲ ಮತ್ತು ಪ್ರಸನ್ನ ಪ್ರತಿ ಲಾರಿಯೊಂದರ ಪರ್ಮಿಟ್ ನವೀಕರಣಕ್ಕೆ 15 ಸಾವಿರದಂತೆ ಸುಲಿದರೆ ರಾಜ್ಯದ ಹೊರಭಾಗಕ್ಕೆ ಹೋಗಿಬರುವ ತಲಾ ಬಸ್‌ಗೆಂದೇ ಕನಿಷ್ಠ 25 ರಿಂದ 30 ಸಾವಿರ ರೂಪಾಯಿ ಲಂಚ ಪೀಕಲಾರಂಭಿಸಿದರು.

ಹಿಂದಾದರೆ ಐದೋ ಹತ್ತೋ ಸಾವಿರ ಕೊಟ್ಟು ಪರ್ಮಿಟ್ ರಿನೀವಲ್ ಮಾಡಿಸಿಕೊಳ್ಳುತ್ತಿದ್ದ ಲಾರಿ-ಬಸ್ಸು ಮಾಲೀಕರೆಲ್ಲ ಏಕಾಏಕಿ ಸರ್ಕಾರಿ ಬಸ್ಸುಗಳು ಓಡಬೇಕಿದ್ದ ರೂಟಿನಲ್ಲಿ ಕಾನೂನುಬಾಹಿರವಾಗಿ ಓಡಾಟಕ್ಕಿಳಿದವು. ಪರ್ಮಿಟ್ ಇರುವ ಮಾರ್ಗ ಬಿಟ್ಟು ಹೆಚ್ಚು ಆದಾಯದ ಸರ್ಕಾರಿ ಬಸ್ಸುಗಳಷ್ಟೇ ಓಡಬೇಕಿದ್ದ ರೂಟುಗಳಲ್ಲಿ ಖಾಸಗಿ ಬಸ್ಸುಗಳು ಪ್ರಯಾಣಿಕರನ್ನು ತುಂಬಿಸಿಕೊಳ್ಳಲು ಶುರುವಾಗಿದ್ದೇ ಸರ್ಕಾರಿ ಬಸ್ಸುಗಳೆಲ್ಲ ಖಾಲಿ ಹೊಡೆದವು. ಇದರ ಫಲವೆಂಬಂತೆ ಹುಬ್ಬಳ್ಳಿ ವಿಭಾಗವೊಂದರಲ್ಲೇ ಕೆಎಸ್ಸಾರ್ಟಿಸಿಗೆ 200 ಕೋಟಿ ನಷ್ಟವಾಯಿತು.



ಇನ್ನು ಮಂಗಳೂರಿನಲ್ಲಿ ಸಂಘ ಪರಿವಾರದ ಹಿಡಿತದಲ್ಲಿದ್ದ ಖಾಸಗಿ ಬಸ್ ಲಾಬಿ ಸರ್ಕಾರಿ ಬಸ್ಸುಗಳೇ ಓಡದಂತೆ ಬಹುಪಾಲು ರೂಟುಗಳನ್ನೆಲ್ಲ ಆಕ್ರಮಿಸಿಕೊಂಡವು. ಪರ್ಮಿಟ್ಟೇ ಇಲ್ಲದೆ ಆದಾಯ ತರುತ್ತಿದ್ದ ರೂಟುಗಳಲ್ಲಿ ಓಡಾಡುತ್ತಿದ್ದ ಖಾಸಗಿ ಬಸ್ಸುಗಳನ್ನು ಸ್ಥಳೀಯ ಆರ್‌ಟಿಓ ಅಧಿಕಾರಿಗಳು ಹಿಡಿದು ಹಾಕಿದರೆ ಅಂಥ ಆರ್‌ಟಿಓಗಳಿಗೆ ಮುನಿವೀರೇಗೌಡನ ಫೋನ್ ಮಾಡಿ ಧಮಕಿ ಹಾಕಲಾರಂಭಿಸಿದ್ದ.

ಈ ಮಧ್ಯೆ ಸಾರಿಗೆ ಪ್ರಾಧಿಕಾರದ ಕೆಚ್ಚಲನ್ನೇ ಕುಯ್ಯುವ ಕೃತ್ಯಕ್ಕೆ ಕೈಹಾಕಿದ ಮುನಿವೀರೇಗೌಡ ಪ್ರತಿ ವರ್ಷ ರಾಜ್ಯ ಬೊಕ್ಕಸಕ್ಕೆ ಹತ್ತು ಕೋಟಿ ರೂಪಾಯಿಗಳ ಕನ್ನ ಹಾಕುವ ಮಾಸ್ಟರ್ ಪ್ಲಾನ್ ರೂಪಿಸಿಬಿಟ್ಟ.

ಅದು Single tax system. ಅಂದರೆ ಹಿಂದಾದರೆ ರಾಜ್ಯ ಪ್ರವೇಶಕ್ಕೆಂದೇ ಪ್ರತ್ಯೇಕ ತೆರಿಗೆ ಕಟ್ಟುತ್ತಿದ್ದ ಖಾಸಗಿ ಬಸ್ಸುಗಳು ಇನ್ನು ಮುಂದೆ ಯಾವ ರಾಜ್ಯದಲ್ಲಿ ಪರ್ಮಿಟ್ ಪಡೆಯುತ್ತವೆಯೋ ಅಲ್ಲೇ ಟ್ಯಾಕ್ಸ್ ಕಟ್ಟದರೆ ಸಾಕು!

ಇದರರ್ಥ ಕರ್ನಾಟಕದ ಪರ್ಮಿಟ್ ಇರುವ ಬಸ್ಸುಗಳಿಗೆ ಆಂಧ್ರ ತಮಿಳುನಾಡು ಸರ್ಕಾರಗಳು ಪ್ರವೇಶ ಶುಲ್ಕ ವಿಧಿಸುವಂತಿಲ್ಲ; ಹಾಗೇ ಆಂಧ್ರ ತಮಿಳುನಾಡಿನ ಬಸ್ಸುಗಳಿಗೆ ಕರ್ನಾಟಕ ಸರ್ಕಾರ ತೆರಿಗೆ ವಿಧಿಸುವುದಿಲ್ಲ ಎಂಬ ನಿಯಮ. ಹಕೀಕತ್ತೇನೆಂದರೆ ಬೆಂಗಳೂರಿನಿಂದ ಚೆನ್ನೈ ಮತ್ತು ಆಂಧ್ರದ ಹೈದರಾಬಾದ್‌ಗಳಿಗೆ ಓಡುವ ಬಹುತೇಕ ಬಸ್ಸುಗಳೆಲ್ಲ ಹೊರರಾಜ್ಯದ ಮಾಲೀಕರದೇ ಹೊರತು ಸ್ಥಳೀಯ ಮಾಲೀಕತ್ವದ ಬಸ್ಸುಗಳೇ ಕಮ್ಮಿ. ಹಾಗೊಮ್ಮೆ ಸ್ಥಳೀಯ ಬಸ್ಸುಗಳೇ ಆಗಿದ್ದರೂ ಅವುಗಳು ಪರ್ಮಿಟ್ ಪಡೆದಿರುವುದು ಪಕ್ಕದ ಹೊಸೂರಿನಲ್ಲಿ!

ಇದೊಂದೇ ಕಾರಣಕ್ಕೆ ರಾಜ್ಯ ಬೊಕ್ಕಸಕ್ಕೆ ಪ್ರತಿ ವರ್ಷ ಹತ್ತು ಕೋಟಿಯ ಲುಕ್ಸಾನಾಯಿತು. ಇನ್ನೂ ದುರಂತವೆಂದರೆ ಒಂದು ಪರ್ಮಿಟ್‌ನ ಜೆರಾಕ್ಸ್ ಹಿಡಿದು ಹತ್ತಾರು ಬಸ್ಸುಗಳನ್ನು ಖಾಸಗಿ ಟ್ರಾನ್ಸ್‌ಪೋರ್ಟ್ ದೊರೆಗಳು ಓಡಿಸಲಾರಂಭಿಸಿದರು. ಕೆಎಸ್ಸಾರ್ಟಿಸಿಯ ಚೆನ್ನೈ ಮತ್ತು ಹೈದ್ರಾಬಾದ್ ರೂಟಿನ ಬಸ್ಸುಗಳು ನೊಣ ಹೊಡೆಯ ತೊಡಗಿದವು.

ಹಕೀಕತ್ತೇನೆಂದರೆ ಇಂಥ ಖಾಸಗಿ ಬಸ್ ದೊರೆಗಳೆಲ್ಲ ಸೇರಿ ಮುನಿವೀರೇಗೌಡನಿಗೆ ಹತ್ತು ಕೋಟಿ ಸಂಗ್ರಹಿಸಿ ಕೊಟ್ಟಿದ್ದರು. ಅವರ ಪಾಲಿಗದು ಒಂದು ವರ್ಷದ ಕಮಾಯಿ. ಮಿಕ್ಕಂತೆ ಐದು ವರ್ಷಗಳ ಕಾಲ ಬಂದಷ್ಟು ದೋಚಬಹುದಲ್ಲ?

ಮುನಿವೀರೇಗೌಡನ ಈ ಮನೆಹಾಳ ನಿಯಮದ ವಿರುದ್ಧ ಕೆಎಸ್ಸಾರ್ಟಿಸಿಯ ಅಧಿಕಾರಿಗಳೇ ಸರ್ಕಾರಕ್ಕೆ ದೂರು ಕೊಟ್ಟರು. ನಕಲಿ ಪರ್ಮಿಟ್ ಹಿಡಿದು ಹತ್ತಾರು ರೂಟು ಓಡಿಸುತ್ತಿದ್ದ ಬಸ್ಸುಗಳನ್ನು ತಡೆದರೆ ಮುನಿವೀರೇಗೌಡನೇ ಫೋನ್ ಮಾಡಿ ಗದರಿಸಿದ ಬಗ್ಗೆಯೂ ಕೆಲ ಆರ್‌ಟಿಓ ಅಧಿಕಾರಿಗಳು ದೂರಿತ್ತರು. ಏನೇ ದೂರುಗಳು ಬಂದರೂ ಅದು ಸಾರಿಗೆ ಮಂತ್ರಿ ಅಶೋಕ್ ಕೈಗೇ ಬರಬೇಕಲ್ಲವೆ?

ಸಾರಿಗೆ ಮಂತ್ರಿಯೇ ಮುನಿವೀರೇಗೌಡನ ಗಾಡ್ ಫಾದರ್ ಆಗಿರುವಾಗ ಯಾರು ತಾನೇ ಏನು ಮಾಡಲು ಸಾಧ್ಯ? ಅಂತಿಮವಾಗಿ ಲೋಕಾಯುಕ್ತಕ್ಕೆ ರೆಡ್‌ಹ್ಯಾಂಡ್ ಸಿಕ್ಕಿಬಿದ್ದಿದ್ದಾನೆ ಮುನಿವೀರೇಗೌಡ. ದುರಂತವೆಂದರೆ ಲೋಕಾಯುಕ್ತರೇ ದೂರು ಕೊಟ್ಟ ಮೇಲೂ ಮುನಿವೀರೇಗೌಡನ ಎತ್ತಂಗಡಿಯಾಗಿಲ್ಲ. ಬಹುಶಃ ಕರ್ನಾಟಕದ ಇಡೀ ಕೆಎಸ್ಸಾರ್ಟಿಸಿ ಸಂಸ್ಥೆ ದಿವಾಳಿಯಾಗುವ ತನಕ ಮುನಿವೀರೇಗೌಡನಿಂದ ಮುಕ್ತಿ ಸಾಧ್ಯವಿರಲಿಕ್ಕಿಲ್ಲ?

ಖಾಸಗಿ ಬಸ್ ಲಾಬಿಯ ಏಜೆಂಟನೇ ರಾಜ್ಯ ಸಾರಿಗೆ ಪ್ರಾಧಿಕಾರದ ಕಾರ್ಯದರ್ಶಿಯಾದ ಮೇಲೆ ಸಾರಿಗೆ ಸುಧಾರಣೆಯ ಬಗ್ಗೆ ಮಂತ್ರಿ ಅಶೋಕ್ ಎಷ್ಟೇ ಭಾಷಣ ಬಿಗಿದರೂ ಅದಕ್ಕೆ ಅರ್ಥವುಂಟೆ?

■ ರಾ. ಸೋಮನಾಥ್

ಸರ್ಕಾರದಿಂದ ಪರ್ಯಾಯ ಉತ್ಸವ!

ಡಾ.ರಾಜ್ ನಿಧನದ ನಂತರ ಕನ್ನಡ ಚಿತ್ರೋದ್ಯಮದಲ್ಲಿ ಅವರ ಸ್ಥಾನವನ್ನು ತುಂಬಬಲ್ಲ ಮತ್ತೊಬ್ಬ ನಾಯಕನಿಲ್ಲ ಎಂಬ ಸತ್ಯ ಬರೀ ಬಿಜೆಪಿಯವರಿಗೆ ಮಾತ್ರವಲ್ಲ ಎಲ್ಲ ರಾಜಕೀಯ ಪಕ್ಷದವರಿಗೂ ತಿಳಿದಿದೆ. ಹೀಗಾಗಿ ಕಲಾವಿದರು ಬೀದಿಗಿಳಿದು ಸರ್ಕಾರಕ್ಕೆ ತೊಂದರೆ ಕೊಡಬಹುದೆಂಬ ಭಯ ಯಡ್ಡಿಗಿಲ್ಲ. ಇನ್ನೊಂದು ಸಂಗತಿಯೆಂದರೆ ಇವತ್ತು ಬಿಜೆಪಿಯಲ್ಲಿ ಕನಿಷ್ಠ ಒಂದು ಡಜನ್ ಕಲಾವಿದರು ಸಕ್ರಿಯವಾಗಿರುವುದರಿಂದ ಯಡ್ಡಿಗೆ ಚೇಂಬರ್‌ನ ಅಗತ್ಯ ಕಾಣಿಸುತ್ತಿಲ್ಲ.



ಮುಖ್ಯಮಂತ್ರಿ ಚಂದ್ರು, ಮಾಜಿ ಪ್ರಣಯ ರಾಜ ಶ್ರೀನಾಥ್, ನವರಸ ನಾಯಕ ಜಗ್ಗೇಶ್, ಡೈಲಾಗ್ ಕಿಂಗ್ ಸಾಯಿ ಕುಮಾರ್, ತಾರೆ ಶ್ರುತಿ, ಎಸ್.ಮಹೇಂದರ್, ಸುಂದರ್‌ರಾಜ್, ಪ್ರಮೀಳಾ ಜೋಷಾಯ್, ಮಾಳವಿಕಾ, ಅವಿನಾಶ್... ಹೀಗೆ ಹಲವಾರು ಕಲಾವಿದರು ಈಗ ಬಿಜೆಪಿಯ ಚೆಡ್ಡಿತೊಟ್ಟಿದ್ದಾರೆ. ಈ ಮಧ್ಯೆ ತಾರಾ ಹಾಗೂ ವಿಷ್ಣುವರ್ಧನ್ ಬರಲಿರುವ ಲೋಕಸಭಾ ಚುನಾವಣೆಯಲ್ಲಿ ಕೇಸರಿ ತಿಲಕ ಮೆತ್ತಿಕೊಂಡು ತ್ರಿಶೂಲ ಹಿಡಿದು ಬಿಜೆಪಿ ಟಿಕೆಟ್ ಮೇಲೆ ಸ್ಪರ್ಧಿಸುವ ಮಾತು ಕೇಳಿಬರುತ್ತಿದೆ. ಇದೆಲ್ಲದರ ಅರ್ಥ ಇವತ್ತು ಅರ್ಧಕ್ಕರ್ಧ ಚಿತ್ರರಂಗ ಕೇಸರಿ ಮಯವಾಗಿರುವುದರಿಂದ ಕಲಾವಿದರ ಸಂಘಟನಾಶಕ್ತಿ ಕುಂದಿದೆ. ಜೊತೆಗೆ ಕುಮಾರಸ್ವಾಮಿಯವರೂ ಆರಂಭ ಮಾಡದ ಡಾ.ರಾಜ್ ಸಮಾಧಿ ಕೆಲಸವನ್ನು ಯಡ್ಡಿ ಆರಂಭಿಸಿರುವುದರಿಂದ ರಾಜ್ ಕುಟುಂಬದವರಿಗೆ ಯಡ್ಡಿ ಮೇಲೆ ಒಂದಿಷ್ಟು ಅಭಿಮಾನವಿದೆ.

ಈ ಎಲ್ಲ ಕಾರಣಗಳಿಂದ ಚೇಂಬರ್‌ನವರು ತಮಗೆ ಬೇಕಿದ್ದನ್ನು ಮಾಡಿಕೊಳ್ಳಲಿ, ಸರ್ಕಾರ ತನಗೆ ಬೇಕಿದ್ದನ್ನು ಮಾಡಿಕೊಳ್ಳುತ್ತದೆ ಎಂಬ ಧೋರಣೆ ದಿನದಿಂದ ದಿನಕ್ಕೆ ಗಟ್ಟಿಯಾಗುತ್ತಿರುವಂತಿದೆ. ಬರಲಿರುವ ದಿನಗಳಲ್ಲಿ ತನ್ನ ಚೆಡ್ಡಿ ನಟನಟಿಯರ ದಂಡನ್ನು ಕಟ್ಟಿಕೊಂಡು ಪ್ರತಿ ಜಿಲ್ಲಾ ಕೇಂದ್ರದಲ್ಲಿ ಚಿತ್ರೋದ್ಯಮದ ಅಮೃತ ಮಹೋತ್ಸವ ಸಮಾರಂಭವನ್ನು ಸರ್ಕಾರದ ವತಿಯಿಂದ ಅದ್ದೂರಿಯಾಗಿ ಆಚರಿಸುವ ಯೋಜನೆ ರೂಪಗೊಳ್ಳುತ್ತಿದೆಯಂತೆ.

ಆದರೆ ಈ ಯೋಜನೆಯ ಅಸಲಿಯತ್ತು ಚಿತ್ರೋದ್ಯಮದ ಸಾಧನೆಯನ್ನು ಜನರ ಮುಂದಿಡುವುದಲ್ಲ. ಬದಲಾಗಿ ಸಿನಿಮಾಲೋಕದ ತಾರೆಗಳನ್ನು ಬಳಸಿಕೊಂಡು ಬರಲಿರುವ ಚುನಾವಣೆಗಳಿಗೆ ಪ್ರಚಾರ ಪಡೆಯುವುದೇ ಚೆಡ್ಡಿ ಬಿಜೆಪಿಗಳ ಹುನ್ನಾರವಾಗಿದೆ. ಪೆದ್ದ ಶಿಖಾಮಣಿಗಳಾದ ಬಿಜೆಪಿ ಪರಿವಾರ ನಟನಟಿಯರಿಗೆ ಇದು ಅರ್ಥವಾಗುವುದು ಅಸಾಧ್ಯವೇ ಬಿಡಿ. ■

"ಧರಣಿ ಮಂಡಲ ಮಧ್ಯದೊಳಗೆ"

ರಾಮಚಂದ್ರಗೌಡನೆಂಬ ಅಸಂಸ್ಕೃತ ವ್ಯಕ್ತಿಯೊಂದು ಕಲಾವಿದ ಎಂ.ಎಸ್. ಮೂರ್ತಿಯನ್ನು ಸಭೆಯಿಂದ ಹೊರಗಾಕುವಂತೆ ಆದೇಶ ಮಾಡಿದ್ದಾಗಿಂದ ಕರ್ನಾಟಕದ ಮೂಲೆಮೂಲೆಯಿಂದ ಕಲಾವಿದರ ಪ್ರತಿಭಟನಾ ಧ್ವನಿ ಮೊಳಗಿದೆಯಂತಲ್ಲಾ, ಬಿಜೆಪಿ ಸರ್ಕಾರದ ಮೂರ್ಖ ಮಂತ್ರಿ ಕ್ಷಮೆ ಕೇಳಬಹುದೆಂದು ಕಾದಿದ್ದ ಜನತೆಗೆ ಅಚ್ಚರಿಯಾಗುವಂತೆ ಕಲಾನಿಧಿಗಳು ನಿಶಬ್ದವಾಗಿರುವಾಗ ಕಪ್ಪಣ್ಣ ಕಡುಕೋಪದಿಂದ ಇನ್ನೂ ಕಪ್ಪಾಗಿ ಮೋಸಪ್ಪ ಮೊಕದ್ದಮೆಯನ್ನು ಹೂಡಲಿದ್ದಾರಂತಲ್ಲಾ, ಬಹುತೇಕ ಕಲಾವಿದರು "ರಾಮಚಂದ್ರಗೌಡನಿಂದ ಅವಮಾನವಾಗಿರುವುದು ಎಂ.ಎಸ್. ಮೂರ್ತಿಗೇ ಹೊರತು ನಮಗಲ್ಲ" ಎಂದು ಸುಮ್ಮನಾಗಿದ್ದಾರಂತಲ್ಲಾ, ಥೂತ್ತೇರಿ!

* * * * *


ಸಂಸ್ಕೃತಿ, ನಡವಳಿಕೆ, ನಾಗರಿಕತೆ, ದೇಶಭಕ್ತಿ ಬಗ್ಗೆ ಬಹಳವಾಗಿ ಮಾತನಾಡುತ್ತಿದ್ದ ಬಿಜೆಪಿಗಳು ತಮ್ಮದೇ ಸರ್ಕಾರದ ಮಂತ್ರಿಗಳ ಪಾಂಡಿತ್ಯವನ್ನು ನೋಡಿ ಬೆಚ್ಚಿ ಕುಳಿತಿವೆಯಂತಲ್ಲಾ, ರಾಮಚಂದ್ರಗೌಡನಿಗೆ ಕಲಾವಿದರೆಂದರೆ ಅವರಾರು ಎಂಬುದೇ ಗೊತ್ತಿಲ್ಲ, ಇನ್ನು ಅರವಿಂದ ಲಿಂಬಾವಳಿ ಎಂಬ ಹುಳಿಗೆ ಶರಣಬಾಳು ಹುಣ್ಣಿಮೆ ಕಾರ್ಯಕ್ರಮ ಪಠ್ಯೇತರ ಚಟುವಟಿಕೆಯಂತೆ ಕಾಣುತ್ತಿದೆಯಂತೆ. ಇದೇ ಲಿಂಬಾವಳಿ ಸದನಕ್ಕೆ ಬಂದು ಮುಖ ತೋರಲು ನಾಚಿಕೊಂಡು ಕುಳಿತಿದ್ದ ಸಂಪಂಗಿಗೆ ಸಮಾಧಾನ ಹೇಳಿ ಒಳಗೆ ಕರೆದುಕೊಂಡು ಹೋದನಂತಲ್ಲಾ, ಇದೂ ಕೂಡ ಶಿಕ್ಷಣ ಸಚಿವನ ನೈತಿಕ ಕರ್ತವ್ಯವಲ್ಲವೇ, ಥೂತ್ತೇರಿ!!

ಥೂತ್ತೇರಿ

ಯಾಹೂ

* * * * *

ಕರ್ನಾಟಕ ಕಂಡುಕೊಂಡ ಅಪರೂಪದ ಅರ್ಥಶಾಸ್ತ್ರಜ್ಞ ಕಂ ಮುಖ್ಯಮಂತ್ರಿ ಯಡಿಯೂರಪ್ಪ ಮಠಮಂದಿರಗಳಿಗೆ ಬರೋಬರಿ ನೂರು ಕೋಟಿ ಕೊಟ್ಟಿದ್ದಾನಂತಲ್ಲಾ, ಗೋವಿನ ಗೀತೆ ಹಾಡಿ ಬಜೆಟ್ ಮಂಡಿಸುವ ಈತ ಅಮೃತ್‌ಮಹಲ್ ತಳಿಯಾದ ಗೋವುಗಳಿಗೆ ಕೊಟ್ಟ ಕಾಸು ಅವುಗಳ ಗೊರಸಿಗೂ ಸಾಲುವುದಿಲ್ಲವೆಂಬುದು ಅಮೃತ್‌ಮಹಲ್ ಕಾವಲು ಕಳ್ಳರ ಹೇಳಿಕೆಯಾಗಿದೆಯಲ್ಲಾ, ಕಳೆದ ವರ್ಷ ಮಾರಿದ ಕರುಗಳ ಲಾಭದಲ್ಲೇ ನಡೆಯುವ ಸ್ಥಿತಿಯಲ್ಲಿರುವ ಅಮೃತ್‌ಮಹಲ್ ತಳಿಗಳ ಹುಲ್ಲಿಗಾದರೂ ಈ ಎಡೂರಪ್ಪ ಕಾಸು ಕೊಟ್ಟಿದ್ದರೆ ಹುಲ್ಲು ತಿಂದ ಹಸುಗಳು ಮುಂದಿನ ವರ್ಷ ಎಣಿಸಲಾಗದಷ್ಟು ಕರು ಹಾಕುತ್ತಿದ್ದವಂತಲ್ಲಾ, ಅಮೃತ್‌ಮಹಲ್ ಬಗ್ಗೆ ಎಡೂರಪ್ಪನ ನಿರ್ಲಕ್ಷ್ಯ ನೋಡಿದ ರೈತರು, ಗೋಕುಲಾಷ್ಟಮಿಗೂ ಇಮಾಂಸಾಬಿಗೂ ಸಂಬಂಧವೇನು ಎನ್ನುವಂತೆ "ಎಡೂರಪ್ಪನಿಗೂ ಅಮೃತ್‌ಮಹಲ್ ರಾಸುಗಳಿಗೂ ಯಾವ ಸಂಬಂಧವಿದೆ? ಬಿಡ್ರಿ ಹೋಗ್ಲಿ" ಎನ್ನುತ್ತಿದ್ದಾರಂತಲ್ಲಾ,



ಬಜೆಟ್ ಮಂಡನೆ ವೇಳೆ, ಗೋವಿನ ಗೀತೆ ಹಾಡಿದ ಎಡೂರಪ್ಪ ಗೋವೋ ಅಥವಾ ವ್ಯಾಘ್ರನೋ ಎಂದು ಹಲವರು ಯೋಚಿಸುತ್ತಿರುವಾಗಲೇ ಕುಕವಿಗಳು "ಧರಣಿ ಮಂಡಲ ಮಧ್ಯದೊಳಗೆ ಮೆರೆಯುತಿಹ ಕರ್ನಾಟಕ ದೇಶದಿ ಚೆಡ್ಡಿಪಡೆಯನು ಕಂಡೆಯಾ, ಚೆಡ್ಡಿಪಡೆಯ ಹೊಡೆತ ಕೇಳಿ ಮಂಗಳೂರಿನ ಸಾಬರು, ತಂಗಳೂರಿನ ಕ್ರಿಶ್ಚಿಯನ್ನರು, ಬೆಂಗಳೂರಿನ ಬೋಳಿ ಜನರು, ಉಸಿರುಗಟ್ಟಿ ಸಾಯ್ವರೊ" ಎಂದು ಕಲಾಕ್ಷೇತ್ರದ ಮೆಟ್ಟಿಲಮೇಲೆ ಕುಳಿತು ರಾಗವಾಗಿ ಹಾಡಿಕೊಂಡರಂತಲ್ಲಾ, ಥೂತ್ತೇರಿ!

* * * * *

ಇತ್ತ ಹಳೆಕಾಲದ ಕೆಂಪು ಬಸ್ಸಿನ ಕಂಡಕ್ಟರ್ ತರ, ಅದೂ ಹಾಸನದ ಕಡೆಯ ಗಿರಾಕಿಯಂತೆ ಕಾಣುವ ಅಶೋಕ್ ಎಂಬ ಸಾರಿಗೆ ಮಂತ್ರಿ, ಬೆಂಗಳೂರಲ್ಲಿ ಖಾಲಿ ಓಡಾಡುತ್ತಿರುವ ಓಲ್ವೊ ಬಸ್ ನೋಡಿ ರೋಮಾಂಚಿತನಾಗಿ ಇನ್ನೂ ನೂರು ಓಲ್ವೋ ಬಸ್ ಖರೀದಿಗೆ ಹೊರಟಿದ್ದಾರಂತಲ್ಲಾ, ಅದೂಅಲ್ಲದೆ ಈ ಮೂರ್ಖ ಮಂತ್ರಿಗೆ ಜನಗಳೊಡನೆ ಈಜುವ ಕಂಡಕ್ಟರ್, ರಾತ್ರಿ ನಿದ್ದೆಗೆಟ್ಟು ಬಸ್ ಓಡಿಸುವ ಡ್ರೈವರ್‌ನ ಜೋಭದ್ರಗೇಡಿ ಮುಖ ನೋಡಲಾರದೆ "ಇನ್ನುಮುಂದೆ ನೀವೆಲ್ಲಾರು ಮುಂಜಾನೆ ಸಾಲಗೆ ನಿಂತು ಕವಾಯತು ಮಾಡಿ. ನಂತರ ಕೆಲಸಕ್ಕೆ ಬನ್ನಿ" ಎಂದು ಆಜ್ಞಾಪಿಸಿದ್ದಾನಂತಲ್ಲಾ, ಇದನ್ನು ಕೇಳಿದ ಹಾಸನದ ಕಡೆ ಡ್ರೈವರು "ಎಷ್ಟೇ ಆಗಲಿ ಚೆಡ್ಡಿಮುಂಡೆ ಮಗ, ಇಂತವನ ತಲೆಲಿ ಇನ್ನೇನು ಹೊಳದತೂ?" ಎಂದು ಆಡಿಕೊಂಡರಂತಲ್ಲಾ, ಥೂತ್ತೇರಿ!

* * * * *

ದೇವೇಗೌಡ ಅಧಿಕಾರದಲ್ಲಿದ್ದಾಗ ಪಿಡಬ್ಲ್ಯೂಡಿ ಖಾತೆಯನ್ನು ತಮ್ಮ ಸುಪರ್ದಿಯಲ್ಲೇ ಇಟ್ಟುಕೊಂಡು, ತನ್ನ ಮತ್ತು ತನ್ನ ಮಕ್ಕಳ ಹಿಂಬಾಲಕರಿಗೆ ಕಂಟ್ರಾಕ್ಟ್ ಕೊಡುವುದನ್ನು ನೋಡಿದ್ದ ಚೆಡ್ಡಿಗಳು ಈಗ ಚೆಡ್ಡಿಗಳನ್ನು ಹುಡುಕಿ ಕಾಮಗಾರಿ ಹಂಚುತ್ತಿವೆಯಂತಲ್ಲಾ, ಇದರಿಂದ ಕೆರೆಯ ನೀರನ್ನು ಕೆರೆಗೆ ಚೆಲ್ಲಿದಂತೆ ಚೆಡ್ಡಿ ಜೇಬಿನ ಹಣ ಲಾರಿಗೆ ಬಲ ಕೊಡುತ್ತದಂತಲ್ಲಾ, ಥೂ, ಥೂ, ಥೂತ್ತೇರಿ! ■

ಶಿವಮೊಗ್ಗ ರಾಘವೇಂದ್ರನಿಗೆ ಟಿಕೆಟ್ ಖಚಿತ


ಯಡ್ಡಿಯ ತಂತ್ರ ಕೊನೆಗೂ ವರ್ಕ್‌ಔಟ್ ಆಗುವಂತೆ ಕಾಣುತ್ತಿದೆ. ಶಿವಮೊಗ್ಗ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಯಡ್ಡಿ ಪುತ್ರ ರಾಘವೇಂದ್ರನನ್ನೇ ಬಿಜೆಪಿ ಕಣಕ್ಕಿಳಿಸುವ ಸಾಧ್ಯತೆಗಳಿವೆ. ಪಕ್ಷದ ಉನ್ನತ ಮೂಲಗಳ ಪ್ರಕಾರ ಈಗಾಗಲೇ ಈ ಕುರಿತು ಅಂತಿಮ ತೀರ್ಮಾನವಾಗಿದ್ದು ಕೇವಲ ಘೋಷಣೆಯಷ್ಟೇ ಬಾಕಿ ಇದೆ. ಆದರೆ ಶಿವಮೊಗ್ಗ ಜಿಲ್ಲಾ ಬಿಜೆಪಿ ಘಟಕ ಮಾತ್ರ ಇನ್ನೂ 'ಇವರನ್ ಬಿಟ್ಟ್ ಅವರನ್ ಬಿಟ್ ಇನ್ಯಾರು' ಎಂದು 'ಸೂಕ್ತ' ಅಭ್ಯರ್ಥಿಗಾಗಿ ಹುಡುಕಾಟ ನಡೆಸುತ್ತಾ ಕಾಲ ವ್ಯರ್ಥ ಮಾಡುತ್ತಿದೆ.

ಕೇಂದ್ರದಲ್ಲಿ ಎನ್‌ಡಿಎ ಅಧಿಕಾರಕ್ಕೆ ಬರಬೇಕೆಂದರೆ ರಾಜ್ಯದಲ್ಲಿ ಬಿಜೆಪಿ ಕನಿಷ್ಠ 20 ಸೀಟು ಗೆಲ್ಲಲೇಬೇಕು. ಹೀಗಾಗಿ ಗೆಲ್ಲುವ ಅಭ್ಯರ್ಥಿಗಳನ್ನು ಹುಡುಕಿ, ಹುಡುಕಿ ಕಣಕ್ಕಿಳಿಸುವ ತೀರ್ಮಾನಕ್ಕೆ ವರಿಷ್ಠರು ಬಂದಿದ್ದಾರೆ. ಇದು ಗೊತ್ತಿರುವ ಯಡ್ಡಿ ಶಿವಮೊಗ್ಗದಲ್ಲಿ ಗೆಲ್ಲುವ ಕುದುರೆ ಎಂದರೆ ತಮ್ಮ ಮಗ ಎಂದು ಬಿಂಬಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಕಾರ್ಯತಂತ್ರದಿಂದಾಗಿಯೇ ಶಿವಮೊಗ್ಗ ಜಿಲ್ಲೆಯಲ್ಲಿ ಬಿಜೆಪಿ ಹೆಚ್ಚು ಸ್ಥಾನ ಗೆದ್ದಿದೆ ಎಂದು ಬೀಗುತ್ತಿರುವ ಯಡ್ಡಿ ಜಿಲ್ಲಾ ಬಿಜೆಪಿಯಲ್ಲಿ ತಮ್ಮ ಮಾತೇ ಅಂತಿಮ ಎಂಬಂತೆ ವರ್ತಿಸುತ್ತಾ ಬಂದಿದ್ದರು. (ಇದಕ್ಕೆ ಒಂದಿಷ್ಟು ವಿರೋಧ ವ್ಯಕ್ತಪಡಿಸಿದ ತಮ್ಮ ಗೆಳೆಯರಾದ ಈಶ್ವರಪ್ಪ ಮತ್ತು ಡಿಎಚ್‌ಎಸ್‌ರ ರೆಕ್ಕೆ-ಪುಕ್ಕ ಕತ್ತರಿಸಿ, ಒಂದೆಡೆ ಕೂರಿಸಿದ್ದರು). ಮಗನಿಗೆ ಜಿಲ್ಲೆಯಲ್ಲೊಂದು ರಾಜಕೀಯ ನೆಲೆ ಕಲ್ಪಿಸಲು ಇದೇ ಸಕಾಲ ಎಂದು ಭಾವಿಸಿ, ಲೋಕಸಭೆಗೆ ಆತನೇ ಅಭ್ಯರ್ಥಿ ಎಂದು ಘೋಷಿಸಿಬಿಟ್ಟರು.

ಆದರೆ ಅವರಂದುಕೊಂಡಂತೆ ಎಲ್ಲವೂ ನಡೆಯಲಿಲ್ಲ, ಮೊದಲಿಗೆ ಶಿವಮೊಗ್ಗ ಜಿಲ್ಲಾ ಬಿಜೆಪಿ ನಾಯಕರು ಒಗ್ಗಟ್ಟಾಗಿ ಯಡ್ಡಿ ವಿರುದ್ಧ ತಿರುಗಿ ಬಿದ್ದರು. ಇನ್ನು ರಾಜ್ಯ ಘಟಕದಲ್ಲಿ ಪಕ್ಷದ ಅಧ್ಯಕ್ಷ ಸದಾನಂದಗೌಡರೇ ಯಡ್ಡಿಯ ಈ ನಿರ್ಧಾರವನ್ನು ಒಪ್ಪಿಕೊಳ್ಳದೆ, ಬಾಯಿಗೆ ಬಂದಂತೆ ಜಾಡಿಸಿದರು. ಜೊತೆಗೆ ಸಂಘಪರಿವಾರದ ನಾಯಕರೂ ತಮ್ಮ ರಕ್ಷಣೆಗೆ ಬರಲಾರರು ಎಂಬುದು ಗೊತ್ತಾಗುತ್ತಿದ್ದಂತೆಯೇ ಯಡ್ಡಿ 'ಸೋತು-ಗೆಲ್ಲುವ' ತಂತ್ರ ಹೂಡಿದರು. ತಮ್ಮ ಮಗನನ್ನು ಕಣಕ್ಕಿಳಿಸುವುದಿಲ್ಲ ಎಂದು ತಾವೇ ಘೋಷಿಸಿದರು.

ಆದರೆ ಇಲ್ಲಿಗೆ ಎಲ್ಲವೂ ಮುಗಿಯಲಿಲ್ಲ, ಯಡ್ಡಿ ತಮ್ಮ ಬೆಂಬಲಿಗರ ಮೂಲಕ ರಾಘವೇಂದ್ರನ ಪರವಾಗಿ ಪಕ್ಷದ ವರಿಷ್ಠರ ಮೇಲೆ ಒತ್ತಡ ಹೇರಲಾರಂಭಿಸಿದರು. ನಾಗಪುರದಲ್ಲಿ ನಡೆದ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಸಚಿವ ಹರತಾಳು ಹಾಲಪ್ಪರಂತೂ ಕಂಡಕಂಡ ನಾಯಕರಿಗೆಲ್ಲಾ ರಾಘವೇಂದ್ರನ 'ಸಾಧನೆ'ಯನ್ನು ವರ್ಣಿಸಿ, ಆತನೇ ಗೆಲ್ಲುವ ಕುದುರೆ ಎಂದು ಹೇಳಿಬಂದಿದ್ದಾರೆ. ಏನಾದರೂ ಆಗಲಿ ರಾಜ್ಯದಲ್ಲಿ ಹೆಚ್ಚು ಸೀಟು ಗೆಲ್ಲಲಿ ಎಂಬ ಮನಸ್ಥಿತಿಯಲ್ಲಿರುವ ರಾಷ್ಟ್ರೀಯ ನಾಯಕರು ಈ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ತಲೆತೂಗಿದ್ದಾರೆ. ರಾಜ್ಯದ ಉಸ್ತುವಾರಿ ಹೊಣೆ ಹೊತ್ತಿರುವ ವೆಂಕಯ್ಯ ನಾಯ್ಡುಗೆ, ತಾವು ಮತ್ತೆ ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾಗಬೇಕಾದರೆ ಯಡ್ಡಿ ಬೆಂಬಲ ಬೇಕು. ಅದಕ್ಕೆ ಯಡ್ಡಿ ಮಾತೇ ಅಂತಿಮ ಎಂಬಂತೆ ನಡೆದುಕೊಳ್ಳುತ್ತಿದ್ದಾರೆ. ಇನ್ನು ಪುತ್ರ ವ್ಯಾಮೋಹಿ ಯಡ್ಡಿ ದಾರಿಗೆ ಅಡ್ಡಿ ಬರುವವರಾದರೂ ಯಾರು?



ಹೊಸ ನಾಟಕ ಕಟ್ಟಿದ ಯಡ್ಡಿ!

ಹಾಗೆ ನೋಡಿದರೆ ಶಿವಮೊಗ್ಗದಲ್ಲಿ ಬಿಜೆಪಿಗೆ ಅಭ್ಯರ್ಥಿ ಕೊರತೆಯೇನೂ ಇಲ್ಲ. ಹಿಂದೆ ಪಕ್ಷದಿಂದ ಸ್ಪರ್ಧಿಸಿ, 'ಸೋಲಿಲ್ಲದ ಸರದಾರ' ಎಂದು ಬೀಗುತ್ತಿದ್ದ ಮಾಜಿ ಮುಖ್ಯಮಂತ್ರಿ ಬಂಗಾರಪ್ಪ ಮನೆ ಸೇರುವಂತೆ ಮಾಡಿದ್ದ 'ಅರೆಚಡ್ಡಿ' ಆಯನೂರು ಮಂಜುನಾಥ್ ಈಗ ಪಕ್ಷದಲ್ಲಿಯೇ ಇದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ರಾಜ್ಯ ಕಾರ್ಯದರ್ಶಿ ಭಾನುಪ್ರಕಾಶ್ ಉತ್ಸಾಹವೇನೂ ಕಡಿಮೆಯಾಗಿಲ್ಲ. ಇವರಿಬ್ಬರಲ್ಲದೆ, ಜ್ಯೋತಿ ಪ್ರಕಾಶ್ ಎಂಬ ಲಾರಿ ಮಾಲೀಕ ಪಕ್ಷದಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಓಡಾಡಿಕೊಂಡು ಟಿಕೆಟ್‌ಗಾಗಿ ಬಾಯಿಬಿಟ್ಟುಕೊಂಡು ಕಾಯುತ್ತಿದ್ದಾರೆ. ಈ ಮೂವರಲ್ಲಿ ಯಾರಿಗೆ ಟಿಕೆಟ್ ಕೊಟ್ಟರೂ ಪಕ್ಷದ ಕಾರ್ಯಕರ್ತರೇನೂ ಅಸಮಾಧಾನಗೊಳ್ಳುವುದಿಲ್ಲ.

ಆದರೆ ಯಡ್ಡಿಗೆ ಹೀಗೆ ಅಭ್ಯರ್ಥಿ ಆಯ್ಕೆ ಸರಳವಾಗಿ ಬಗೆಹರಿಯುವುದು ಬೇಕಿಲ್ಲ, ಹಾಗೇನಾದರೂ ಆದರೆ ತಮ್ಮ ಮಗನಿಗೆ ಅವಕಾಶವೇ ಇಲ್ಲವಾಗಿ ಬಿಡುತ್ತದೆ. ಹೀಗಾಗಿ ತಮ್ಮ ಬೆಂಬಲಿಗರನ್ನೆಲ್ಲಾ ಎತ್ತಿಕಟ್ಟಿ ಟಿಕೇಟ್ ಆಕಾಂಕ್ಷಿಗಳ ಪಟ್ಟಿ ದೊಡ್ಡದು ಮಾಡುತ್ತಿದ್ದಾರೆ. ಸ್ವತಃ ಯಡ್ಡಿಯೇ ಲಿಂಗಾಯತ ಸಮುದಾಯಕ್ಕೆ ಸೇರಿದ ಕೈಗಾರಿಕೋದ್ಯಮಿ ರುದ್ರೇಗೌಡರ ಹೆಸರನ್ನು ಪಟ್ಟಿಗೆ ಸೇರಿಸಿ, ಅಭ್ಯರ್ಥಿ ಆಯ್ಕೆಯನ್ನು ಜಟಿಲಗೊಳಿಸಿದ್ದಾರೆ.

ಕಳೆದ ಮಂಗಳವಾರ ಶಿವಮೊಗ್ಗದಲ್ಲಿ ಅಭ್ಯರ್ಥಿ ಆಯ್ಕೆ ಕುರಿತು ಯಡ್ಡಿ ನೇತೃತ್ವದಲ್ಲಿಯೇ ಸಭೆ ನಡೆದಿತ್ತು, ಬಿಜೆಪಿ ಸಚಿವರು, ಪ್ರಮುಖರು ಮತ್ತು ಸಂಘಪರಿವಾರದ ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು. 'ಇಲ್ಲಿ ಯಾರೇ ನಿಂತರೂ ಗೆಲ್ಲುವುದು ಖಚಿತ, ಆದರೆ ಯಾರನ್ನು ಗೆಲ್ಲಿಸಬೇಕೆಂಬುದಷ್ಟೇ ಪ್ರಮುಖ ವಿಷಯ' ಎಂಬಂತೆ ಯಡ್ಡಿ ಮಾತನಾಡಿದ್ದಾರೆ. 'ನನ್ನ ಮಗನಿಗೆ ಬೇಡ, ಹಿರಿಯರಾದ ರುದ್ರೇಗೌಡರಿಗೆ ಯಾಕೆ ಟಿಕೆಟ್ ನೀಡಬಾರದು' ಎಂದು ಪ್ರಶ್ನಿಸಿದ್ದಾರೆ. ಯಡ್ಡಿಯ ಈ ಹೊಸ ವರಸೆ ನೋಡಿ ಜಿಲ್ಲಾ ಬಿಜೆಪಿ ನಾಯಕರು ದಂಗುಬಡಿದು ಹೋಗಿದ್ದಾರೆ.

ಕೆಪಿಎಸ್‌ಸಿ ಸದಸ್ಯರಾಗಿರುವ ರುದ್ರೇಗೌಡರನ್ನು ವಿರೋಧಿಸಬೇಕೇ, ಬೆಂಬಲಿಸಬೇಕೇ ಎಂದು ಗೊತ್ತಾಗದೆ ಹೆಚ್ಚಿನ ನಾಯಕರು ಗೊಂದಲಕ್ಕೊಳಗಾಗಿದ್ದಾರೆ. ಕೊನೆಗೆ ಕೆಲವರು ಜನಸಂಪರ್ಕವನ್ನೇ ಹೊಂದಿರದ ಇವರು ನಿಂತರೆ ಗೆಲ್ಲುವುದು ಕಷ್ಟ ಎಂದು ಗೊಣಗಾಡಿ ಸುಮ್ಮನೆ ಕುಳಿತಿದ್ದಾರೆ. ತಮ್ಮ ನಡುವೆ ಹೊಸ ಸ್ಪರ್ಧಿ ಹುಟ್ಟಿಕೊಂಡಿದ್ದು ನೋಡಿ ಆಕಾಂಕ್ಷಿಗಳ ಮುಖವೆಲ್ಲಾ ಕಪ್ಪಾಗಿ ಹೋಗಿತ್ತಂತೆ. ಹೀಗಾಗಿ ಸಭೆಯಲ್ಲಿ ಯಾವುದೇ ತೀರ್ಮಾನಕ್ಕೆ ಬರಲಾಗಿಲ್ಲ. ಯಡ್ಡಿಗೆ ಬೇಕಾಗಿದ್ದೂ ಇದೇ.



ಪಕ್ಷದ ವಲಯದಲ್ಲಿ ನಿಜವಾಗಿಯೂ ಸಮರ್ಥ ಅಭ್ಯರ್ಥಿ ಎನಿಸಿಕೊಂಡಿರುವ ಆಯನೂರು ಮಂಜುನಾಥ್‌ರೊಂದಿಗೆ ಮುಖಮಾಸಿದವರನ್ನು ತಂದು ನಿಲ್ಲಿಸಿ, ಅವರ ತಲೆಗೆ ಇಲ್ಲದ ಅರ್ಹತೆಯನ್ನು ಕಟ್ಟಿ, ಪಕ್ಷದ ವರಿಷ್ಠರನ್ನು ಗೊಂದಲಕ್ಕೀಡುಮಾಡಿ, ಕೊನೆಗೆ ತಮ್ಮ ಮಗ ರಾಘವೇಂದ್ರನೇ ಸರ್ವಸಮ್ಮತ 'ಅಭ್ಯರ್ಥಿ ಎಂಬಂತೆ ಮಾಡುವುದು ಯಡ್ಡಿ ಹೂಡಿದ ತಂತ್ರ. ಈ ತಂತ್ರದಂತೆಯೇ ಈಗ ಎಲ್ಲ ನಡೆಯುತ್ತಿದೆ. ಹೀಗಾಗಿ ಶಿವಮೊಗ್ಗದ ಆಕಾಂಕ್ಷಿಗಳ ಪಟ್ಟಿಯಲ್ಲಿ ಏಳಕ್ಕೂ ಹೆಚ್ಚು ಪ್ರಮುಖ ಹೆಸರುಗಳಿವೆ. ರಾಘವೇಂದ್ರ, ಆಯನೂರು ಮಂಜುನಾಥ್, ಭಾನುಪ್ರಕಾಶ್, ಆರ್.ಕೆ.ಸಿದ್ಧರಾಮಣ್ಣ, ಪದ್ಮನಾಭ ಭಟ್, ಎಸ್.ಎಸ್. ಜ್ಯೋತಿ ಪ್ರಕಾಶ್, ಈಡಿಗ ಸಂಘದ ಅಧ್ಯಕ್ಷ ಶ್ರೀಧರ್, ರುದ್ರೇಗೌಡ ಹೀಗೆ ಪಟ್ಟಿ ಬೆಳೆಯುತ್ತಲೇ ಇದೆ.

ಇನ್ನೊಂದೊ, ಎರಡೋ ಸಭೆ ನಡೆಸಿದ ನಂತರ, 'ಕೊನೆಗೆ ಪಕ್ಷದ ಹೆಚ್ಚಿನ ನಾಯಕರ ಒತ್ತಡಕ್ಕೆ ಮಣಿದು 'ಸರ್ವಸಮ್ಮತ ಅಭ್ಯರ್ಥಿ'ಎನಿಸಿದ ರಾಘವೇಂದ್ರನನ್ನು ಕಣಕ್ಕಿಳಿಸಲು ನಿರ್ಧರಿಸಲಾಗಿದೆ' ಎಂದು ಯಡ್ಡಿ ಪ್ರಕಟಿಸಲಿದ್ದಾರೆ.

ಇದು ಯಡ್ಡಿಯ ವಿರೋಧಿ ಬಣದಲ್ಲಿರುವ ಶಿವಮೊಗ್ಗದ ಈಶ್ವರಪ್ಪಗೂ ಗೊತ್ತು, ರಾಜ್ಯದ ಉಸ್ತುವಾರಿ ನೋಡಿಕೊಳ್ಳಲು ಹೆಗಲು ಕೊಟ್ಟಿರುವ ಅನಂತುಗೂ ಗೊತ್ತು, ಆದರೂ 'ದೂರಾ'ಲೋಚನೆಯಿಂದ ಸುಮ್ಮನಿದ್ದಾರೆ. ಒಂದು ವೇಳೆ ರಾಘವೇಂದ್ರ ನಿಂತು ಸೋತರೆ, ಮುಖ್ಯಮಂತ್ರಿ ಯಡ್ಡಿಯ ಅರ್ಧ ಶಕ್ತಿ ಕುಂದಿದಂತೆ. ಎಗ್ಗಿಲ್ಲದೆ ಮುನ್ನಡೆದಿರುವ ಯಡ್ಡಿಗೆ ಮೂಗುದಾರ ಹಾಕಲು ಇದೊಂದು ಅವಕಾಶ ಎಂದೇ ಭಾವಿಸಿರುವ ಅವರು, ಯಡ್ಡಿ ಗುಂಡಿಗೆ ಬೀಳುವುದನ್ನು ನೋಡಲು ಕಾದು ಕುಳಿತಿದ್ದಾರೆ. ಏನುಮಾಡೇ, ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಕಣಕ್ಕಿಳಿಯಲಿರುವ ಬಂಗಾರಪ್ಪ, 'ಇದೇ ಕೊನೆಯ ಚುನಾವಣೆ' ಎಂದು ಪ್ರಚಾರ ಮಾಡಿ, ಸಿಂಪತಿ ಓಟು ಪಡೆದು ಗೆದ್ದು, ರಾಘವೇಂದ್ರ ಸೋತರೆ ಆಗ ಮೊದಲು ಹಾಲು ಕುಡಿಯುವವರೇ ಇವರು!

■ ವರದಿಗಾರ





ಜೇಡ್ ಗೂಡಿ ಸಾವಿನೆದುರೂ ಸಂಭ್ರಮ

ಪಾರ್ವತೀಶ

ಪ್ರಖ್ಯಾತ ಬ್ರಿಟಿಷ್ ಮುದ್ದು ಪೆದ್ದು ಟಿವಿ ನಟಿ ಜೇಡ್ ಗೂಡಿ ಸಾಯಲು ತಯಾರಾಗುತ್ತಿದ್ದಾಳೆ. ಈಗಿನ್ನು ಇಪ್ಪತ್ತೇಳು ವರ್ಷದ ಗೂಡಿಗೆ ಕ್ಯಾನ್ಸರ್. ಇನ್ನುಳಿದಿರುವ ಬದುಕು ಬಹುಶಃ ಇಪ್ಪತ್ತೇಳು ದಿನ ಇದ್ದೀತು. ಈ ಉಳಿದಿರುವ ಬದುಕನ್ನು ನಂತರದ ಸಾವನ್ನು ಅವಳು ಆಚರಿಸಲು ತಯಾರಾಗುತ್ತಿರುವ ರೀತಿ ಈಗ ವಿಶ್ವಮಟ್ಟದ ಸುದ್ದಿಯಾಗಿ ಬಿಟ್ಟಿದೆ.

ಈ ಜೇಡ್ ಗೂಡಿಯೆಂಬ ಬೃಹತ್ ದೇಹದ ಮಹಿಳೆಯ ಬಗ್ಗೆ ನಾವೆಲ್ಲಾ ಕೇಳಿದ್ದು ಬಿಗ್ ಬ್ರದರ್ ರಿಯಾಲಿಟಿ ಶೋನಲ್ಲಿ. ಹಿಂದಿ ನಟಿ ಶಿಲ್ಪಾ ಶೆಟ್ಟಿಯೂ ಲಂಡನ್‌ಗೆ ಹೋಗಿ ಆ ಶೋನಲ್ಲಿ ಭಾಗಿಯಾಗಿದ್ದಾಗ ಜೇಡ್ ಜನಾಂಗೀಯ ನಿಂದನೆ ಮಾಡಿದಳೆಂದು ಅದೇ ದೊಡ್ಡ ವಿವಾದವಾಗಿತ್ತು. ಶಿಲ್ಪಾ ಶೆಟ್ಟಿ ಅತ್ತೂ ಕರೆದು, ಕೊನೆಗೆ ಜೇಡ್ ಕ್ಷಮೆ ಕೇಳಿದ ಮೇಲೆ ಆ ಪ್ರಕರಣ ತಣ್ಣಗಾಗಿತ್ತು ಸರಿ. ಆದರೆ ಜೇಡ್ ತನ್ನಿಡೀ ಜೀವಮಾನದಲ್ಲೇ ಎಂದೂ ತಣ್ಣಗಿದ್ದವಳಲ್ಲ.



ಗೂಡಿ ಮಕ್ಕಳು

ತನ್ನ 19 ನೇ ವಯಸ್ಸಿನಲ್ಲೇ ಟಿವಿ ಕ್ಯಾಮೆರಾದೆದುರು ನಿಂತ ಜೇಡ್ ಅಲ್ಲಿಂದಾಚೆಗೆ ಏನು ಮಾಡಿದರೂ, ಮಾತಾಡಿದರೂ ಅದು ಸುದ್ದಿಯಾಗುತ್ತಿತ್ತು. ಈಗ ಅವಳಿಗೆ ಕ್ಯಾನ್ಸರ್ ಆಗಿದೆ, ಅವಳು ಬದುಕುಳಿಯುವ ಛಾನ್ಸ್ ಇಲ್ಲ ಎಂದು ವೈದ್ಯರು ಕೈಚೆಲ್ಲಿದ್ದಾರೆ. ಎಂಥ ಗಟ್ಟಿಮನಸ್ಸಿನವರೂ ಕುಸಿದು ಹೋಗಬಹುದಾದ ಸಂದರ್ಭದಲ್ಲೇ ಗೂಡಿ ಪುಟಿದೆದ್ದು ನಿಂತಿದ್ದಾಳೆ. ನಿನ್ನೆ ಫೆಬ್ರವರಿ 22 ರಂದು ತನ್ನ ಬಾಲಕ ಗೆಳೆಯ ಇಪ್ಪತ್ತೊಂದು ವರ್ಷದ ಜಾಕ್ ಟ್ವೀಡ್‌ನನ್ನು ತನ್ನ ಊರಾದ ಎಸೆಕ್ಸ್‌ನಲ್ಲಿ ಮದುವೆಯಾಗಿದ್ದಾಳೆ. ಅಷ್ಟೇ ಅಲ್ಲ, ಯಾರ್‍ಯಾರನ್ನು ಮದುವೆಗೆ ಬನ್ನಿ ಅಂತ ಕರೆದಿದ್ದಳೋ ಅವರನ್ನೇ ತನ್ನ ಅಂತ್ಯಸಂಸ್ಕಾರಕ್ಕೂ ಬಂದು ಹೋಗುವಂತೆ ಅಧಿಕೃತವಾಗಿ ಹೇಳಿಬಿಟ್ಟಿದ್ದಾಳೆ.

ಇಂಗ್ಲೆಂಡಿನ ತುಂಬಾ ಈಗ ಇದೇ ಮಾತು. ಅಲ್ಲಿನ ಪ್ರಧಾನಿ ಗಾರ್ಡನ್ ಬ್ರೌನ್ ಗೂಡಿಯ ಬಗ್ಗೆ ತನಗೆ ವಿಷಾದ ಅನಿಸಿದೆ ಅಂದಿದ್ದರೆ ಅಲ್ಲಿನ ಕಾನೂನು ಕಾರ್ಯದರ್ಶಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಗೂಡಿಯ ಜೊತೆಗೆ ಮದುವೆಯ ಮೊದಲ ರಾತ್ರಿ ಕಳೆಯಲು ಜಾಕ್ ಟ್ವೀಡ್‌ಗೆ ವಿಶೇಷ ಅನುಮತಿ ಕೊಡಿಸಿಬಿಟ್ಟಿದ್ದಾನೆ.

ಇದರಲ್ಲಿ ಅನುಮತಿ ನೀಡುವ ವಿಚಾರ ಯಾಕೆ ಅಂದಿರಾ?


ಯಾಕೆಂದರೆ ಈ ಟ್ವೀಡ್ ಈಗ ಜೈಲು ವಾಸಿ!

ಹಲ್ಲೆ ಪ್ರಕರಣವೊಂದರಲ್ಲಿ ಆರೋಪಿಯಾಗಿ 16 ತಿಂಗಳ ಸೆರೆವಾಸ ಅನುಭವಿಸುತ್ತಿದ್ದಾನೆ. ಹಾಗಾಗಿ ಗೂಡಿಯ ಮದುವೆ ದಿನ ಅವನು ಪರೋಲ್ ಮೇಲೆ ಜೈಲಿಂದ ಆಚೆ ಬರಲು ವಿಶೇಷ ರಿಯಾಯಿತಿ ನೀಡಿದೆ ಇಂಗ್ಲೆಂಡ್ ಸರ್ಕಾರ. ಆದರೆ ಅಲ್ಲಿ ಕೆಲ ಹತೋಟಿಗೆ ಸಿಗದ ಉದ್ಧಟ ಕ್ರಿಮಿನಲ್‌ಗಳಿಗೆ ರಾತ್ರಿ ನಿಷೇಧ (night curfew) ಶಿಕ್ಷೆ ಇರುತ್ತದೆ. ಅಂದರೆ ಒಂದು ವೇಳೆ ಒಂದೇ ದಿನದ ಪರೋಲ್ ಮೇಲೆ ಆಚೆ ಬಂದರೂನೂ ಅದೇ ರಾತ್ರಿ ಆರೋಪಿ ಜೈಲಿಗೆ ವಾಪಸ್ಸಾಗಬೇಕೆಂಬ ಷರತ್ತು ಅದು. ಆದರೆ ಈಗ ಗೂಡಿಯ ಬಗ್ಗೆ ಇಡೀ ಇಂಗ್ಲೆಂಡಿನಲ್ಲಿ ಎಷ್ಟು ಅನುಕಂಪದ, ಮಮಕಾರದ ಅಲೆ ಎದ್ದಿದೆಯೆಂದರೆ ಸರ್ಕಾರ, ಮಿಡಿಯಾಗಳು ಹಾಗೂ ಲಕ್ಷಾಂತರ ಜನ ಅವಳಿಗಾಗಿ, ಅವಳ ಸಂತೋಷಕ್ಕಾಗಿ ಏನಾದರೂ ನೀಡಲು ಬಯಸುತ್ತಿದ್ದಾರೆ. ಅವಳ ಮದುವೆ ಹಾಗೂ ಒಂದು ದಿನದ ಕೇವಲ ಒಂದೇ ಒಂದು ದಿನದ ದಾಂಪತ್ಯ ಜೀವನ ಅರೇಂಜ್ ಆಗಿರುವುದೇ ಹೀಗೆ. ಈ ಮದುವೆ ಮುಗಿಸಿಕೊಂಡು ಜಾಕ್ ಟ್ವೀಡ್ ಮರುದಿನ ಬೆಳಗ್ಗೆಯೇ ಮತ್ತೆ ಜೈಲಿಗೆ ಹೋಗಿದ್ದಾನೆ. ಬಹುಶಃ ಅವನ ಮತ್ತು ಗೂಡಿಯ ಮುಂದಿನ ಭೇಟಿ ಸ್ಮಶಾನದಲ್ಲೇ.

ಪೆದ್ದೀನಾ-ಜಾಣೆನಾ?

ಚರಿತ್ರೆ ಓದಿದವರಿಗೆ ಈಜಿಪ್ಟಿನ ಫೆರೋ ದೊರೆಗಳು ತಾವು ಬದುಕಿರುವಾಗಲೇ ತಮಗಾಗಿ ಬೃಹತ್ ಸಮಾಧಿಗಳನ್ನು ನಿರ್ಮಿಸಿಟ್ಟುಕೊಳ್ಳುತ್ತಿದ್ದ ವಿಚಾರ ಗೊತ್ತಿರುತ್ತದೆ. ಪಿರಮಿಡ್‌ಗಳೆಂದು ನಾವು ಕರೆಯುವ ಆ ರಚನೆಗಳೆಲ್ಲಾ ಇಂಥ ಸಮಾಧಿಗಳೇ. ಈ ಆಧುನಿಕ ಕಾಲಕ್ಕೆ ಬಂದರೆ ಅನೇಕ ಸೆಲಿಬ್ರಿಟಿಗಳು ತಮ್ಮ ಸಾವನ್ನು ಬೇರೆಬೇರೆ ರೀತಿ ಬರಮಾಡಿಕೊಂಡಿದ್ದಾರೆ. ಹಾಲಿವುಡ್ ನಟ ರಾಕ್ ಹಡ್ಸನ್ ತನಗೆ ಏಡ್ಸ್ ಬಂದಾಗ ಅದನ್ನು ಎಲ್ಲರೆದುರೂ ಹೇಳಿಕೊಂಡನಲ್ಲದೆ ಈ ವೈರಸ್ ಬಗ್ಗೆ ಎಚ್ಚರದಿಂದಿರಿ ಎಂತಲೂ ಜನಜಾಗೃತಿಯ ಪ್ರಚಾರ ಮಾಡಿ ಸತ್ತ. ಹಿಂದಿ ನಟ ರಾಜಕುಮಾರ್ ಯಾರಿಗೂ ಹೇಳದೆ ಕ್ಯಾನ್ಸರ್ ಅನುಭವಿಸಿ ಹೊರಟುಹೋದ. ನಮ್ಮ ಕನ್ನಡ ನಟ ಕಲ್ಯಾಣ್‌ಕುಮಾರ್ ತಾನೆ ಏನು?

ಕ್ಯಾನ್ಸರ್‌ಗೆ ತುತ್ತಾಗಿದ್ದರೂ ಆ ಬಗ್ಗೆ ಎಲ್ಲೂ ಮಾತಾಡಲಿಲ್ಲ, ಯಾರ ನೆರವೂ ಕೇಳಲಿಲ್ಲ, ತಣ್ಣಗೆ ತನ್ನ ಪಾಡಿಗೆ ಉಳಿದ ದಿನ ಕಳೆದು ನಿರ್ಗಮಿಸಿದ್ದರು. ಆದರೆ ಈ ಗೂಡಿ ಹಾಗಲ್ಲ. ಅಷ್ಟೇ ಏನು ಇಂಗ್ಲೆಂಡಿನ, ಯೂರೋಪ್, ಅಮೆರಿಕಾದ ಜನರೂ ಹಾಗಿಲ್ಲ.



ಜಾಕ್ ಟ್ವೀಡ್

ಅವರಿಗೆ ಜಗಿದು ತಿನ್ನಲು ಸದಾ ಏನಾದರೂ ಸುದ್ದಿ ಬೇಕು. ಹಗರಣ, ಹಾದರ, ದುರಂತ, ಯುದ್ಧ ನೇಣು ಕೊನೆಗೆ ಗೂಡಿ ತರದ ಘಟನೆಗಳಾದರೂ - ಸರಿ ಅಂತವೆಲ್ಲಾ ರಾತ್ರೋರಾತ್ರಿ ಸುದ್ದಿಯಾಗುತ್ತವೆ. ಎಲ್ಲಾ ಟ್ಯಾಬ್ಲಾಯ್ಡ್ ಪತ್ರಿಕೆಗಳು, ಟಿವಿ ಚಾನೆಲ್ಲುಗಳು ಆ ಸುದ್ದಿಯ ಹಿಂದೆ ಬೀಳುತ್ತಾ ಹೊಟ್ಟೆ ತುಂಬಿಸಿಕೊಳ್ಳುತ್ತವೆ. ಇದರಲ್ಲೆಲ್ಲಾ ಒಂದು ಶುದ್ಧ ವ್ಯಾಪಾರ ಇರುತ್ತಾದರೂ ಇಡೀ ಸಮಾಜ ಅದರಿಂದ move ಆಗಿರುತ್ತದೆ.

ಗೂಡಿಯ ಜಾಣತನ, ಸಾವಿನ ಬಾಗಿಲಲ್ಲಿ ನಿಂತಿರುವಾಗಲೂ ಬಿಡದ ಲೆಕ್ಕಾಚಾರ ಕಾಣುವುದು ಇಲ್ಲಿಯೇ. ಅದೇನೆಂದರೆ ಈ ಗೂಡಿ ತನ್ನ ಮದುವೆ ಸಮಾರಂಭದ ಫೋಟೋ ಹಾಗೂ ಟೆಲಿವಿಜನ್ ಹಕ್ಕುಗಳನ್ನು max clifford ಎಂಬ ಪ್ರಚಾರ ಸಂಸ್ಥೆಗೆ ಮಾರಿಕೊಂಡಳು.

ಅದರಿಂದ ಅವಳಿಗೆ ಸಿಕ್ಕಿದ್ದೆಷ್ಟು ಗೊತ್ತೆ?

ಕೋಟ್ಯಂತರ ರೂಪಾಯಿಗಳು!

ಈ ಹಣಾನ ಅವಳು ತನ್ನಿಬ್ಬರು ಪುಟ್ಟ ಮಕ್ಕಳಿಗೆಂದು ಅವರ ಭವಿಷ್ಯಕ್ಕೆಂದು ಸಂಪಾದಿಸಿದ್ದಾಳೆ. ಬಹುತೇಕ ಅವಳ ಬದುಕಿನ ಕೊನೆ ದಿನಗಳಲ್ಲಿ ನಡೆದ ಇಡೀ ಮದುವೆಯೇ ಒಂದು ಡೀಲ್. ಒಬ್ಬ ನಟಿ, ಜಗಳಗಂಟಿ, ಅಸಾಧ್ಯ ಪೆದ್ದಿ, ಬಡತನದಿಂದ ಬಂದವಳು, ಸೆಕ್ಸು ಪಕ್ಸು ಅಂತೆಲ್ಲಾ ಬಾಯಿಬಡುಕಿಯಂತೆ ವದರುತ್ತಿದ್ದಳು. ಒಟ್ಟಿನಲ್ಲಿ ಸದಾ ಸುದ್ದಿಯಲ್ಲಿರಲು ಇರಬೇಕಾದ ಬಹುತೇಕ ಕ್ವಾಲಿಟಿಗಳು ಗೂಡಿಗಿವೆ. ಈಗ ದುರದೃಷ್ಟವಶಾತ್ ಅವಳಿಗೆ ಕ್ಯಾನ್ಸರ್ ಆಗಿದೆ. ಜನ ಈ ಕ್ಷಣದಲ್ಲಿ ಅವಳ ದೋಷ, ಮಿತಿಗಳನ್ನು ಮರೆತು ಅವಳಿಗಾಗಿ ಕಂಬನಿ ಹರಿಸುತ್ತಿದ್ದಾರೆ. ಲೇಡಿ ಡಯಾನ ಸತ್ತಾಗ ಸಾವಿರಾರು ಜನ ಬಕಿಂಗ್‌ಹ್ಯಾಂ ಅರಮನೆ ಗೇಟಿನ ಮುಂದೆ ಸಾಲುಗಟ್ಟಿ ಹೂಗುಚ್ಛವಿರಿಸಿ ಬಂದು ದುಃಖ ತೋರಿಸಿದರಲ್ಲ ಗೂಡಿಯ ನಿರ್ಗಮನದಲ್ಲೂ ಬಹುಶಃ ಅವೇ ದೃಶ್ಯಗಳಿರುತ್ತವೆ.

"ಡಿಯರ್ ಫ್ರೆಂಡ್ಸ್, ನೀವೆಲ್ಲಾ ಟಿವಿ ಮುಂದೆ ಕುಳಿತು ಟೀ ಕುಡಿಯುತ್ತಾ ನಾನು ಹೊರಟುಹೋಗುವುದನ್ನು ನೋಡಬೇಕು" ಅಂತ ಗೂಡಿ ಈಗಲೇ ಹೇಳಿಬಿಟ್ಟಿದ್ದಾಳೆ.

ಇದರಲ್ಲಿನ ಜಾಹೀರಾತು, ಟಿವಿ ಹಕ್ಕು, ಪುಸ್ತಕ ಮಾರಾಟದ ಲೆಕ್ಕಾಚಾರಗಳೇನೇ ಇರಲಿ ಈ ಗೂಡಿಯೆಂಬ ದೈತ್ಯ ಹೆಂಗಸಿನ ಮನೋಸ್ಥೈರ್ಯ ಮಾತ್ರ ಶ್ಲಾಘನೀಯ ಬಿಡಿ.

ಕ್ಯಾನ್ಸರ್ ಭೀತಿ ಅವಳಿಗೆ ಹೊಸ ದೇನಲ್ಲ. ಈ ಹಿಂದೆ 2002 ರಲ್ಲಿ ಆಮೇಲೆ 2004 ರಲ್ಲೂ ಅವಳಿಗೆ ಕ್ಯಾನ್ಸರ್ ತಾಗಿತ್ತು, ಅದಕ್ಕೆ ಚಿಕಿತ್ಸೆ ಪಡೆದು ಪಾರಾದಳಾದರೂ ಈಗಿನ ಅನಾರೋಗ್ಯದಿಂದ ಅವಳು ಪಾರಾಗಲು ಅಸಾಧ್ಯ ಎಂದಾಗಿದೆ. ಅವಳಪ್ಪ ಆಂಡ್ರ್ಯೂ ಗೂಡಿ ಬಡವನಾಗಿದ್ದ. ಡ್ರಗ್ ಅಡಿಕ್ಟ್ ಬೇರೆ. ಒಂದು ಸಾರಿ ಮಾದಕ ವಸ್ತು ಓವರ್ ಡೋಸ್ ತೆಗೆದುಕೊಂಡು ಸತ್ತೇ ಹೋದಾಗ ಅವನಿಗಿನ್ನೂ ನಲವತ್ತೆರಡು ವರ್ಷ ಮಾತ್ರ ಆಗಿತ್ತು. ಅಮ್ಮ ಜಾಕಿ ಇದ್ದಾಳೆ. ಗೂಡಿಯ ಮೊದಲ ಗಂಡ ಜೆಫ್ ಒಬ್ಬ ಫುಟ್‌ಬಾಲ್ ಆಟಗಾರ. ಅವನಿಂದ ಪಡೆದ ಫ್ರೆಡ್ ಹಾಗೂ ಬಾಬಿ ಜಾಕ್ ಈಗಿನ್ನೂ ನಾಲ್ಕೈದು ವರ್ಷದ ಮಕ್ಕಳು.

'ಅವರ ಬದುಕಿಗೆ ನಾನೇನಾದರೂ ಮಾಡಿ ಹೋಗ

▶▶▶


ಒಂದು ಸಾವಿಗೆ ಆದ್ಯತೆ, ಲಕ್ಷ ಸಾವಿಗೆ ನಿರ್ಲಕ್ಷ್ಯ

ಈ ಇಂಗ್ಲಿಷ್ ಜನ ಸ್ವಭಾವತಃ ಬೋರ್ ಹೊಡೆಸುವ ಮಂದಿ. ಆದರೆ ಆ ಸಮಾಜ ಮಾತ್ರ ಬೋರ್‌ಡಂ ಸಹಿಸುವುದಿಲ್ಲ, ಅವರಿಗೆ ಥ್ರಿಲ್ ಬೇಕು, ಸೆನ್ಸೇಷನ್ ಬೇಕು, ಹಾಗಾಗಿ ಅಲ್ಲಿನ ಸನ್, ಮಿರರ್, ಡೈಲಿ ಮೇಲ್ ಮುಂತಾದ ಟ್ಯಾಬ್ಲಾಯ್ಡ್ ದಿನಪತ್ರಿಕೆಗಳ ತುಂಬಾ ಪ್ರತಿದಿನ ಸೆಕ್ಸು, ಹಗರಣ, ವಿವಾದಗಳೇ ತುಂಬಿರುತ್ತವೆ. ಪಮೇಲಾ, ಡೇವಿಡ್ ಬೆಕಂ, ಲೇಡಿ ಡಯಾನ ಹೀಗೆ ಒಬ್ಬರಲ್ಲಾ ಒಬ್ಬರು ಈ ಪತ್ರಿಕೆಗಳಿಗೆ ಫುಲ್‌ಮೀಲ್ಸ್ ಆಗುತ್ತಿರುತ್ತಾರೆ. ಅದೇ ರೀತಿ ಈ ಬಾರಿಯ ಸರದಿ ಜೇಡ್ ಗೂಡಿಯದ್ದು.

ಆದರೂ ಇಲ್ಲೊಂದು ವಿಪರ್ಯಾಸ ಎದ್ದು ಕಾಣುತ್ತಿದೆ.

ಈ ಜೇಡ್ ಗೂಡಿಯ ಕ್ಯಾನ್ಸರ್ ಕಾಯಿಲೆ ಹಾಗೂ ಸಂಭವನೀಯ ಸಾವು ಒಬ್ಬ ವ್ಯಕ್ತಿಯ ದುರಂತ. ಆದರೂ ಇಡೀ ಬ್ರಿಟಿಷ್ ಸಮಾಜದ ಗಮನ ಅವಳೆಡೆಗಿದೆ. ಅದೇ ವೇಳೆ ಬ್ರಿಟಿಷ್ ಸೇನೆ ಇರಾಕ್-ಅಫಘಾನಿಸ್ತಾನಗಳಲ್ಲಿ ಲಕ್ಷಾಂತರ ಜನರಿಗೆ ಸಾವು ತರುತ್ತಿದೆ. ಈ ಘನಘೋರ ದುರಂತ ಆ ಸಮಾಜದ ಮನ ಕಲಕುತ್ತಿಲ್ಲ.

ಇಬ್ಬಂದಿತನ, ಹಿಪಾಕ್ರಸಿ ಅಲ್ಲವೆ ಇದು?






...ವೂ ಒಂದು ...ಯಾಲಿಟಿ ಶೋ

...ಟ್ಟು ಉಚಿತ, ಸಾವು ಖಚಿತ ಎಂಬ ಸ್ಲೋಗನ್ ...ಂಗಳೂರಿನ ಕೆಲ ಆಟೋ ಡ್ರೈವರ್‌ಗಳು ತಮ್ಮ ...ಳ ಹಿಂದೆ ಬರೆಸಿಕೊಂಡಿರುತ್ತಾರೆ. ಅದೊಂಥರಾ ...Man's Philosophy.

...ಗ ಗೂಡಿ ತನಗೆ ಖಚಿತವಾಗಿರುವ ಸಾವನ್ನು ...ಮರಾಗಳ ಎದುರು ಬರಮಾಡಿಕೊಳ್ಳುತ್ತಾಳಾ ...ಕುತೂಹಲ ಬೆಳೆದಿದೆ.

...ವ್ಯಕ್ಕೆ ಅಂತಾ ಯೋಚನೆ ಏನೂ ಇಲ್ಲ' ಎಂಬುದು ...ಪ್ರಚಾರ ಏಜೆಂಟ್ ಕಂಪನಿ ಮ್ಯಾಕ್ಸ್ ಕ್ಲಿಫರ್ಡ್ ... ಅಂದರೆ ಅಕಸ್ಮಾತ್ ಭಾರಿ ಹಣ ಸಿಗುತ್ತದೆ ...ದರೆ ಅವರು ಇದನ್ನೂ ಪ್ಲಾನ್ ಮಾಡಿದರೂ ...ಶ್ಚರ್ಯವಿಲ್ಲ.

ಕ್ಲಿಫರ್ಡ್ ಕಂಪನಿಯ ಕೆಲಸವೇ ಅದು. ಈ ...ಖ ಅವರು ಬಾಕ್ಸರ್ ಮಹಮದಾಲಿ, ನಟ ...ರ್ ಬ್ರಾಂಡೊ, ಚಂಚಲೆ ಪಮೇಲಾ ಬೋರ್ಡರ್ಸ್‌ರ ...ಯಾ ಮ್ಯಾನೇಜರ್‌ಗಳಾಗಿದ್ದರು. ಹಾಗಂತ ಇದರ ...ಕ ಮ್ಯಾಕ್ಸ್ ಧನ ಪಿಶಾಚಿಯೂ ಅಲ್ಲ, ಅವನು ...ಳಿಕೆಯ ಒಂದಂಶವನ್ನು ದಾನ ಮಾಡುತ್ತಾನೆ. ತನ್ನ ... ವಯಸ್ಸಿನಲ್ಲಿ ಮೂರ್ಛೆ ರೋಗಕ್ಕೀಡಾಗಿ ಈಗ ...ರಿಗೂ ಹಣಕಾಸಿನ ಸಹಾಯ ಮಾಡುತ್ತಿದ್ದಾನೆ.

...ಡ್ ಹತ್ತಿರ ಜಾಸ್ತಿ ಹಣ ಇಲ್ಲ, ಅವಳಿಬ್ಬರ ... ಜೀವನಕ್ಕೆ ಹಣ ಸಿಗೋದಾದರೆ ಜೇಡ್ ತನ್ನ ... ಮಾರಿಕೊಂಡರೆ ತಪ್ಪೇನು' ಎಂಬುದೇ ಅವರ ...ಇದಕ್ಕೆ ನಿಮ್ಮಲ್ಲಿ ಉತ್ತರ ಇದೆಯಾ?


... ಎಂಬ ಹಂಬಲಿಕೆ ಗೂಡಿಗೆ. ಹಾಗಾಗಿ ಅವಳು ...ದಿರುವ ಪ್ರತಿ ದಿನ, ಪ್ರತಿ ಗಂಟೆಯನ್ನು ಬಹಳ ...ರ ಹಾಕಿ ಖರ್ಚು ಮಾಡುತ್ತಿದ್ದಾಳೆ. ಅರ್ಜೆಂಟಾಗಿ ... A Falling Star ಎಂಬ ಆತ್ಮಕತೆ ಬರೆದು ...ದ್ದಾಳೆ. ಪತ್ರಿಕಾ ಸಂದರ್ಶನ, ಟಿವಿ ಪ್ರೋಗ್ರಾಂಗಳೆಂದು ...ಾ ಬ್ಯುಸಿಯಾಗಿದ್ದಾಳೆ. ಕ್ಯಾನ್ಸರ್ ಟ್ರೀಟ್‌ಮೆಂಟಿಗೆಂದು ...ಥೆರಪಿಗೆ ಹೋದರೆ ಕೂದಲು ಉದುರಿ ...ತ್ತವೆ. ಆದರೆ ಗೂಡಿ ಆ ಗಳಿಗೆ ಬರುವವರೆಗೂ ... ತಾನೇ ತಲೆ ಬೋಳಿಸಿಕೊಂಡು ನಸುನಗುತ್ತಾ ...ಾಗೆ ಪೋಸ್ ಕೊಟ್ಟಿದ್ದಾಳೆ.

ಮೊದಲೆಲ್ಲಾ ಜೇಡ್ ಗೂಡಿ ಅಂದರೇನೆ ...ನ್ ಪೆದ್ದಿ ಎನ್ನಲಾಗುತ್ತಿತ್ತು. ಟಿವಿ ಪ್ರೋಗ್ರಾಂ ...ಲ್ಲಿ ಅವಳ ಅಜ್ಞಾನದ ವಿರಾಟ್ ದರ್ಶನ ಆಗಿತ್ತು, ...ೂಮ್ಮೆ ನವಿಲನ್ನು ತೋರಿಸಿದಾಗ ಅದರ ರೆಕ್ಕೆಗಳಲ್ಲಿನ ... ನಿಜವಾದ ಕಣ್ಣುಗಳು ಎಂದು ಭಾವಿಸಿದ್ದಳು. ...ಕಗೆ ಹೋದರೆ ಯಶಸ್ಸು-ಕೀರ್ತಿ ಸಿಗುತ್ತೆ ಅಂತಾ ... ಕೊಟ್ಟಾಗ 'ಅಲ್ಲಿ ಇಂಗ್ಲಿಷ್ ಮಾತಾಡುತ್ತಾರಾ?' ...ಕೇಳಿದ್ದಳು. ರಯೋ ಡಿ ಜನೈರೊ (ಬ್ರೆಜಿಲ್ ...ನ) ಪ್ರಸ್ತಾಪ ಬಂದಾಗೊಮ್ಮೆ ಅದೊಂದು ವ್ಯಕ್ತಿ ...? ಅಂತ ಮರುಪ್ರಶ್ನೆ ಹಾಕಿದ್ದಳು. ಇದು ಅವಳಿಗಿದ್ದ ...ಜ್ಞಾನ. ಅಷ್ಟೆ ಅಲ್ಲಾ ಬಿಗ್ ಬ್ರದರ್ ಶೋನಲ್ಲಿ ...ಡುಪು ಕಿತ್ತೆಸೆದು ಸುದ್ದಿ ಮಾಡಿದ್ದಳು, ತಲೆ ಕೆಟ್ಟಂತೆ ... ತನ್ನದೊಂದು ಕಂಡೆ ಮೇಲೆ ಹಚ್ಚಿ ...ಸಿಕೊಂಡು ಫೋಟೋ ತೆಗೆಸಿಕೊಂಡಿದ್ದಳು.

...ಗ ಸಾವಿನ ಬಾಗಿಲಲ್ಲಿ ನಿಂತಿರುವ ಆ ವ್ಯಕ್ತಿಯೆದುರು ... ಗೌಣ. ಹವಿಲಿನ ಬಗ್ಗೆ ರಯೋ ಡಿ ಜನೈರೊ ... ಗೊತ್ತಿರುವವರು ಸಾಯುತ್ತಾರೆ, ಗೊತ್ತಿರದಿದ್ದವರು ...ತ್ತಾರೆ, ಆದರೆ ಸ್ವಭಾವತಃ ಪೆದ್ದಿಯಾಗಿದ್ದರೂ ...ಮ ಸಂಭವನೀಯ ಸಾವು ಅವನ್ನೆಲ್ಲಾ ಮರೆಸುತ್ತಿದೆ.

ಜೇಡ್ ಗೂಡಿ ತನ್ನದೇ ಸಾವನ್ನು ಸಂಭ್ರಮ ... ವಿಷಾದದಿಂದ ಬರಮಾಡಿಕೊಳ್ಳುತ್ತಿರುವ ...ವಳಿಗಳು ಎಲ್ಲರನ್ನು move ಮಾಡುತ್ತಿದೆ.

...ನು ದಿಟ್ಟೆ. ■



ನಟಿ ಹರಿಪ್ರಿಯಾಗೆ ಡಾಲರ್ಸ್ ಕಾಲೋನಿಯ ಬಂಗಲೆ ಗಿಫ್ಟ್?

ಮುಖ್ಯಮಂತ್ರಿ ಮಗನ ಲವ್ ಸ್ಟೋರಿ







ಮುಖ್ಯಮಂತ್ರಿ ಗಾದಿಗೂ ಸಿನಿಮಾ ಸೆಂಟಗೂ ಅದೇನು ನಂಟೋ ಭಗವಂತನೇ ಬಲ್ಲ.

ಗುಂಡೂರಾಯರ ಭಾರ್ಗವಿ ಪುರಾಣ, ಪಟೇಲರ ಚೌಧುರಿ ವಿನೋದ, ಕುಮಾರಸ್ವಾಮಿಯ ರಾಧಿಕಾ ಪ್ರಣಯ ಪ್ರಸಂಗ ಇತ್ಯಾದಿ ಶೃಂಗಾರ ಕಾವ್ಯಗಳನ್ನೆಲ್ಲ ಕಾಲಾನುಕಾಲಕ್ಕೆ ಕಂಡುಂಡ ಗಾಂಧಿನಗರದ ಮಂದಿಗೆ ಈಗ ಮುಖ್ಯಮಂತ್ರಿ ಯಡಿಯೂರಪ್ಪನವರ ಕುಲಪುತ್ರ ವಿಜಯೇಂದ್ರ ಅಂತಹದ್ದೇ ಒಂದು ಹಳ್ಳಕ್ಕೆ ಬಿದ್ದಿದ್ದಾನೆಂಬ ಸುದ್ದಿ ಕೇಳಿ ಹೇಗಾಗಬೇಡ?

ಅದು ವಿಚಿತ್ರವಾದರೂ ವಿಶಿಷ್ಟ ಸುದ್ದಿ. ಹುಟ್ಟುವ ಮೊದಲೇ ಸತ್ತುಹೋದ 'ಮುಖ್ಯಮಂತ್ರಿ ಐ ಲವ್ ಯೂ' ಎಂಬ ಚಿತ್ರಕ್ಕೆ ನಾಯಕಿಯಾಗಿದ್ದ ಹರಿಪ್ರಿಯಾ ಎಂಬ ಹೀರೋಯಿನ್‌ಗೆ ಯಡ್ಡಿ ಮಗ ವಿಜಯೇಂದ್ರ, ಡಾಲರ್ಸ್ ಕಾಲೋನಿಯಲ್ಲಿ ಮನೆ ಮಾಡಿಟ್ಟಿದ್ದಾನೆಂಬುದು ಒಂದು ಸುದ್ದಿ. ನಿನ್ನೆಯಷ್ಟೇ ತೆರೆಕಂಡ 'ಈ ಸಂಭಾಷಣೆ' ಎಂಬ ಚಿತ್ರಕ್ಕೂ ಹೀರೋಯಿನ್ನಾಗಿರುವ ಹರಿಪ್ರಿಯಾ ಮತ್ತು ಮುಖ್ಯಮಂತ್ರಿ ಮಗ ವಿಜಯೇಂದ್ರ ಸದ್ಯದಲ್ಲೇ ಮದುವೆಯಾಗಲಿದ್ದಾರೆ ಎಂಬುದು ಮತ್ತೊಂದು ಸುದ್ದಿ. ಇದು ಗೊತ್ತಾಗಿದ್ದೇ ಮುಖ್ಯಮಂತ್ರಿ ಯಡಿಯೂರಪ್ಪ ಕೆಂಡಾಮಂಡಲರಾಗಿದ್ದಾರೆ ಅನ್ನೋದು ಮಗದೊಂದು ಸುದ್ದಿ!

ಈ ಪೈಕಿ ಯಾವ ಸುದ್ದಿ ನಿಜವಾದರೂ ನಷ್ಟವಾಗುವುದು ಮಾತ್ರ ಮುಖ್ಯಮಂತ್ರಿ ಯಡಿಯೂರಪ್ಪನವರಿಗೇ! ಅವರ ಮಾನ ಈಗಾಗಲೇ ಮೂರು ಕಾಸಿಗೆ ಹರಾಜಾಗುತ್ತಿದೆ.

ಆಸ್ತಿ, ಅಂತಸ್ತು, ಐಶ್ವರ್ಯ ಹೆಚ್ಚಾದಂತೆಲ್ಲಾ ಮುಕಳಿ ಸೊಕ್ಕೂ ಹೆಚ್ಚುತ್ತದೆ. ಇನ್ನು ಮುಖ್ಯಮಂತ್ರಿ ಮಗ ವಿಜಯೇಂದ್ರ ಹೇಳಿಕೇಳಿ ದಿಲ್ ಮಾಸ್ಟರ್. ರೂಪದಲ್ಲಲ್ಲದೇ ಹೋದರೂ ಪ್ರವೃತ್ತಿಯಲ್ಲಿ ತಂದೆಗೆ ತಕ್ಕ ಮಗನೇ. ಇನ್ನೂ ಮದುವೆಯಾಗಿಲ್ಲ, ಆದರೆ ಅಧಿಕಾರದ ಅಮಲು ತಲೆಗೇರಿದೆ. ಕೈಯಲ್ಲಿ ಹಣವಿದ್ದಾಗ ಬಗಲಲ್ಲಿ ಹೆಣ್ಣು ಇಲ್ಲವೆಂದರೆ ಹೇಗೆ? ಅನಾದಿಕಾಲದಿಂದಲೂ ಯಡ್ಡಿಯ ಎಲ್ಲಾ ದಂಧೆಗಳನ್ನು ಮನೆಯಿಂದಲೇ ನಿಭಾಯಿಸುತ್ತಿದ್ದ ವಿಜಯೇಂದ್ರನಿಗೆ ಅಪ್ಪ ಮುಖ್ಯಮಂತ್ರಿಯಾದದ್ದೇ ದೊಡ್ಡ ವರದಾನವಾಯಿತು. ತನ್ನ ಖಯಾಲಿಗಳನ್ನೆಲ್ಲ ಬೆಂಗಳೂರಿಗೆ ಸ್ಥಳಾಂತರಿಸಿದ ವಿಜಯೇಂದ್ರ ತನ್ನ ಹುಚ್ಚಾಟಗಳನ್ನು ಶುರುಹಚ್ಚಿಕೊಂಡ. ಅದರ ಫಲವೇ ಸದ್ಯದ ಹರಿಪ್ರಿಯಾ ರಗಳೆ.

ವಿಜಯೇಂದ್ರನ ಕತೆ ಇದಾದರೆ ಆತನ ಸಹೋದರ ರಾಘವೇಂದ್ರನದ್ದು ಇನ್ನೊಂದು ರೀತಿಯ ಕತೆ. ರಾಘವೇಂದ್ರನಿಗೆ ಮದುವೆಯಾಗಿದೆ. ಗದುಗಿನ ಶ್ರೀಮಂತ ಅಪ್ಪಣ್ಣ ಶಿವಪ್ಪ ಗದಗ್ ಮತ್ತು ವಿಮಲಾ ದಂಪತಿಗಳ ಮಗಳು ತೇಜಸ್ವಿನಿ ಈತನ ಧರ್ಮಪತ್ನಿ. ಮದುವೆಯಾಗಿ ವರ್ಷಗಳೇ ಕಳೆದುಹೋಗಿವೆ. ಈಗಾಗಲೇ ಇಬ್ಬರು ಮಕ್ಕಳಿದ್ದಾರೆ.

ರಾಘವೇಂದ್ರ, ಅಪ್ಪ ಯಡ್ಡಿಯ ರಾಜಕೀಯ ಉತ್ತರಾಧಿಕಾರಿ. ಶಿಕಾರಿಪುರದಲ್ಲಿ ತಂದೆಯ ವ್ಯವಹಾರ ಮತ್ತು ಅವ್ಯವಹಾರಗಳನ್ನು ನಿಭಾಯಿಸುತ್ತಿರುವ, ಮುಂದೊಂದು ದಿನ ಶಿಕಾರಿಪುರದ ಶಾಸಕನಾಗಿಯೋ, ಶಿವಮೊಗ್ಗೆಯ ಸಂಸದನಾಗಿಯೋ ಆಗೇ ತೀರುತ್ತೇನೆಂದು ನಂಬಿರುವವ. ಜೊತೆಗೆ ಅಪ್ಪನ ಕ್ಯಾಪಿಟೇಶನ್ ಸಾಮ್ರಾಜ್ಯವಾದ ವಿವೇಕಾನಂದ ವಿದ್ಯಾಸಂಸ್ಥೆಯ ಕುಮುದ್ವತಿ ನರ್ಸಿಂಗ್ ಕಾಲೇಜ್, ಮೈತ್ರಾದೇವಿ ಬಿಎಡ್ ಕಾಲೇಜ್ ಇತ್ಯಾದಿಗಳ ಜವಾಬ್ದಾರಿಗಳನ್ನು ಹೊತ್ತುಕೊಂಡಿರುವವನು ರಾಘವೇಂದ್ರನೇ.

ಇಲ್ಲಿಗೆ ಒಂದೂಕಾಲು ವರ್ಷದ ಹಿಂದೆ ತನ್ನದೇ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿನಿಯೊಬ್ಬಳೊಂದಿಗೆ ಚೋಗಕ್ಕೆ ಹೋಗಿದ್ದ ರಾಘವೇಂದ್ರ ಅಲ್ಲಿ ಆಕೆಯೊಂದಿಗೆ ಅಡ್ಡಾಡಿಕೊಂಡಿದ್ದಾಗಲೇ ಪತ್ರಕರ್ತರೊಬ್ಬರಿಗೆ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದ, ನರ್ಸಿಂಗ್ ಹುಡುಗಿಯ ಜೊತೆ ತನ್ನ ಫೋಟೋ ಕ್ಲಿಕ್ಕಿಸಿದ ಪತ್ರಕರ್ತನಿಗೆ ಕೊನೆಗೆ ಹತ್ತು ಲಕ್ಷ ಕಕ್ಕಿ ಹೇಗೋ ಬಚಾವಾದ ಎಂಬ ಸುದ್ದಿ ಆಗ ಶಿವಮೊಗ್ಗೆಯಲ್ಲಿ ಹಬ್ಬಿತ್ತು. ಅದು ಎಷ್ಟು ನಿಜವೋ, ಸುಳ್ಳೋ, ಯಾರಿಗೆ ಗೊತ್ತು. ಸದ್ಯಕ್ಕೆ ಇದೇ ರಾಘವೇಂದ್ರ ಬರಲಿರುವ ಲೋಕಸಭಾ ಚುನಾವಣೆಗೆ ಭಾರತೀಯ ಜನತಾ ಪಕ್ಷದಿಂದ ಶಿವಮೊಗ್ಗೆಯಲ್ಲಿ ಸ್ಪರ್ಧಿಸಲಿರುವ 'ಸಭ್ಯ ಗೃಹಸ್ಥ'!

ವಿಜಯೇಂದ್ರನ ವಿಷಯಕ್ಕೆ ಹಿಂದಿರುಗುವುದಾದರೆ, ಆತನಿಗೆ ಸಿನಿಮಾ ಶೋಕಿ ಅಂತ ಶುರುವಾಗಿದ್ದು ಅಪ್ಪ ಮುಖ್ಯಮಂತ್ರಿಯಾದ ನಂತರವೇ. ಇತ್ತೀಚೆಗಂತೂ ತಿಂಗಳಲ್ಲಿ ಹದಿನೈದು ದಿನ ಪೂರ್ತಿ ಚೆನ್ನೈ, ಹೈದರಾಬಾದ್ ಮತ್ತು ಕೇರಳಗಳಲ್ಲಿ ಓಡಾಡಿಕೊಂಡಿರುತ್ತಾನೆ. ಅದೇನು ನಿಗೂಢ ದಂಧೆಯೋ? ಅಪ್ಪನ ಕೊಳ್ಳೆಯನ್ನು ಯಾವ್ಯಾವ ವ್ಯವಹಾರಕ್ಕೆ ಹಾಕಿದ್ದಾನೋ? ಆದರೆ ಹೀಗೆ ಚೆನ್ನೈ, ಹೈದರಾಬಾದ್ ಮತ್ತು ಕೇರಳಗಳನ್ನು ಸುತ್ತಾಡಿಕೊಂಡಿರುವ ವಿಜಯೇಂದ್ರನಿಗೆ ಹರಿಪ್ರಿಯಾ ಎಂಬ ನಟಿಯ ಪರಿಚಯವಾಗಿದ್ದು ಚೆನ್ನೈನ ಹೋಟೆಲ್ ಒಂದರಲ್ಲಿ.

ಆ ಹೊತ್ತಿಗೆ ಯಾವುದೋ ತಮಿಳು ಚಿತ್ರವೊಂದರ ಶೂಟಿಂಗ್‌ಗೆಂದು ಚೆನ್ನೈನಲ್ಲಿದ್ದ ಹರಿಪ್ರಿಯಾ ಮೂಲತಃ ಬೆಂಗಳೂರಿನ ಮಲ್ಲೇಶ್ವರಂನ ಹುಡುಗಿ. ಓದಿದ್ದು ಅದೇ ಮಲ್ಲೇಶ್ವರದ ರಾಘವೇಂದ್ರ ಹೈಸ್ಕೂಲಲ್ಲಿ. ತೆಲುಗು ಬ್ರಾಹ್ಮಣರ ಹರಿಪ್ರಿಯಾಳ ತಂದೆಯ ಹೆಸರು ಚಂದ್ರಸೇನ. ಮಲ್ಲೇಶ್ವರದಲ್ಲೊಂದು ಬೇಕರಿ ಇಟ್ಟುಕೊಂಡಿದ್ದ. ಈಕೆಗೊಬ್ಬ ಅಣ್ಣನಿದ್ದಾನೆ. ಆತನದು ಮಾಡೆಲಿಂಗ್ ದಂಧೆ. ಚೆನ್ನೈನಲ್ಲಿ ಶುರುವಾದ ಹರಿಪ್ರಿಯ-ವಿಜಯೇಂದ್ರ ನಡುವಿನ ಪರಿಚಯ ಕ್ರಮೇಣ ವಿಜಯೇಂದ್ರನನ್ನು ಪದೇಪದೇ ಹರಿಪ್ರಿಯಾಳ ಮಲ್ಲೇಶ್ವರದ ಮನೆತನಕ ಬರುವಂತೆ ಮಾಡಿದೆ.

ಮೊದಲು ಮಸ್ಕಲ್ ಮಂಜು ನಿರ್ದೇಶಿಸಿದ 'ಮನಸುಗಳ ಮಾತು ಮಧುರ' ಎಂಬ ಚಿತ್ರದಲ್ಲಿ ಉದಯ ಟಿವಿಯ ಆಂಕರ್ ಮಾರೇನಹಳ್ಳಿ ಆನಂದನ ಜೊತೆ ನಟಿಸಿದ ಹರಿಪ್ರಿಯಾಗೆ ಅದಕ್ಕೆಂದು ಸಿಕ್ಕಿದ್ದು ಕೇವಲ ಒಂದು ಲಕ್ಷದ ಸಂಭಾವನೆ ಮಾತ್ರ. ಅನಂತರ 'ವಸಂತಕಾಲ' ಎಂಬ ಹೇಳಹೆಸರಿಲ್ಲದ ಚಿತ್ರವೊಂದಕ್ಕೆ ಹೀರೋಯಿನ್ ಆದಳು ಹರಿಪ್ರಿಯಾ. ಆ ಚಿತ್ರಕ್ಕೆ ಸಿಕ್ಕಿದ್ದೂ ಪುಡಿ ಸಂಭಾವನೆಯೇ. ಇದಾದನಂತರ ವಿಜಯ್ ಹೀರೋ ಆಗಿದ್ದ 'ಮುಖ್ಯಮಂತ್ರಿ ಐ ಲವ್ ಯೂ' ಎಂಬ ಚಿತ್ರಕ್ಕೆ ಹರಿಪ್ರಿಯಾ ನಾಯಕಿಯಾದಳಾದರೂ ದೇವೇಗೌಡರು ಕೇಸು ಹಾಕಿದ ಫಲವಾಗಿ ಆ ಚಿತ್ರ ಅರ್ಧಕ್ಕೇ ನಿಂತುಹೋಯಿತು. ನಿನ್ನೆಯಷ್ಟೇ ತೆರೆಕಂಡ 'ಈ ಸಂಭಾಷಣೆ' ಹರಿಪ್ರಿಯಾಳ ಲೇಟೆಸ್ಟ್ ಚಿತ್ರ. ರಾಜಶೇಖರ್ ನಿರ್ದೇಶಿಸಿದ ಈ ಚಿತ್ರಕ್ಕೆ ಪ್ರೊಡ್ಯೂಸರ್ ಪುತ್ರ ಸಂದೇಶನೇ ಹೀರೋ. ಎತ್ತಿಂದೆತ್ತ ಲೆಕ್ಕ ಹಾಕಿದರೂ ಆಕೆ ಈತನಕ ಸಂಭಾವನೆ ಅಂತ ಪಡೆದದ್ದು ಎಂಟು ಲಕ್ಷಕ್ಕಿಂತ ಹೆಚ್ಚಿಲ್ಲ.

ವಿಚಿತ್ರವೆಂದರೆ ಹರಿಪ್ರಿಯಾ ಪ್ರತಿಷ್ಠಿತ ಡಾಲರ್ಸ್ ಕಾಲೋನಿಯಲ್ಲೊಂದು ಬಂಗಲೆ ಖರೀದಿಸಿದ್ದಾಳೆ. ನಂ.44 ಮೊದಲನೇ ಮುಖ್ಯರಸ್ತೆ, ಮಾರುತಿ ಲೇಔಟ್, ಆರ್‌ಎಂವಿ ಎರಡನೇ ಸ್ಟೇಜ್, ಡಾಲರ್ಸ್ ಕಾಲೋನಿ, ಬೆಂಗಳೂರು - 560 094 ವಿಳಾಸದ ಈ ಬಂಗಲೆಯ ಸದ್ಯದ ಮಾರುಕಟ್ಟೆ ಬೆಲೆ ಕಮ್ಮಿಯೆಂದರೂ ಎರಡೂವರೆ ಕೋಟಿ!

ಹರಿಪ್ರಿಯಾಳ ತಂದೆ ಚಂದ್ರಸೇನನಾಗಲಿ, ತಾಯಿ ಲಲಿತಮ್ಮನಾಗಲಿ, ಅಣ್ಣ ಕೀರ್ತಿ ಎಂಬ ಮಾಡೆಲಿಂಗ್ ಕೋ ಆರ್ಡಿನೇಟರ್ ಆಗಲಿ ಕೋಟ್ಯಧಿಪತಿಗಳೇನಲ್ಲ. ಹೋಗಲಿ, ಈಕೆಯಾದರೂ ಕೋಟಿಗಟ್ಟಲೇ ದುಡಿದಿದ್ದಾಳಾ ಅಂತ ತಲೆಕೆಡಿಸಿಕೊಳ್ಳಲು ಹರಿಪ್ರಿಯಾ ಸೌಂದರ್ಯಳಂಥ ದೊಡ್ಡ ನಟಿಯೇನಲ್ಲ. ಇನ್ನೂ ಕಣ್ಣುಬಿಡುತ್ತಿರುವ ಪುಟ್ಟ ನಟಿ. ಬಿಡಿಸಿ ಹೇಳಬೇಕೆಂದರೆ ಪಿಯುಸಿ ಮಟ್ಟದ ಕಾಲೇಜು ಹುಡುಗಿ. ಇಂಥವಳಿಗೆ ಡಾಲರ್ಸ್ ಕಾಲೋನಿಯಲ್ಲಿ ಬಂಗಲೆ ಬಂತೆಂದರೆ ಅದು ಮುಖ್ಯಮಂತ್ರಿ ಮಗ ವಿಜಯೇಂದ್ರನ ಕೃಪೆ ಎಂದೇ ತರ್ಕಿಸಲಾಗುತ್ತದೆ.


ಹರಿಪ್ರಿಯಾ ಎಂಬ ರಗಳೆಯನ್ನು ವಿಜಯೇಂದ್ರ ಹಚ್ಚಿಕೊಂಡಿದ್ದಾದರೂ ಯಾಕೆ ಎಂಬುದು ಗಾಂಧಿನಗರದ ಪ್ರಶ್ನೆ. ಇದರ ಸತ್ಯಾಸತ್ಯತೆಯೇನೇ ಇರಲಿ ಇತ್ತೀಚೆಗೆ ವಿಜಯೇಂದ್ರ ಪದೇಪದೇ ಡಾಲರ್ಸ್ ಕಾಲೋನಿಯಲ್ಲಿ ಕಾಣಿಸಿಕೊಳ್ಳುತ್ತಿರುವುದಂತೂ ನಿಜ. ಅನತಿ ದೂರದಲ್ಲೇ ಯಡಿಯೂರಪ್ಪನವರ ಡಾಲರ್ಸ್ ಕಾಲೋನಿಯ ಬಂಗಲೆಯಿದ್ದರೂ ಹಿಂದೆಂದೂ ಈ ರೀತಿ ಡಾಲರ್ಸ್ ಕಾಲೋನಿಯಲ್ಲಿ ವಿಜಯೇಂದ್ರ ಓಡಾಡಿದ್ದಿಲ್ಲ.

ಗಾಂಧಿನಗರದ ಕೆಲವರಂತೂ ತಾವು ಮುಖ್ಯಮಂತ್ರಿ ಮಗ ವಿಜಯೇಂದ್ರನ ಕಾರನ್ನು ಪದೇಪದೇ ಡಾಲರ್ಸ್ ಕಾಲೋನಿಯ ಹರಿಪ್ರಿಯಾಳ ಬಂಗಲೆಯೆದುರು ನೋಡಿದ್ದೇವೆಂದು ಆಣೆಪ್ರಮಾಣ ಮಾಡುತ್ತಾರೆಂದರೆ; ಬೆಂಕಿಯಿಲ್ಲದೆ ಹೊಗೆ ಬರುತ್ತಾ? ಎಲ್ಲಿಯ ತೆಲುಗು ಬ್ರಾಹ್ಮಣ ಹುಡುಗಿ ಮತ್ತು ಎಲ್ಲಿಯ ಮುಖ್ಯಮಂತ್ರಿ ಮಗ? ವಿಜಯೇಂದ್ರ ಅಪ್ಪ ಯಡ್ಡಿಯ ರಾಜಕೀಯ ಉತ್ತರಾಧಿಕಾರಿ ಆಗಿಲ್ಲದಿರಬಹುದು, ಆದರೆ ಪ್ರವೃತ್ತಿಯಲ್ಲಂತೂ ಪಕ್ಕಾ ಉತ್ತರಾಧಿಕಾರಿ ಎಂದೆನಿಸಿಕೊಳ್ಳಲು ಹೊರಟಿರುವಂತಿದೆ. ಮುಖ್ಯಮಂತ್ರಿಯಾದ ಅಪ್ಪನ ಮಾನ ಕಾಯುವ ಮಾತು ಹಾಳಾಗಲಿ, ಕನಿಷ್ಠ ಬಿಜೆಪಿಯ ಆದರ್ಶ (?) ಪಾಲಿಸೋದರೂ ಸ್ಮಗಿರಬೇಡವೇ? ಅಧಿಕಾರದ ಪಿತ್ತ ಈ ಪಾಟ ನೆತ್ತಿಗೇರಿದರೆ ಹೇಗೆ?

ಹರಿಪ್ರಿಯಾಳಂಥ ಮುದ್ದು ನಟಿಗೇನು ಕಮ್ಮಿಯಾಗಿತ್ತು? ಏನಿದು ಹಣೆಬರಹ?

■ ರಾ. ಸೋಮನಾಥ್

ಮತ್ತೊಬ್ಬಳು ರಾಧಿಕಾ?



ಅದೇ ಬಣ್ಣ, ಅದೇ ಗಲ್ಲ, ಅದೇ ಮೂಗು ಮತ್ತು ಅದೇ ಎತ್ತರ. ಯಾವುದೋ ಆಂಗಲ್‌ನಲ್ಲಿ ಕೊಂಚ ರಮ್ಯಾಳಂತೆ ಕಾಣುತ್ತಾಳೆ ಎಂಬುದನ್ನು ಬಿಟ್ಟರೆ ಮಿಕ್ಕಂತೆ ಹರಿಪ್ರಿಯಾ ರಾಧಿಕಾಳ ತದ್ರೂಪಿ. ಪ್ರಾರಂಭದಲ್ಲಿ ರಾಧಿಕಾ ಹೇಗಿದ್ದಳೋ ಹಾಗೇ ಇದ್ದಾಳೆ. ತಮಿಳಿನಲ್ಲಿ ಕರಣ್ ಜೊತೆ ಚಿತ್ರವೊಂದರಲ್ಲಿ ನಟಿಸಿದ್ದೇ ಆಕೆಯ ಈತನಕದ ದೊಡ್ಡ ಸಾಧನೆ. ಸದ್ಯ 'ಚೆಲುವೆಯೇ ನಿನ್ನ ನೋಡಲು' ಎಂಬ ಚಿತ್ರದಲ್ಲಿ ಶಿವಣ್ಣನ ಎದುರು ಆಕೆ ಎರಡನೇ ಹೀರೋಯಿನ್. ಇದು ಬಿಟ್ಟರೆ ಮತ್ತೊಂದು ಚಿತ್ರವಿಲ್ಲ. ಆದರೆ ಇವತ್ತಲ್ಲ ನಾಳೆ ದೊಡ್ಡ ಮಟ್ಟಕ್ಕೇರುತ್ತಾಳೆ ಎಂಬ ವಿಶ್ವಾಸ ಬಹಳಷ್ಟು ಗಾಂಧಿನಗರದ ಜನರಲ್ಲಿ ಇದೆ. ಏಕೆಂದರೆ ಆಕೆಯ ಅಣ್ಣ ಕೀರ್ತಿ ಹೇಳಿಕೇಳಿ ಮಾಡೆಲಿಂಗ್ ಕೋ-ಆರ್ಡಿನೇಟರ್. ಚೆನ್ನೈ-ಹೈದರಾಬಾದ್‌ಗಳಲ್ಲಿ ಈತನಿಗೆ ದೊಡ್ಡ ಮಟ್ಟದ ಕಾಂಟ್ಯಾಕ್ಟ್‌ಗಳಿವೆ.

ಬೇರೆಲ್ಲ ಹೀರೋಯಿನ್‌ಗಳಿಗೆ ಹೋಲಿಸಿದರೆ ಹರಿಪ್ರಿಯಾಳ ಸ್ವಭಾವ ಕೂಡಾ ರಾಧಿಕಾಳಂತೆಯೇ. ಸಣ್ಣಪುಟ್ಟ ವಿಷಯಕ್ಕೆ ತಲೆಕೆಡಿಸಿಕೊಳ್ಳುವುದಿಲ್ಲ. ಕಾಂಟ್ಯಾಕ್ಟ್‌ಗಳು ಕೂಡಾ ದೊಡ್ಡ ಮಟ್ಟದವೇ. ಇವತ್ತಲ್ಲ ನಾಳೆ ಖಂಡಿತಾ ರಾಧಿಕಾ ಲೆವಲ್ಗೆ ಬರುತ್ತಾಳೆಂದು ಗಾಂಧಿನಗರದ ಮಾತಾಡಿಕೊಳ್ಳುತ್ತಿದೆ. ಜೊತೆಗೆ ಮುಖ್ಯಮಂತ್ರಿ ಯಡ್ಡಿಯೇ ಮಗ ವಿಜಯೇಂದ್ರನನ್ನು ಕರೆದು ಹರಿಪ್ರಿಯಾ ವಿಷಯಕ್ಕೆ ವಾಟಾಮುಗೋಚರ ಉಳಿದಿದ್ದಾರೆಂಬ ಮಾತೂ ಕೇಳಿಬರುತ್ತಿದೆ. ಇದರರ್ಥ ಹರಿಪ್ರಿಯಾ ಮತ್ತೊಬ್ಬಳು ರಾಧಿಕಾ ಎಂದು ತಾನೇ?



ಧಾರವಾಡ ಸ್ಕ್ರ್ಯಾಪ್ ಕಾಂಗ್ರೆಸ್‌ಗೆ ಕುನ್ನೂರ ಆಕ್ಸಿಜನ್!

ಕಣ್ಣಳತೆ ದೂರದಲ್ಲಿರುವ ಲೋಕಸಭಾ ಚುನಾವಣೆಗೆ ಧಾರವಾಡ ರಂಗೇರುತ್ತಿದೆ. ಕಳೆದ ಎರಡು ಅವಧಿಗಳಿಂದ ಸೋತು ಮೂಲೆ ಸೇರಿದ್ದ ಕಾಂಗ್ರೆಸ್ ಪಾಲಿಗೆ ಮಂಜುನಾಥ ಕುನ್ನೂರ ಆಕ್ಸಿಜನ್ ಆಗಿದ್ದರೆ, ಚೆಡ್ಡಿಗಳ ಪಾಳಯದಲ್ಲಿ ಉಸಿರುಗಟ್ಟುವ ವಾತಾವರಣ ನಿರ್ಮಾಣವಾಗಿದೆ. ಸ್ವಜಗಳಗಳಲ್ಲೇ ನಲುಗಿಹೋಗಿರುವ ಕಾಂಗ್ರೆಸ್ ಪಕ್ಷ ಕುನ್ನೂರ ಕಾರಣಕ್ಕೆ ಮತ್ತೆ ಚಾರ್ಮ್ ಪಡೆದುಕೊಂಡಿದ್ದರೆ ಚೆಡ್ಡಿಗಳು ಮಾತ್ರ ಪ್ರಹ್ಲಾದ್ ಜೋಷಿಯ ಸೋಲಿನ ಭಯದಲ್ಲಿ ಗುದುಮುರುಗಿ ಹಾಕುತ್ತಿವೆ.

ಕಳೆದ ಚುನಾವಣೆಯ ತನಕ ಧಾರವಾಡ ಕ್ಷೇತ್ರ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಹರಿದು ಹಂಚಿ ಹೋಗಿತ್ತು. ಆದರೆ ಈ ಸಾರಿ ಕ್ಷೇತ್ರ ಮರುವಿಂಗಡನೆಯ ಕಾರಣದಿಂದಾಗಿ ಧಾರವಾಡ ಸ್ವತಂತ್ರ ಕ್ಷೇತ್ರವಾಗಿ ಪರಿಣಮಿಸಿದೆ. ಕಳೆದ ಸಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ರೋಣದ ಬಿ.ಎಸ್. ಪಾಟೀಲನೆಂಬ ದೌಲತ್ತಿನ ಧಣಿಗೆ ಟಿಕೆಟು ನೀಡಿತ್ತು. ಪಾಟೀಲನ ಅಹಮ್ಮಿನಿಂದ ಬಚಾವಾಗುವ ಕಾರಣಕ್ಕೆ ಜನ ಒಲ್ಲದ ಮನಸ್ಸಿನಿಂದಲೇ ಬಿಜೆಪಿಯ ಪ್ರಹ್ಲಾದ್ ಜೋಷಿಗೆ ಕಣ್ಣುಮುಚ್ಚಿ ಓಟು ಕೊಟ್ಟಿದ್ದರು. ಕಾಂಗ್ರೆಸಿಗರ ವೈಫಲ್ಯಗಳೊಂದಿಗೆ ಕೇಸರಿ ಉನ್ಮಾದ ಸೇರಿಕೊಂಡು ಬಿಜೆಪಿಯ ಜೋಷಿಗೆ ಗೆಲುವು ಲಭ್ಯವಾಗಿತ್ತು.


ಆದರೆ ಈ ಸಾರಿ ಎಲ್ಲವೂ ಬದಲಾಗಿದೆ. ಈದ್ಗಾ ವಿಷಯ ಈಗ ಜನರಿಗೆ ಬೇಡವಾದ ವಿಚಾರವಾಗಿದೆ. ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಕಾಣುವುದೇ ಜನರ ಆದ್ಯತೆಯಾಗಿದೆ. ಇದು ಕೋಮು ರಾಜಕಾರಣವನ್ನು ನಂಬಿದವರ ಸೋಲಿಗೆ ಭೂಮಿಕೆಯಾಗಲಿದೆ. ಅದರೊಂದಿಗೆ ಮಂಜುನಾಥ ಕುನ್ನೂರ ಎಂಬ ಗೆಲ್ಲುವ ಕುದುರೆ ಈ ಸಾರಿ ಧಾರವಾಡ ಲೋಕಸಭಾ ಕ್ಷೇತ್ರವನ್ನು ಅನಾಯಾಸವಾಗಿ ಕಾಂಗ್ರೆಸ್ ಮಡಿಲಿಗೆ ಬೀಳಿಸುವುದು ಖಚಿತವೆಂಬ ಲೆಕ್ಕಾಚಾರಗಳು ಅವಳಿ ನಗರದ ರಾಜಕಾರಣ ಬಲ್ಲವರ ಬಾಯಲ್ಲಿ ತೇಲುತ್ತಿವೆ.

■■■

ಧಾರವಾಡ ಲೋಕಸಭಾ ಕ್ಷೇತ್ರ ಚುನಾವಣಾ ಫಲಿತಾಂಶ ಬರುವ ಮುಂಚೆಯೇ ಮಂಜುನಾಥ ಕುನ್ನೂರರನ್ನು ತಮ್ಮ ಜನಪ್ರತಿನಿಧಿಯಾಗಿಸಿಕೊಂಡಿರುವ ವಿಚಿತ್ರ ಭಾವನೆಗಳಲ್ಲಿ ತೇಲುತ್ತಿದೆ. ಜೋಷಿ ಸೃಷ್ಟಿಸಿರುವ ಈದ್ಗಾ ಗಲಾಟೆ ಈ ಸಾರಿ ಅವನನ್ನೇ ಬಲಿಪಡೆದುಕೊಳ್ಳುವುದು ನಿಶ್ಚಿತ. ಕೋಮುವಾದದಿಂದ ಅವಳಿ ನಗರವನ್ನು ಮುಕ್ತಗೊಳಿಸಲು ಪ್ರಜ್ಞಾವಂತ ಜನ ಈಗಾಗಲೇ ಕುನ್ನೂರ ಪರ ನಿಂತಿದ್ದಾರೆ. ಈ ಭಾಗದಲ್ಲಿ ಸ್ಕ್ರ್ಯಾಪ್ ಆಗಿದ್ದ ಕಾಂಗ್ರೆಸ್ಸಿಗೆ ಕುನ್ನೂರ ಆಕ್ಸಿಜನ್ ಆಗಿದ್ದಾರೆ ಎಂದು!

■■■


ಹಾಗೆ ನೋಡಿದರೆ ಕಳೆದ ಸಾರಿಯ ಲೋಕಸಭಾ ಚುನಾವಣೆಯಲ್ಲಿ ಧಾರವಾಡ ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿ ಖಾತೆ ತೆರೆದಿದ್ದು ಇದೇ ಮಂಜುನಾಥ ಕುನ್ನೂರ. ಹುಟ್ಟಾ ಕಾಂಗ್ರೆಸ್ಸಿಗರಾಗಿದ್ದ ಕುನ್ನೂರ ಎರಡು ಬಾರಿ ಸವಣೂರಿಗೆ ಕಾಂಗ್ರೆಸ್ ಪಕ್ಷದಿಂದ ಎಮ್ಮೆಲ್ಲೆಯಾಗಿದ್ದರು. ತಮ್ಮ ಶಾಸಕಗಿರಿಯ ದಿನದಲ್ಲೇ ಖುದ್ದಾಗಿ ಮುತುವರ್ಜಿ ವಹಿಸಿ ಶಿಗ್ಗಾವಿಯಲ್ಲಿ ಬಸ್ಸ್ಟ್ಯಾಂಡ್ ಕಟ್ಟಡದ ನಿರ್ಮಾಣ ಮಾಡಿದ್ದರು. ಅದರ ಉದ್ಘಾಟನೆಯ ಹೊತ್ತಿಗೆ ಎದುರಾದ ಚುನಾವಣೆಯಲ್ಲಿ ಕಾಂಗ್ರೆಸ್ಸಿಗರ ಕುತಂತ್ರದಿಂದಲೇ ಸೋತಿದ್ದರು. ಬಸ್ಸ್ಟ್ಯಾಂಡ್ ಕಟ್ಟಡದ ಉದ್ಘಾಟನಾ ಕಾರ್ಯಕ್ರಮಕ್ಕಾಗಿ ನಡೆದ ಜಟಾಪಟಿ ಕುನ್ನೂರರನ್ನು ಬಿಜೆಪಿ ಕಡೆ ಮುಖ ಮಾಡಲು ಪ್ರೇರೇಪಿಸಿತ್ತು. ಜಿದ್ದಿಗೆ ಬಿದ್ದು ಕಾಂಗ್ರೆಸ್‌ನಿಂದ ದೂರವಾಗಿ ಬಿಜೆಪಿ ಟಿಕೆಟ್ ಪಡೆದು ಎಂಪಿಯಾದ ಕುನ್ನೂರ ಕಾಂಗ್ರೆಸ್ಸಿಗರು ಮುಖ ಸುಟ್ಟುಕೊಂಡಂತೆ ಮಾಡಿ ತಮ್ಮ ಶಕ್ತಿ ಪ್ರದರ್ಶಿಸಿದ್ದರು.


ಪ್ರಹ್ಲಾದ್

ಆದರೆ ಬಿಜೆಪಿ ಸೇರಿ ಎಂಪಿಯಾದಾಗಲೂ ಕುನ್ನೂರ ಯಾವತ್ತೂ ಚೆಡ್ಡಿಗಳ ಪಡಸಾಲೆಯಲ್ಲಿ ಕಾಣಿಸಿಕೊಂಡವರಲ್ಲ. ಬದಲಾಗಿ ಅಲ್ಲಿದ್ದುಕೊಂಡೇ ಕೋಮುವಾದಿ ಸಿದ್ಧಾಂತದ ವಿರುದ್ಧ ಸಂಘರ್ಷ ಮಾಡಿಕೊಂಡು ಬಂದ ಚರಿತ್ರೆ ಕೂಡ ಕುನ್ನೂರರಿಗಿದೆ. ಆ ಕಾರಣಕ್ಕಾಗಿಯೇ ಚೆಡ್ಡಿ ಪಡೆಗಳ ವಿರೋಧವನ್ನೂ ಕಟ್ಟಿಕೊಂಡರು. ಇಂಥ ಕುನ್ನೂರ ಮತ್ತೆ ಕಾಂಗ್ರೆಸ್ ಪಡಸಾಲೆಗೆ ಕಾಲಿಡುವಂತೆ ಮಾಡಿದ್ದು ನ್ಯೂಕ್ಲಿಯರ್ ಡೀಲ್!



ಬಿ.ಎಸ್.ಪಾಟೀಲ್

ಕೇಂದ್ರದ ಯುಪಿಎ ಸರ್ಕಾರ ನ್ಯೂಕ್ಲಿಯರ್ ಡೀಲ್ ಗದ್ದಲದಲ್ಲಿ ಅಧಿಕಾರ ಕಳೆದುಕೊಳ್ಳುವ ಹಂತದಲ್ಲಿದ್ದಾಗ ಬಿಜೆಪಿ ಜಾರಿ ಮಾಡಿದ್ದ ವಿಪ್ ಉಲ್ಲಂಘಿಸಿ ಮಂಜುನಾಥ್ ಕುನ್ನೂರ ನ್ಯೂಕ್ಲಿಯರ್ ಡೀಲ್ ಪರ ಓಟ್ ಹಾಕಿ ಸುದ್ದಿಯಾಗಿದ್ದರು. ಚೆಡ್ಡಿ ಪಕ್ಷದ ಸಂಸದನಾಗಿದ್ದರೂ ಕುನ್ನೂರ ಅಲ್ಲಿನ ಗರ್ಭಗುಡಿ ಸಂಸ್ಕೃತಿಯ ಉಸಿರುಗಟ್ಟಿದ ವಾತಾವರಣದಿಂದ ಹೊರಬರಲು ಅವತ್ತು ಕಾಂಗ್ರೆಸ್ ಪರ ಮತಚಲಾಯಿಸಿ ತಮ್ಮ ಪೂರ್ವ ಪಕ್ಷಕ್ಕೆ ಹಿಂತಿರುಗುವ ಮುನ್ಸೂಚನೆಯನ್ನು ನೀಡಿದ್ದರು. ಇದಕ್ಕಾಗಿ ಧಾರವಾಡ ಲೋಕಸಭಾ ಕ್ಷೇತ್ರದ ಟಿಕೆಟ್ ಗ್ಯಾರಂಟಿ ಮಾಡಿಕೊಂಡು ಬಿಜೆಪಿಯಿಂದ ಕಳಚಿಕೊಂಡು ಸಂಪೂರ್ಣವಾಗಿ ಕಾಂಗ್ರೆಸ್ ಮಡಿಲಿಗೆ ಬಿದ್ದುಬಿಟ್ಟರು. ಅವಾಗಿನಿಂದ ಪ್ರಹ್ಲಾದ್ ಜೋಷಿಗೆ ಹಿಡಿದಿರುವ 'ಚಳಿ ಜ್ವರ' ಇನ್ನೂ ಕಡಿಮೆಯಾಗಿಲ್ಲ.


ಹೊನ್ನಳ್ಳಿ

ಅಷ್ಟರಮಟ್ಟಿಗೆ ಕುನ್ನೂರ ಯಶಸ್ವಿ ರಾಜಕಾರಣಿ. ಅಲ್ಪ ಮುಂಗೋಪ ಕುನ್ನೂರರನ್ನು ಆಗಾಗ ಕಸಿವಿಸಿಗೆ ನೂಕಿದ್ದರೂ ಅದನ್ನು ಸುಧಾರಿಸಿಕೊಳ್ಳುವ ಛಾತಿ ಅವರಲ್ಲಿದೆ ಎನ್ನುವುದು ಬೇರೆ ಮಾತು. ಎಲ್ಲ ರಾಜಕಾರಣಿಗಳ ಬೆನ್ನಿಗಿರುವಂತೆ ಕುನ್ನೂರರ ಬೆನ್ನಿಗೂ ಭ್ರಷ್ಟಾಚಾರದ ಆರೋಪಗಳಿವೆಯಾದರೂ ಅದರ ಕುರಿತು ಯಾರೂ ತಲೆಕೆಡಿಸಿಕೊಂಡಿಲ್ಲ. ಯಾಕೆಂದರೆ ಸಾಮಾನ್ಯ ಜನರಿಗೂ ಕುನ್ನೂರ ಯಾವುದೇ ಸಂದರ್ಭದಲ್ಲಿ ಕೈಗೆಟುಕುವ ನಾಯಕ. ಜನರ ಮನೆ ಜಗಳಗಳನ್ನು ಬಗೆಹರಿಸುವುದರಿಂದ ಹಿಡಿದು ಊರಿನ ಅಭಿವೃದ್ಧಿ ಕೆಲಸದ ತನಕ ಕುನ್ನೂರ ಕಾಳಜಿ ವಹಿಸುವರು. ಹೀಗಾಗಿ ವಿರೋಧಿಗಳು ಏನೇ ಬಾಯಿ ಬಡಿದುಕೊಂಡರೂ ಕ್ಷೇತ್ರದ ಜನ ಮಾತ್ರ ಇವರನ್ನು ಎರಡೆರಡು ಬಾರಿ ಗೆಲ್ಲಿಸಿದ್ದರು.


ಹೆಚ್.ಕೆ.ಪಾಟೀಲ್


ಅನಿಲ್‌ಕುಮಾರ್

ಈಗ ಡಿಲಿಮಿಟೇಷನ್ ಕಾರಣಕ್ಕೆ ಹೊಸದಾಗಿ ರಚನೆಗೊಂಡಿರುವ ಧಾರವಾಡ ಕ್ಷೇತ್ರಕ್ಕೆ ಮಂಜುನಾಥ ಕುನ್ನೂರರ ತವರು ನೆಲ ಸವಣೂರು-ಶಿಗ್ಗಾವಿಗಳು ಸೇರ್ಪಡೆಗೊಂಡಿವೆ. ಇಲ್ಲಿ ಮುಸ್ಲಿಂ ಮತಗಳೇ ನಿರ್ಣಾಯಕ. ಈ ಭಾಗದ ಮುಸ್ಲಿಮರು ಕುನ್ನೂರರನ್ನು ಮನೆ ಮಗನೆಂಬಂತೆ ಆಲಂಗಿಸಿಕೊಂಡಿದ್ದಾರೆ. ಅಲ್ಲಿಗೆ ಇಲ್ಲಿನ ಮೆಜಾರಿಟಿ ಓಟುಗಳು ಕುನ್ನೂರರತ್ತ ವಾಲುವುದು ಖಚಿತ. ಅದರೊಂದಿಗೆ ಪಂಚಮಸಾಲಿ ಸಮುದಾಯ ಕೂಡ ಕಣ್ಣುಮುಚ್ಚಿ ಕುನ್ನೂರರೊಂದಿಗೆ ನಿಂತುಕೊಳ್ಳುತ್ತದೆ. ಹಾಗೆಯೇ ಧಾರವಾಡ ಕ್ಷೇತ್ರದ ಬಹುಸಂಖ್ಯಾತರಾಗಿರುವ ಲಿಂಗಾಯತರು ಜಾತಿಯ ಕಾರಣಕ್ಕೆ ಕುನ್ನೂರರನ್ನು ಬಿಟ್ಟುಕೊಡುವುದಿಲ್ಲ. ಇನ್ನು ಉಳಿದವರು ಕುರುಬರು. ಹಿಂದುಳಿದ ವರ್ಗಗಳಲ್ಲಿ ಅಲ್ಪ ಏರುಪೇರಾದರೂ ಬಹುಸಂಖ್ಯೆಯ ಮತಗಳು ಕುನ್ನೂರರತ್ತ ವಾಲುತ್ತವೆ. ಹಾಗೆಯೇ ವಿಭಜಿತ ಧಾರವಾಡ ಜಿಲ್ಲೆಯ ಬಹುತೇಕ ಕಾಂಗ್ರೆಸ್ಸಿಗರೆಲ್ಲ ತಮ್ಮತಮ್ಮಲ್ಲೇ ಬಡಿದಾಡಿಕೊಂಡು ಈಗ ಮೂಲೆ ಸೇರಿದ್ದಾರೆ. ಮೊನ್ನೆಯ ಅಸೆಂಬ್ಲಿ ಚುನಾವಣೆಯಲ್ಲಿ ಕಲಘಟಗಿ ಕ್ಷೇತ್ರ ಸಂತೋಷ್ ಲಾಡ್ ಕಾರಣಕ್ಕೆ ಕಾಂಗ್ರೆಸ್ ತೆಕ್ಕೆಗೆ ಬಿದ್ದಿರುವುದೂ ಕುನ್ನೂರರರಿಗೆ ನೆರವಾಗಲಿದೆ.

ಎಚ್ಕೆ ಪಾಟೀಲರು ವಿಧಾನಸಭೆ ಮತ್ತು ವಿಧಾನ

ಜಗಳ ಬಿಟ್ಟು ಒಂದಾಗಿ...

ರಾಜ್ಯದ ಕೆಪಿಸಿಸಿಯಲ್ಲಿರುವಂತೆ ಧಾರವಾ[ಡ] ಜಿಲ್ಲೆಯ ಕಾಂಗ್ರೆಸ್ಸಿನಲ್ಲೂ ಒಳಜಗಳಗಳು ಬಹ[ಳ] ಹಿಂದಿನಿಂದಲೂ ಮನೆಮಾಡಿವೆ. ಕಳೆದ ಅಸೆಂ[ಬ್ಲಿ] ಚುನಾವಣೆಯಲ್ಲಿ ಎಸ್.ಆರ್. ಮೋರೆ, ಜಬ್ಬಾ[ರ್] ಖಾನ್ ಹೊನ್ನಳ್ಳಿ, ವಿನಯ್ ಕುಲಕರ್ಣಿ, ಅನಿ[ಲ್] ಕುಮಾರ್ ಪಾಟೀಲ, ಎಚ್ಕೆ ಪಾಟೀಲರು ತಮ್[ಮ] ತಮ್ಮ ಮೂಗಿನ ನೇರದ ಲೆಕ್ಕಾಚಾರ ಹಿಡಿದುಕೊಂಡು ಫೀಲ್ಡಿಗಿಳಿದಿದ್ದರು. ಅದರ ಪರಿಣಾಮ ಎಲೆಕ್ಷನ್‌ನಲ್ಲಿ ಸಾಮೂಹಿಕವಾಗಿ ಎಲ್ಲರೂ ಧೂಳೀಪಟವಾಗಬೇಕಾಯಿತು. ಈಗ ಮಂಜುನಾಥ ಕುನ್ನೂರ ಕಾರಣಕ್ಕೆ ಕಾಂಗ್ರೆಸ್ ಪಾಲಿಗೆ ಮತ್ತೊಮ್ಮೆ ಅವಕಾಶ ಒದಗಿ ಬಂದಿದೆ. ತಮ್ಮ ಒಳಜಗಳಗಳಿಗೆ ಶಾಶ್ವತವಾದ ತಿಲಾಂಜಲಿಯಿಟ್ಟು ಕಾಂಗ್ರೆಸ್ಸಿಗರೆಲ್ಲ ಕುನ್ನೂರ ಪರವಾಗಿ ಅಖಾಡಕ್ಕಿಳಿದರೆ ಬಿಜೆಪಿ ಇನ್ಯಾವತ್ತೂ ಈ ಕಡೆ ಇಣುಕುವ ಸಾಧ್ಯತೆಯೇ ಇಲ್ಲ. ಅಂಥ ಶಕ್ತಿ ಈ ಎಲ್ಲ ಕಾಂಗ್ರೆಸ್ಸಿಗರಲ್ಲಿದೆ. ಕೋಮುವಾದಿ ರಾಜಕಾರಣ ಹಂತಹಂತವಾಗಿ ರಾಜ್ಯವನ್ನು ಹರಿದು ಮುಕ್ಕುತ್ತಿದೆ. ಭಯೋತ್ಪಾದನೆಯ ಕಾರಣ ಕೊಟ್ಟು ಅಣ್ಣತಮ್ಮಂದಿರನ್ನು ದೂರಮಾಡಿ ನಾಗರಿಕ ಕಲಹ ಸೃಷ್ಟಿಸಲು ಭಾರತೀಯ ಜನತಾ ಪಕ್ಷ ಬಹುದೊಡ್ಡ ನೀಲನಕ್ಷೆ ತಯಾರಿಸಿದೆ. ಈ ನೆಲದ ಸೌಹಾರ್ದ ಪರಂಪರೆಯಲ್ಲಿ ಎಳ್ಳಷ್ಟೂ ಕಾಳಜಿ ಈ ಭಾಗದ ಕಾಂಗ್ರೆಸ್ಸಿಗರಲ್ಲಿದ್ದರೆ ತಮ್ಮತಮ್ಮ ಒಳಜಗಳ ಮರೆತು ಒಂದಾಗುವುದೇ ಸದ್ಯದ ತುರ್ತು ಕೆಲಸ.

ಪರಿಷತ್‌ಗಳ ಎರಡೂ ಚುನಾವಣೆಯ[ಲ್ಲಿ] ಸೋತಿದ್ದು ಆ ಭಾಗದ ಕಾಂಗ್ರೆಸ್ ಪಕ್ಷವನ್[ನು] ಗರಬಡಿಸಿದಂತಾಗಿತ್ತು. ಜೊತೆಗೆ ಕಾಂಗ್ರೆಸ್‌ನ[ಲ್ಲಿ] ಪ್ರಬಲ ಲಿಂಗಾಯತ ಲೀಡರ್‌ಗಳ ಅಭಾವ ತುಂಬಾ ದೊಡ್ಡದಿತ್ತು. ಈ ಎಲ್ಲ ಕಾರಣಗಳಿಂದಾಗಿ ಕಾಂಗ್ರೆಸ್ ಪಕ್ಷ ಕಳೆದ ದಶಕದಿಂದೀಚೆಗೆ ಇಲ್ಲಿ ಸ್ಕ್ರ್ಯಾಪ್ ಹಂತ ತಲುಪಿತ್ತು.

ಆದರೆ ಯಾವಾಗ ಮಂಜುನಾಥ ಕುನ್ನೂ[ರ] ಕ್ಷೇತ್ರ ಪ್ರವೇಶ ಮಾಡಿದರೋ ಸೋತು ಮನೆಸೇರಿದ್ದ ಎಲ್ಲ ಕಾಂಗ್ರೆಸಿಗರಿಗೆ ಜೀವದಾ[ನ] ಸಿಕ್ಕಂತಾಗಿದೆ. ವಿನಯ್ ಕುಲಕರ್ಣಿ, ಅನಿಲ್ ಕುಮಾರ್ ಪಾಟೀಲ್, ಸಂತೋಷ್ ಲಾಡ್ ಗಳೆಲ್ಲ ನಿದ್ದೆಗೆಟ್ಟು ಕುನ್ನೂರರೊಂದಿಗೆ ಓಡಾಡುತ್ತಿದ್ದಾರೆ. ಮೇಲುನೋಟಕ್ಕೆ ಟಿಕೆಟ್ ಇನ್ನೂ ಘೋಷಣೆಯಾಗಿರದಿದ್ದರೂ ಕಾಂಗ್ರೆಸ್ಸಿಗರೆಲ್ಲ ಕುನ್ನೂರರನ್ನು ಒಪ್ಪಿಕೊಂಡು ಬಿಟ್ಟಿದ್ದಾರೆ. 'ಯಡ್ಡಿ' ಕಾರಣಕ್ಕೆ ಈ ಭಾಗದ ಲಿಂಗಾಯತರೆಲ್ಲ ಸ್ವಲ್ಪ ಗಲಿಬಲಿಗೊಂಡಿದ್ದರೂ ಕುನ್ನೂರರನ್ನು ತಮ್ಮವನೆಂದು ಸಾರುತ್ತಿದ್ದಾರೆ.


ಜನರಿಗೆ ಬೇಡವಾದ ತ್ರಿಶೂಲ, ಈದ್ಗಾ ವಿವಾದದಂತಹ ವಿಚಾರಗಳಲ್ಲೇ ಮಿಂದೇಳುತ್ತಿ[ರುವ] ಬಿಜೆಪಿಯ ಘೋಷಿತ ಅಭ್ಯರ್ಥಿ ಪ್ರಹ್ಲಾದ್ ಜೋಷಿ ತಾನು ಮಾಡಿದ ಅನಾಚಾರಗಳಿಗೆ ಕುನ್ನೂರ ಮೂಲ[ಕ] ತಕ್ಕ ಶಿಕ್ಷೆ ಅನುಭವಿಸಲಿದ್ದಾನೆ. ಕೇಸರಿ ಉನ್ಮಾದವನ್ನು ಜನರ ನಡುವೆ ಬಿತ್ತಿ ಅವಳಿ ನಗರಗಳು ಮೂಲಭೂ[ತ] ಸೌಕರ್ಯಗಳಿಂದ ದೂರವಿರುವಂತೆ ಮಾಡಿರುವ ಜೋಷಿ ಈ ಸಾರಿ ಕುನ್ನೂರ ಹೊಡೆತಕ್ಕೆ "ರಾಮಜಪ" ಮರೆಯುವುದರಲ್ಲಿ ಎರಡು ಮಾತಿಲ್ಲ.

ಒಟ್ಟಾರೆಯಾಗಿ ಧಾರವಾಡ ಲೋಕಸಭಾ ಕ್ಷೇತ್ರ ಚುನಾವಣಾ ಫಲಿತಾಂಶ ಬರುವ ಮುಂಚೆಯೇ ಮಂಜುನಾಥ ಕುನ್ನೂರರನ್ನು ತಮ್ಮ ಜನಪ್ರತಿನಿಧಿಯಾಗಿಸಿಕೊಂಡಿರುವ ವಿಚಿತ್ರ ಭಾವನೆಗಳಲ್ಲಿ ತೇಲುತ್ತಿದೆ. ಜೋಷಿ ಸೃಷ್ಟಿಸಿರುವ ಈದ್ಗಾ ಗಲಾಟೆ ಈ ಸಾರಿ ಅವನನ್ನೇ ಬಲಿಪಡೆದುಕೊಳ್ಳುವುದು ನಿಶ್ಚಿತ. ಕೋಮುವಾದದಿಂದ ಅವಳಿ ನಗರವನ್ನು ಮುಕ್ತಗೊಳಿಸಲು ಪ್ರಜ್ಞಾವಂತ ಜನ ಈಗಾಗಲೇ ಕುನ್ನೂರ ಪರ ನಿಂತಿದ್ದಾರೆ.

ಅದಕ್ಕೆ ಅಂದದ್ದು ಈ ಭಾಗದಲ್ಲಿ ಸ್ಕ್ರ್ಯಾಪ್ ಆಗಿ[ದ್ದ] ಕಾಂಗ್ರೆಸ್ಸಿಗೆ ಕುನ್ನೂರ ಆಕ್ಸಿಜನ್ ಆಗಿದ್ದಾರೆ ಎಂದು!

■ ಹುರುಳಿಕುಪ್ಪಿ ವಿನಯ

ಗುಮ್ಮನಂತಿರುವ ಹೊರಟ್ಟಿ, ಹುಚ್ಚರಾಗಿರುವ ಬೊಮ್ಮಾಯಿ, ಸಂಕೇಶ್ವರ್


ಬೊಮ್ಮಾಯಿ


ಸಂಕೇಶ್ವರ



ಧಾರವಾಡದ ರಾಜಕಾರಣದಲ್ಲಿ ಜೆಡಿಎಸ್‌ನ ಬಸವರಾಜ ಹೊರಟ್ಟಿ ಸದ್ಯಕ್ಕೆ ಗುಮ್ಮನಂತಿದ್ದರೆ, ಚೆಡ್ಡಿ ಪಾಳಯದ ಬಸು ಬೊಮ್ಮಾಯಿ ಮತ್ತು ವಿಜಯ ಸಂಕೇಶ್ವರ್‌ಗಳು ಅರೆಹುಚ್ಚರಂತಾಗಿಬಿಟ್ಟಿದ್ದಾರೆ. ಒಂದೆಡೆ ಹೊರಟ್ಟಿ ಪಾರ್ಲಿಮೆಂಟ್ ಚುನಾವಣೆಗೆ ಸ್ಪರ್ಧಿಸುತ್ತಾರೆನ್ನುವ ಗುಸುಗುಸು ಸುದ್ದಿ ಅವಳಿ ನಗರದಲ್ಲಿ ಹಬ್ಬಿದ್ದರೆ, ಬೊಮ್ಮಾಯಿ ಸಂಕೇಶ್ವರ್‌ಗಳಿಬ್ಬರೂ ಹೆಂಡ ಕುಡಿದ ಮಂಗಗಳಂತೆ ಅರಚಾಡುತ್ತಿದ್ದಾರೆ.

ಬಿಜೆಪಿಗರ ಅಟ್ಟಹಾಸ ಮುರಿಯಲು ಜೆಡಿಎಸ್ ಒಂದೋ ಕಾಂಗ್ರೆಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕು, ಇಲ್ಲಾ ಎಲೆಕ್ಷನ್ ಎದುರಿಸಬೇಕು. ಎರಡರಲ್ಲಿ ಹೊರಟ್ಟಿ ಯಾವುದನ್ನು ಆರಿಸಿಕೊಳ್ಳುತ್ತಾರೋ ಕಾದುನೋಡಬೇಕಷ್ಟೆ.

ಆದರೆ ಸಂಕೇಶ್ವರ್ ಬಿಜೆಪಿ ಎಂಎಲ್‌ಎ ಆದಾಗಿನಿಂದ ಪ್ರಹ್ಲಾದ್ ಜೋಷಿ ಗೆಲ್ಲುವ ಹಗಲುಗನಸು ಕಾಣುತ್ತಿದ್ದರೆ, ಬೊಮ್ಮಾಯಿ ಕಂಡಕಂಡ ಸರ್ಕಾರಿ ಕಾರ್ಯಕ್ರಮಗಳಲ್ಲಿ "ಈದ್ಗಾದಲ್ಲಿ ರಾಷ್ಟ್ರಧ್ವಜ ಹಾರಲು ನಾನೇ ಕಾರಣ" ಎಂಬ ಹುಚ್ಚು ಮಾತುಗಳನ್ನು ಆಡುತ್ತಿದ್ದಾರೆ. ಈ ಸಾರಿ ಜೋಷಿಯನ್ನು ಗೆಲ್ಲಿಸಬೇಕೆಂದು ಬೊಮ್ಮಾಯಿ ಹೊರಟಿರುವುದು ಅನಂತಕುಮಾರ್ ಒಲ್ಮೆಗಾಗಿ. ಅದಕ್ಕೆ ಹಾವೇರಿ ಜಿಲ್ಲೆಯಿಂದ ಆತನನ್ನು ಯಡ್ಡಿ ಎತ್ತಂಗಡಿ ಮಾಡಿರುವುದೇ ನೇರ ಕಾರಣ. ಜೋಷಿಯನ್ನು ಗೆಲ್ಲಿಸಿ ಯಡ್ಡಿ ಟೀಮಿಗೆ ಪಂಚ್ ಕೊಟ್ಟು ತನ್ನ ಶಕ್ತಿ ತೋರಿಸಲು ಬಸು ಬೊಮ್ಮಾಯಿ ಏನೇನೋ ಸರ್ಕಸ್ ಮಾಡಲು ಹೊರಟಿರುವುದು ಹಾಸ್ಯಾಸ್ಪದವಾಗಿದೆ.

ಬಸುವಿನ ಈ ಚೆಡ್ಡಿ ಆಟಗಳನ್ನು ಕಂಡು ಆತನ ತಂದೆ ಎಸ್.ಆರ್. ಬೊಮ್ಮಾಯಿ ತಮ್ಮ ಗೋರಿಯಲ್ಲೇ ಪರಿತಪಿಸುತ್ತಿರಬೇಕು! ■

ಪಾಂಡವಪುರ ಸಕ್ಕರೆ ಕಾರ್ಖಾನೆಯ ಗೋಳು

ದರೋಡೆಗಿಳಿದ ಕೊಠಾರಿ!

ಪಾಂಡವಪುರದ ಸಹಕಾರಿ ಸಕ್ಕರೆ ಕಾರ್ಖಾನೆ (PSSK) ಚಿನ್ನದ ಮೊಟ್ಟೆ ಇಡುವಂತಹ ಕಾರ್ಖಾನೆಯಾಗಿದ್ದ ಕಾಲವೊಂದಿತ್ತು. ಲಕ್ಷಾಂತರ ಕಬ್ಬು ಬೆಳೆಗಾರರ, ನೂರಾರು ಕಾರ್ಮಿಕರ ಮತ್ತು ನೂರಾರು ಷೇರುದಾರರ ಬಾಳಿಗೆ ಆಸರೆಯಾಗಿತ್ತು ಯಾವತ್ತು ಅದು ರಿಲಯನ್ಸ್‌ನ ಧೀರೂಬಾಯಿ ಅಂಬಾನಿಯ ಖಾಸಾ ಅಳಿಯ ಹರೀಶ್ ಕೊಠಾರಿಯ ಮಡಿಲಿಗೆ ಬಿತ್ತೋ ಅಂದೇ ಅದರ ಅವನತಿಯೂ ಆರಂಭವಾಗಿ ಈ ಹೊತ್ತು ದಿವಾಳಿ ಅಂಚಿಗೆ ಬಂದು ನಿಂತು ಅದನ್ನೇ ನಂಬಿಕೊಂಡಿದ್ದ ರೈತರ, ಕಾರ್ಮಿಕರ ಭವಿಷ್ಯವನ್ನು ಕತ್ತಲುಮಯ ಮಾಡಿಬಿಟ್ಟಿದೆ.

ಕರ್ನಾಟಕದ ಯಾವ ಸಕ್ಕರೆ ಕಾರ್ಖಾನೆಯೂ ಬಹುಶಃ ಈ PSSK ಯಷ್ಟು ಸಮೃದ್ಧವಾಗಿರಲಿಲ್ಲವೋ? ಶ್ರೀರಂಗಪಟ್ಟಣ, ಪಾಂಡವಪುರ ಹಾಗೂ ಕೆ.ಆರ್.ಪೇಟೆಯ ಭಾಗದಲ್ಲಿ ರೈತರು ಪ್ರತಿವರ್ಷ ಸುಮಾರು 10 ಲಕ್ಷ ಟನ್ ಕಬ್ಬು ಬೆಳೆಯುತ್ತಾರೆ. ಇಲ್ಲಿ ಹರಿಯುವ ಕಾವೇರಿ ನದಿಯ ಕಾರಣದಿಂದಾಗಿ ಹಾಗೂ ಈ ಭಾಗದಲ್ಲಿರುವ ಜಮೀನಿನ ಫಲವತ್ತತೆಯಿಂದಾಗಿ PSSK ಅರೆಯಲಾಗದಷ್ಟು ದೊಡ್ಡ ಪ್ರಮಾಣದಲ್ಲಿ ರೈತರು ಕಬ್ಬು ಬೆಳೆಯುತ್ತಿದ್ದರು. ಹಾಗಾಗಿಯೇ ಹೆಚ್ಚುವರಿ ಕಬ್ಬು ಅನಿವಾರ್ಯವಾಗಿ ನಂಜನಗೂಡು ಮತ್ತು ಕೆ.ಆರ್.ನಗರಗಳ ಕಾರ್ಖಾನೆಗಳಿಗೆ ಸರಬರೈಕೆಯಾಗುತ್ತಿತ್ತು.

ಶ್ರೀರಂಗಪಟ್ಟಣದ ಎಂಎಲ್‌ಎ ಆಗಿದ್ದ ಜಿ.ವೈ. ಕೆಂಗೌಡರ ದೂರದೃಷ್ಟಿಯಿಂದ ಸಣ್ಣಪುಟ್ಟ ಷೇರುದಾರರೆಲ್ಲ ಸೇರಿ PSSKಗೆ ಜನ್ಮ ಕೊಟ್ಟಿದ್ದರು. ಅವರ ಆಶಯದಂತೆ ಈ ಸಹಕಾರಿ ಸಕ್ಕರೆ ಕಾರ್ಖಾನೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಾ ನಿರೀಕ್ಷೆಗೂ ಮೀರಿ ಲಾಭ ಗಳಿಸುತ್ತಿತ್ತು. ಆದರೆ ಸಹಕಾರಿ ಕ್ಷೇತ್ರದಲ್ಲಿನ ಕೆಟ್ಟ ರಾಜಕೀಯ ಮತ್ತು ರೈತಸಂಘದ ಅಧ್ಯಕ್ಷ ಕೆ.ಎಸ್. ಪುಟ್ಟಣ್ಣಯ್ಯ ಮತ್ತು ಕೆ.ಎಸ್.ನಂಜುಂಡೇಗೌಡನ ಭ್ರಷ್ಟತನದಿಂದಾಗಿ ಖಾಯಿಲೆ ಅವನತಿಯ ಹಾದಿ ಹಿಡಿದು ಮುಚ್ಚೇ ಹೋಯಿತು. ನಂತರ 1996ರಲ್ಲಿ ರಾಜ್ಯ ಸರ್ಕಾರ ಸಕ್ಕರೆ ಉದ್ಯಮದ ಅನುಭವವೇ ಇಲ್ಲದ ಕೊಠಾರಿ ಷುಗರ್ಸ್ ಮತ್ತು ಕೆಮಿಕಲ್ ಕಂಪನಿಗೆ 7 ವರ್ಷಗಳಿಗೆ ಗುತ್ತಿಗೆ ಕೊಟ್ಟ ಪರಿಣಾಮ ಇಂದು ಈ ಕಾರ್ಖಾನೆಗೆ ಶಾಶ್ವತವಾಗಿ ಬೀಗ ಬೀಳುವ ಅಪಾಯ ಎದುರಾಗಿದೆ. ಜೊತೆಗೆ, PSSKಯ ಬೆಲೆಬಾಳುವ ಭಾರೀ ಯಂತ್ರಗಳನ್ನು ರಾತ್ರೋರಾತ್ರಿ ತಮಿಳುನಾಡಿಗೆ ಕದ್ದೊಯ್ಯುವ ಮೂಲಕ ಕೊಠಾರಿ ಷುಗರ್ಸ್ ರೈತರಿಗೆ, ಷೇರುದಾರರಿಗೆ ಮುಂಡಾಮೋಚಿದೆ. ದುರಂತವೆಂದರೆ ಶಾಸಕರಾದ ರಮೇಶ್‌ಬಾಬು ಮತ್ತು ಸಿ.ಎಸ್. ಪುಟ್ಟರಾಜು ಇಬ್ಬರೂ ಅದೆಷ್ಟು ಅಮೇಧ್ಯ ತಿಂದಿದ್ದಾರೋ ಗೊತ್ತಿಲ್ಲ, ಕೋಠಾರಿ ಕಂಪೆನಿ ಕ್ಷೌರಕ್ಕೆ ಬೆಂಗಾವಲಾಗಿ ನಿಂತಿದ್ದಾರೆ.

ಲೀಸ್‌ಗೆ ಹಾಕುವ ಬದಲು ಸರ್ಕಾರ ಒಂದಷ್ಟು ಹಣಕಾಸಿನ ಸಹಾಯವನ್ನು ಮಾಡಿದ್ದರೆ ಪಾಂಡವಪುರದ ಈ ಸಕ್ಕರೆ ಕಾರ್ಖಾನೆಗೆ ಈ ದುರ್ಗತಿ ಬರುತ್ತಿರಲಿಲ್ಲ; ಉತ್ತಮ ಹಣಕಾಸು ಮಂತ್ರಿ ಎಂದು ಬೀಗುವ ಮಾಜಿ ಡಿಸಿಎಂ ಸಿದ್ದರಾಮಯ್ಯ ಕನಿಷ್ಠ ಕಾಳಜಿ ತೋರಿದ್ದರೂ ಅದು ಪುನಶ್ಚೇತನಗೊಳ್ಳುತ್ತಿತ್ತು, ಮಂಡ್ಯ ಜಿಲ್ಲೆಯವರೇ ಆದ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಬೆಂಗಳೂರು ನಗರವನ್ನು ಸಿಂಗಪೂರ್ ಮಾಡುವುದಕ್ಕೆ ತೋರಿದ ಆಸಕ್ತಿಯಲ್ಲಿ ಒಂದು ಭಾಗವನ್ನು ಪಾಂಡವಪುರ ಸಕ್ಕರೆ ಕಾರ್ಖಾನೆಗೆ ತೋರಿದ್ದರೂ ಅದು ಚೇತರಿಕೆ ಕಾಣುತ್ತಿತ್ತು, ನಂತರ ಬಂದ ಧರ್ಮಸಿಂಗ್, ಮಣ್ಣಿನ ಮೊಮ್ಮಗ ಕುಮಾರಸ್ವಾಮಿಯೂ ಇತ್ತ ಕಣ್ಣು ಹಾಯಿಸಲಿಲ್ಲ, ಇನ್ನು ಯಡಿಯೂರಪ್ಪನಂತೂ ಖಾಸಗೀ ಕಾರ್ಖಾನೆಗಳಿಗೆ ಹಣದ ಹೊಳೆ ಹರಿಸಿದನೇ ಹೊರತು ಪಾಂಡವಪುರ ಸಕ್ಕರೆ ಕಾರ್ಖಾನೆಗೆ ನೈಯಾಪೈಸೆ ನೀಡಲಿಲ್ಲ.

ಗಂಧ ಗಾಳಿ ಗೊತ್ತಿಲ್ಲ!

PSSKಯನ್ನು ಗುತ್ತಿಗೆ ಪಡೆದಿರುವ ಈ ಕೊಠಾರಿ ಕಂಪನಿ ರಿಲಯನ್ಸ್‌ನ ಧೀರೂಬಾಯಿ ಅಂಬಾನಿಯ ಖಾಸಾ ಅಳಿಯ ಹರೀಶ್ ಕೊಠಾರಿಯದು. ಈತನಿಗೆ ಕೆಮಿಕಲ್ ಸಪ್ಲೈ ಮಾಡಿ ಗೊತ್ತೆ ವಿನಃ ಸಕ್ಕರೆ ಉದ್ಯಮದ ಗಂಧಗಾಳಿ ಗೊತ್ತಿಲ್ಲ. ಅಂತವನನ್ನು ಹಿಡಿದು ಕಾರ್ಖಾನೆಯನ್ನು 7 ವರ್ಷಕ್ಕೆ 80.5 ಕೋಟಿಗೆ ಗುತ್ತಿಗೆ ಕೊಟ್ಟ ಕೀರ್ತಿ ನಮ್ಮ ರಾಜ್ಯ ಸರ್ಕಾರಕ್ಕೆ ಸಲ್ಲಬೇಕು. ರೈತರ ವಿಶ್ವಾಸಗಳಿಸಿರುವ ನಂಜನಗೂಡಿನ ಸಕ್ಕರೆ ಕಾರ್ಖಾನೆ PSSK ಯನ್ನು ಲೀಸ್ ಮಾಡಿಕೊಳ್ಳಲು ಆಸಕ್ತಿ ತೋರಿತ್ತು. ಆದರೆ PSSK ಬೋರ್ಡ್‌ನ ನಿರ್ದೇಶಕ ಬಿ.ಎಚ್. ಮಂಜುನಾಥನ ಧನದಾಹವನ್ನು ಇಂಗಿಸುವಷ್ಟು ಲಂಚ ಕೊಡಲು ನಂಜನಗೂಡು ಕಾರ್ಖಾನೆ ಸಿದ್ಧವಿರಲಿಲ್ಲ, ಕೊಠಾರಿಯಿಂದ ಯಾರ್‍ಯಾರು ಎಷ್ಟೆಷ್ಟು ತಿಂದರೋ ಗೊತ್ತಿಲ್ಲ, ಅಂತೂ ಕೊನೆಗೆ ರೈತರ ಬಾಳಿನ ಬೆಳಕಾಗಿದ್ದ PSSK ಕೋಠಾರಿ ಖದೀಮನ ಪಾಲಾಗಿಹೋಯಿತು.

ಮೊದಮೊದಲು ಕಾರ್ಖಾನೆಯನ್ನು ಚೆನ್ನಾಗಿಯೇ ನಡೆಸಿದ ಕೊಠಾರಿ ಕಂಪನಿ ಚೆನ್ನಾಗಿಯೇ ದುಡ್ಡು ಮಾಡಿಕೊಂಡಿತು. 2ನೇ ವರ್ಷ ರೈತರಿಗೆ ಕಬ್ಬು ಬೆಳೆಯಲು ಹೇಳಿ, ಬೆಳೆದ ಕಬ್ಬನ್ನು ರೈತರು ಫ್ಯಾಕ್ಟರಿಗೆ ತಂದರೆ ಯಂತ್ರಗಳು ಕೆಟ್ಟು ಹೋಗಿವೆ ಎಂಬ ನೆಪವೊಡ್ಡಿ ಕಬ್ಬು ಕೊಂಡುಕೊಳ್ಳಲು ನಿರಾಕರಿಸಿತು. ವರ್ಷವಿಡೀ ದುಡ್ಡು, ಬೆವರು ಹರಿಸಿದ ರೈತರು ಕಂಗೆಟ್ಟು ಬೆಳೆದು ನಿಂತ ಕಬ್ಬಿಗೆ ಗದ್ದೆಯಲ್ಲೇ ಬೆಂಕಿಹಚ್ಚಿದರು.

23 ಕೋಟಿ ಮೋಸ!

PSSKಯನ್ನು ಗುತ್ತಿಗೆ ಪಡೆಯುವಾಗ ಪ್ರತೀವರ್ಷ ಲೀಸ್ ದುಡ್ಡನ್ನು ಕೊಡಬೇಕೆಂದೂ, ಷೇರುದಾರರಿಗೆ ಲಾಭಾಂಶ ನೀಡಬೇಕೆಂದೂ ಕರಾರು ಬರೆದುಕೊಟ್ಟಿದೆ. ಆದರೆ, ಮೊದಲ ವರ್ಷ 6 ಕೋಟಿ, 2ನೇ ವರ್ಷ 8 ಕೋಟಿ ಪಾವತಿಸಿದ್ದು ಬಿಟ್ಟರೆ ನಂತರ ಎರಡು ವರ್ಷಗಳಿಂದ ಕೊಡಬೇಕಿದ್ದ 23 ಕೋಟಿ ಲೀಸ್ ದುಡ್ಡನ್ನು ಸರ್ಕಾರಕ್ಕಾಗಲೀ, ಷೇರುದಾರರಿಗಾಗಲೀ ಕೊಟ್ಟೇ ಇಲ್ಲ, ಕರಾರಿನಪ್ರಕಾರ ಅದರ ಗುತ್ತಿಗೆ ರದ್ದಾಗಬೇಕಿತ್ತು. ಅಮೇಧ್ಯ ತಿಂದ ಶಾಸಕರಾದ ರಮೇಶ್‌ಬಾಬು ಮತ್ತು ಸಿ.ಎಸ್. ಪುಟ್ಟರಾಜು ಹಾಗೂ ನಿರ್ದೇಶಕ ಬಿ.ಎಚ್. ಮಂಜುನಾಥರ ಕೃಪಾಕಟಾಕ್ಷದಿಂದ ಕರಾರು ಇನ್ನೂ ರದ್ದಾಗಿಲ್ಲ.



P.S.S.K. ಡಿಸ್ಟಿಲರಿ

ಕಂಪನಿಯ ನವೀಕರಣ ಅದೂ-ಇದೂ ಅಂತ ಕೊಠಾರಿ ಕಂಪನಿ ರೈತರಿಗೆ, ಷೇರುದಾರರಿಗೆ ಮುಂಡಾಮೋಚುವ ಕಾಯಕದಲ್ಲಿ ತಲ್ಲೀನವಾಗಿದೆ. ವಾಸ್ತವದಲ್ಲಿ ಕಳೆದ ವರ್ಷ ಉತ್ಪಾದಿಸಿದ ಉತ್ಪನ್ನಗಳನ್ನು ಇತ್ತೀಚೆಗೆ ಮಾರಲಾಗಿದೆ. ಸಕ್ಕರೆಯನ್ನು 1890 ರೂ.ನಂತೆ, ಉಪ ಉತ್ಪನ್ನಗಳಾದ ಮೊಲಾಸಿಸ್ ಅನ್ನು ಟನ್‌ಗೆ 6000 ರೂ.ನಂತೆ, ಬಗಾಸಿಸ್ ಅನ್ನು ಟನ್ ಒಂದಕ್ಕೆ 1300 ರೂ.ನಂತೆ ಈ ಮಾರಾಟದಿಂದಲೇ ಕಳೆದ ಒಂದೇ ವರ್ಷದಲ್ಲಿ ಐದು ಕೋಟಿ ಲಾಭ ಕೊಠಾರಿಯ ಜೇಬು ಸೇರಿದೆ. ಆದರೆ, ಕಬ್ಬು ಮಾರಿದ ರೈತರಿಗೆ ಕೊಡಬೇಕಾಗಿದ್ದ ನಾಲ್ಕು ಕೋಟಿ ದುಡ್ಡನ್ನು ಮಾತ್ರ ಕೊಟ್ಟಿಲ್ಲ, ಕೊಠಾರಿ ಕಂಪನಿಯ ಜನರಲ್ ಮ್ಯಾನೇಜರ್ ರವಿ, PSSKಯ ಎಂ.ಡಿ.ರಾಜಣ್ಣರೆಡ್ಡಿ ಮತ್ತು ಅಕೌಂಟೆಂಟ್ ಆಫೀಸರ್ ರಾಮಲಿಂಗಂ ತಮ್ಮ ಪಾಲಿನ ಪರ್ಸೆಂಟೇಜ್ ಪಡೆದು ಮಲಗಿದ್ದಾರೆ.



P.S.S.K. ವಿದ್ಯಾಸಂಸ್ಥೆ

ಮೌಲ್ಯ 75 ಕೋಟಿ, ಸಾಲ 160 ಕೋಟಿ!


ಉತ್ತಮ ಕಾರ್ಖಾನೆಯೊಂದನ್ನು ಮುಳುಗಿಸುವುದಕ್ಕೆ ಏನೆಲ್ಲಾ ತಂತ್ರಗಳನ್ನು ಮಾಡಬಹುದೋ ಅದನ್ನೆಲ್ಲಾ PSSK ಆಡಳಿತ ಮಂಡಳಿ ಮಾಡಿದೆ. ಸರ್ಕಾರದ ಹಣ ಬಿಡುಗಡೆಯಾಗುವುದಕ್ಕೆ ವಿಳಂಬವಾಗುತ್ತಿದೆ ಎಂಬ ನೆಪವೊಡ್ಡಿ ಸಕ್ಕರೆ ಚೀಲಗಳನ್ನು ಒತ್ತೆಯಿಟ್ಟು ಎಂ.ಡಿ.ಸಿ.ಸಿ. ಬ್ಯಾಂಕಿನಿಂದ ಕೋಟ್ಯಂತರ ರೂಪಾಯಿ ಸಾಲ ತಂದು ಕೋಟಿಗಟ್ಟಲೆ ಬಡ್ಡಿಯನ್ನೂ ಕಟ್ಟಲಾಗಿದೆ. ಈ ಹೊತ್ತು ಪರಿಸ್ಥಿತಿ ಹೇಗಿದೆಯೆಂದರೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ, ಎಂ.ಡಿ.ಡಿ.ಸಿ ಬ್ಯಾಂಕ್, ಕಾರ್ಮಿಕರ ಬ್ಯಾಂಕ್‌ಗಳಿಂದ ಪಡೆದಿರುವ ಸಾಲ 160 ಕೋಟಿ ದಾಟುತ್ತದೆ! ಕಾರ್ಖಾನೆಯ ಹಿಂದಿರುವ ಡಿಸ್ಟಲರಿ ಕಟ್ಟಡ, ಕಾರ್ಮಿಕರಿರುವ ವಿಶ್ವೇಶ್ವರನಗರ, ಬ್ಯಾಡರಹಳ್ಳಿಯ ಹತ್ತಿರವಿರುವ ತಾವರೆಕೆರೆ ಭೂಮಿ, ಹೈಸ್ಕೂಲು-ಕಾಲೇಜು, ಫ್ಯಾಕ್ಟರಿ ಎಲ್ಲವನ್ನೂ ಒಗ್ಗೂಡಿಸಿ ಮಾರಾಟ ಮಾಡಿದರೂ 75 ಅದರ ಮೌಲ್ಯ ಕೋಟಿ ದಾಟುವುದಿಲ್ಲ! ಕೊಠಾರಿ ಕಂಪೆನಿ ಇದ್ದಬದ್ದ ಆಸ್ತಿಪಾಸ್ತಿಗಳನ್ನೂ ಮಾರಿಕೊಂಡು ರಾತ್ರೋರಾತ್ರಿ ಓಡಿಹೋಗುವುದಕ್ಕೆ ಸಿದ್ಧತೆ ಮಾಡಿಕೊಂಡಿದೆ. ಇದನ್ನೇ ನಂಬಿಕೊಂಡ ಷೇರುಧಾರರು, ಕಾರ್ಮಿಕರಿಗೆ, ರೈತರೂ ಹಾಗೂ ಪರೋಕ್ಷವಾಗಿ ಇದರ ಮೇಲೆ ಅವಲಂಬಿತರಾಗಿರುವ ಎರಡು ಕೋಟಿ ಜನರೀಗ ಆತಂಕದ ಸ್ಥಿತಿಯಲ್ಲಿದ್ದಾರೆ.

ಕೊಠಾರಿಯ ಗುತ್ತಿಗೆ ಕರಾರಿನ ಪ್ರಕಾರ ಕಾಯಂ ನೌಕರರನ್ನು ಒಳಗೊಂಡಂತೆ 35 ಗುತ್ತಿಗೆ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಅಂಶವೂ ಇದೆ. ಆದರೆ ಈ ಗುತ್ತಿಗೆ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸಲಾಗಿದ್ದು ಅವರೆಲ್ಲಾ ಒಂದು ತಿಂಗಳಿಂದ ಧರಣಿ ನಡೆಸುತ್ತಿದ್ದಾರೆ. ಕೊಠಾರಿ ಕಂಪನಿಯ ಗುಲಾಮರಂತೆ ವರ್ತಿಸುತ್ತಿರುವ ಎಂ.ಡಿ. ರಾಜಣ್ಣರೆಡ್ಡಿ ಮತ್ತು ಅಕೌಂಟ್ ಆಫೀಸರ್ ರಾಮಲಿಂಗಂರ ಆಟೋಪಾಟಗಳಿಗೆ ಕೊನೆಯಿಲ್ಲದಂತಾಗಿದೆ. ಇಷ್ಟೆಲ್ಲಾ ವಂಚನೆಗೊಳಗಾಗುತ್ತಿದ್ದರೂ ಒಂದು ಸಭೆಯನ್ನೂ ಕರೆಯದಿರುವುದು ಷೇರುದಾರರ, ರೈತರ, ಕಾರ್ಮಿಕರ ಸಿಟ್ಟು ದಿನದಿಂದ ದಿನಕ್ಕೆ ಹೆಪ್ಪುಗಟ್ಟುವುದಕ್ಕೆ ಕಾರಣವಾಗಿದೆ. ಪರಿಸ್ಥಿತಿ ಹೀಗೇ ಮುಂದುವರೆದರೆ ಕೊಠಾರಿ ಕಂಪನಿಯ ಕಿರಾತಕರನ್ನು PSSK ಎಂ.ಡಿ. ರಾಜಣ್ಣರೆಡ್ಡಿ, ರಾಮಲಿಂಗಂ ಸಮೇತವಾಗಿ ಕಾರ್ಖಾನೆಯ ಕಂಬಗಳಿಗೆ ಕಟ್ಟಿಹಾಕಿ ಬಾರಿಸುವ ದಿನ ಬಂದರೂ ಬರಬಹುದು. ಸಕ್ಕರೆ ಸಚಿವ ಶಿವರಾಜ್ ತಂಗಡಗಿ ಈಗಲೇ ಎಚ್ಚರಗೊಂಡರೆ ಒಳ್ಳೆಯದು.

■ ಲಕ್ಷ್ಮಣ್ ಚೀರನಹಳ್ಳಿ



ಪುಟ್ಟಣ್ಣಯ್ಯ ಮೌನ ಏಕೆ?



ಕೊಠಾರಿ ಕಂಪನಿಯ ಖದೀಮರು ರಾತ್ರೋರಾತ್ರಿ, ಸುಮಾರು ಎರಡು ಕೋಟಿ ಬೆಲೆಬಾಳುವ ರೋಲ್‌ಗಳು, ಗನ್‌ಮೆಟ್ಟಲ್, ಬೇರಿಂಗ್ ಎಲೆಕ್ಟ್ರಿಕ್ ಯಂತ್ರೋಪಕರಣಗಳೂ ಸೇರಿದಂತೆ ಗ್ರೀಸನ್ನೂ ಬಿಡದೆ ಸಾಗಿಸುತ್ತಿದ್ದರು. ದಿನಗೂಲಿ ನೌಕರರು ತಮ್ಮನ್ನು ಕೆಲಸದಿಂದ ತೆಗೆದು ಹಾಕಿದ್ದರಿಂದ ಕೊನೆಯ ಲಾರಿಯನ್ನು ಹಿಡಿದು ಪ್ರತಿಭಟಿಸಿದ್ದಕ್ಕೆ ಹೊರಜಗತ್ತಿಗೆ ಗೊತ್ತಾಯಿತು. ರೈತ ಸಂಘದ ನಾಯಕ ಪುಟ್ಟಣ್ಣಯ್ಯ ತನ್ನನ್ನು ರೈತನಾಯಕನನ್ನಾಗಿ ಮಾಡಿದ ರೈತರು ಕೊಠಾರಿ ಕಂಪನಿಯಿಂದ ಮೋಸಕ್ಕೆ ಒಳಗಾಗುತ್ತಿದ್ದರೂ ತುಟಿ ಎರಡು ಮಾಡದೇ ಮೌನವ್ರತ ಮಾಡುತ್ತಿದ್ದಾರೆ. ಬೇರೆಲ್ಲ ವಿಚಾರಗಳಿಗೆ ಗಂಟಲು ಬಿದ್ದು ಹೋಗುವಂತೆ ಮಾತನಾಡುವ ಪುಟ್ಟಣ್ಣಯ್ಯ ಕೊಠಾರಿ ಕಂಪನಿಯ ದರೋಡೆ ಬಗ್ಗೆ ಸುಮ್ಮನಿರುವುದು ಯಾಕೆ?

ಪುಟ್ಟರಾಜು ಮತ್ತು ರಮೇಶ್ ಬಾಬು ಇಬ್ಬರೂ ಕೋಠಾರಿ ಕಂಪೆನಿಗೆ ತಮ್ಮನ್ನು ಮಾರಿಕೊಂಡಂತೆ ಪುಟ್ಟಣ್ಣಯ್ಯ ಕೂಡ ಡೀಲ್ ಆಗಿದ್ದಾರಾ? ಇದು ಪಾಂಡವಪುರ ಸಕ್ಕರೆ ಕಾರ್ಖಾನೆಯ ಕಾರ್ಮಿಕರು, ಕಬ್ಬು ಬೆಳೆಯುವ ಲಕ್ಷಾಂತರ ರೈತರು, ನೂರಾರು ಷೇರುದಾರರು ಕೇಳುತ್ತಿರುವ ಪ್ರಶ್ನೆ. ಅದಕ್ಕೆ ಉತ್ತರಿಸಬೇಕಾದದ್ದು ಅವರ ಕರ್ತವ್ಯ. ಅವರ ಮೌನವ್ರತ ಹೀಗೇ ಮುಂದುವರೆದರೆ ಬರುವ ಎಂಪಿ ಎಲೆಕ್ಷನ್ನಿನಲ್ಲಿ ಅಭ್ಯರ್ಥಿಯಾಗುತ್ತಿರುವ ಪುಟ್ಟಣ್ಣಯ್ಯ ಭಾರೀ ಬೆಲೆ ತೆರಬೇಕಾಗುತ್ತದೆ.

---

20 ಕೋಟಿಗೆ ಇಬ್ಬರು ಶಾಸಕರ ಡೀಲ್!

"ಇದೇ ಸಕ್ಕರೆ ಕಾರ್ಖಾನೆಯಲ್ಲಿ ಕ್ಲೀನಿಂಗ್ ಮಾಡುತ್ತಾ [illegible] ಗುತ್ತಿಗೆದಾರನಾಗಿದ್ದ ಸಿ.ಎಸ್. ಪುಟ್ಟರಾಜು ಈ [illegible]



ಎಮ್ಮೆಲ್ಲೆಯಾದ ಮೇಲೆ ದಿನನಿತ್ಯ ಒಂದಲ್ಲಾ ಒಂದು ಕಾರ್ಯಕ್ರಮವನ್ನು ಮಾಡಿಸಿ ಪತ್ರಿಕೆಗಳಿಗೆ ಪೋಸು ನೀಡುವುದೇ ಇವನ ದಿನಚರಿಯಾಗಿಬಿಟ್ಟಿದೆ. ಈತನ ವೀರಾವೇಶದ ಖಯಾಲಿಗಳಿಗೆ ಜನ ಈತನಿಗೆ "ಪ್ರೋಗ್ರಾಂ ವೀರ - ಕಲೆಕ್ಷನ್ ಶೂರ" ಎಂಬ ಬಿರುದಾಂಕಿತವನ್ನು ನೀಡಿದ್ದಾರಂತೆ. ಇನ್ನೂ ಶ್ರೀರಂಗಪಟ್ಟಣದಿಂದ ಆಕಸ್ಮಿಕವಾಗಿ ಎಂಎಲ್‌ಎ ಆಗಿರುವ ರಮೇಶ್ ಬಾಬುವಿನ ವೃತ್ತಾಂತವೂ ಪುಟ್ಟರಾಜುವಿಗಿಂತ ಕಡಿಮೆಯೇನಿಲ್ಲ. ಬಿಡಿ.

ಇವೆಲ್ಲಾ ಎಲ್ಲಾ ಶಾಸಕರಿಗೆ ಇದ್ದ ಖಯಾಲಿಗಳು ಎಂಬಂತೆ ಅನ್ನಿಸಬಹುದು. ಆದರೆ ಷೇರುದಾರರಿಗೆ ಮತ್ತು ಸರ್ಕಾರಕ್ಕೆ 23 ಕೋಟಿ, ರೈತರಿಗೆ 4 ಕೋಟಿ ಬಾಕಿ ಪಾವತಿಸದಿರುವ ಕೊಠಾರಿ ಕಂಪೆನಿಯ ವಿರುದ್ಧ ಇವರಿಬ್ಬರೂ ಕಿಮಕ್ಕೆಂದಿಲ್ಲ, ಅದಕ್ಕಾಗಿ ಅವರಿಬ್ಬರೂ ಕೊಠಾರಿಯಿಂದ ಪಡೆದದ್ದು ತಲಾ ಐದು ಕೋಟಿ ಮಾತ್ರ ಎಂದು ಜನ ಆಡಿಕೊಳ್ಳುತ್ತಿದ್ದಾರೆ. ಹಣ ಕೈ ಸೇರಿದ್ದೇ ತಡ ಈ ಖದೀಮರು ಈಗ ಕೊಠಾರಿ ಕಂಪೆನಿಗೆ ಕೊಟ್ಟಿರುವ ಗುತ್ತಿಗೆ ಅವಧಿಯನ್ನು 7 ವರ್ಷದಿಂದ 30ವರ್ಷಕ್ಕೆ ಹೆಚ್ಚಿಸಬೇಕೆಂದು ಮುಖ್ಯಮಂತ್ರಿಗಳಿಗೆ ಶಿಫಾರಸ್ಸು ಪತ್ರವನ್ನು ಬರೆದಿದ್ದಾರೆ. ಈ ಡೀಲ್ ಸಕ್ಸಸ್ ಆದರೆ ಕೊಠಾರಿಯಿಂದ ಇವರಿಬ್ಬರಿಗೂ ತಲಾ 20 ಕೋಟಿ ಭಕ್ಷೀಸು ಸಿಗುತ್ತದಂತೆ!



ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಪುಟ್ಟರಾಜು DFFOಯ ಶಿಕ್ಷಣ ಸಂಸ್ಥೆಗೆ ತನ್ನನ್ನು ಅಧ್ಯಕ್ಷನನ್ನಾಗಿ ಮಾಡಿ ಎಂದು ಸಿ.ಎಂ. ಯಡ್ಡಿಗೆ ಮತ್ತು ಷುಗರ್ ಬೋರ್ಡ್‌ಗೆ ಪತ್ರ ಬರೆದಿದ್ದಾನೆ. ಅಲ್ಲದೇ, ತನ್ನ ಪ್ರಭಾವ ಬಳಸಿ ಗೌರವ ಅಧ್ಯಕ್ಷನಾಗಿ ಗದ್ದುಗೆಯೇರಿದ್ದಾನೆ.

ಈ PSSK ಟ್ರಸ್ಟ್ [illegible]

ಬಸವರಾಜಮಾರ್ಗ

ಒಂದು ನೋಟ

ಪುಸ್ತಕ ವಿಮರ್ಶೆ


'ಬಸವರಾಜ ಮಾರ್ಗ' ಎಂಬ ವ್ಯಕ್ತಿ-ವಿಚಾರಗಳ ಲೇಖನ ಸಂಗ್ರಹ ಚಿತ್ರದುರ್ಗ ಸಮ್ಮೇಳನದ ವಿಶೇಷತೆಯಾಗಿದೆ. ಸಂಶೋಧನ ಲೋಕದಲ್ಲಿ ಕಲಬುರ್ಗಿ ಮಾರ್ಗ ಮಾತ್ರ ಗೊತ್ತಿತ್ತು, ಈಗ 'ಬಸವರಾಜ ಮಾರ್ಗ' ಇದಕ್ಕೆ ಹೊಸ ಸೇರ್ಪಡೆಯಾಗಿದೆ. ಖ್ಯಾತನಾಮರಾದ ಕಿರಂ, ಜಿ.ಪಿ. ಬಸವರಾಜ, ರಹಮತ್ ತರೀಕೆರೆ, ಬಸವರಾಜ ಕಲ್ಗುಡಿ, ತೇಜಶ್ರೀ, ಬಂಜಗೆರೆ ಜಯಪ್ರಕಾಶ, ನೀಲಗಿರಿ ತಳವಾರ ಮುಂತಾದವರ ಲೇಖನ, ಸಂದರ್ಶನ, ಕವನಗಳನ್ನು ಈ ಕೃತಿ ಒಳಗೊಂಡಿದೆ. ಗೌರಿ ಲಂಕೇಶ್ ಇವೆಲ್ಲವುಗಳನ್ನು ಸಂಗ್ರಹಿಸಿ ಲಂಕೇಶ್ ಪ್ರಕಾಶನದ ಮೂಲಕ ಹೊರತಂದಿದ್ದಾರೆ. ಅವಧೂತರಂತೆ ಕಾಣುವ ಎಲ್. ಬಸವರಾಜ ಅವರ ಆಕರ್ಷಕ ಮುಖಪುಟದೊಂದಿಗೆ ಈ ಕೃತಿ ಹಲವು ರೀತಿಯಿಂದ ವಿಶಿಷ್ಟವಾಗಿದೆ. ಎಲ್. ಬಸವರಾಜು ಅವರ ಚಿಂತನೆಯ ಹೊಸ್ತಿಲ ದಾಟಲು ಈ ಕೃತಿ ನಿಸ್ಸಂಶಯವಾಗಿ ನೆರವಾಗುತ್ತದೆ. ಸಂಪಾದನೆ-ಸಂಶೋಧನೆಗಳ ಪ್ರಥಮ ಮೆಟ್ಟಿಲ ಹತ್ತುವವರು ಈ ಕೃತಿ ಓದಲೇ ಬೇಕು.

ಕಿರಂ ಪ್ರಕಾರ ಎಲ್.ಬಿ.ಯವರು ಏಕಾಂಗ ವೀರ. ಮೇಲ್ನೋಟಕ್ಕೆ ಅವರು ಗ್ರಂಥ ಸಂಪಾದಕರಂತೆ ಕಂಡರೂ ಅವರ ವಿದ್ವತ್ತಿನ ಹರವು ವಿಶಾಲವಾಗಿದೆ. ಪ್ರಾಚೀನ ಸಾಹಿತ್ಯದೊಂದಿಗೆ ಆಧುನಿಕ ಸಾಹಿತ್ಯದ ಅನುಸಂಧಾನ ನಡೆಸುವ ಎಲ್‌ಬಿಯವರ ಪ್ರತಿಭೆ ಅನನ್ಯವಾದುದು. ಕೇವಲ ನಾಲ್ಕಾರು ಪುಸ್ತಕ-ಹಸ್ತಪ್ರತಿ ಜಾಲಾಡಿ ಹೊಸ ಪಠ್ಯವನ್ನು ಬೇರೆ ಯಾರಿಂದಲೋ ಬರೆಸಿ ತಮ್ಮ ಹೆಸರನ್ನು ಹಾಕಿಕೊಳ್ಳುವುದು 'ಸಂಪಾದನೆ' ಅಲ್ಲ, ಸಂಪಾದನೆಯಲ್ಲಿ ಓದುಗರಿಗೆ ಹೊಸ ಹೊಳಹು ಸೂಕ್ಷ್ಮಗ್ರಹಿಕೆ ನೀಡುವುದು ಅವರ ಜಾಯಮಾನವಾಗಿದೆ. ಪ್ರಾಚೀನ ಸಾಹಿತ್ಯದ ಪುನರ್‌ನಿರ್ಮಾಣ ಸಾಮರ್ಥ್ಯ ಅವರಲ್ಲಿ ಅಸಮಾನ್ಯವಾಗಿದೆ. ಕಿರಂ ಅವರು ವಸ್ತುನಿಷ್ಠವಾಗಿ ಎಲ್. ಬಸವರಾಜು ಅವರ ವಿಶಾಲ ವ್ಯಕ್ತಿತ್ವವನ್ನು ಪುಟ್ಟ ಕನ್ನಡಿಯಲ್ಲಿ ಹಿಡಿದಿಟ್ಟಿದ್ದಾರೆ.

ಸಂಶೋಧಕರೆಂದರೆ ಸೃಜನೇತರರು. ಅವರು ಕತೆ, ಕವನ, ನಾಟಕ ಬರೆಯುತ್ತಾರೆಂದರೆ ಓದುಗರು ನಂಬುವುದೇ ಇಲ್ಲ, ಎಲ್.ಬಿ.ಯವರು ಕವನ ಓದಿದ ಪ್ರಸಂಗವನ್ನೇ ಕೇಂದ್ರವಾಗಿಟ್ಟುಕೊಂಡು ಜಿ.ಪಿ.ಬಸವರಾಜು ಅವರು ಎಲ್.ಬಿ.ಯವರ ಸ್ಥಾವರ-ಜಂಗಮ ಗುಣಗಳನ್ನು ಗುರುತಿಸಿದ್ದಾರೆ. ಮೇಲ್ನೋಟಕ್ಕೆ ಎಲ್.ಬಿ.ಯವರು ಒರಟಾಗಿ ಕಂಡರೂ ಅವರದು ಮಗುವಿನಂತಹ ಮುಗ್ಧ ಮನಸ್ಸು. ತತ್ವಕ್ಕಾಗಿ ಹೋರಾಟಕ್ಕೆ-ಕಾದಾಟಕ್ಕೆ ಇಳಿಯುತ್ತಾರೆ, ಮತ್ತೇ ಮರೆತುಬಿಡುತ್ತಾರೆ. ಮನೆಯವರಿಗೆ ಗೊತ್ತಾಗದಂತೆ ಸಿಗರೇಟು ಸೇದಲು (ಗಿರಡ್ಡಿಯವರಂತೆ) ಮಧ್ಯಾಹ್ನ ವಾಕಿಂಗ್ ಮಾಡುತ್ತಾರಂತೆ. ಸ್ವಾಮಿಗಳ ಬಗ್ಗೆ ಆಕ್ರಮಣಕಾರಿಯಾಗಿ ಮಾತನಾಡುವ ಎಲ್.ಬಿ.ಯವರು ಸಿದ್ಧಗಂಗೆ ಶ್ರೀಗಳ ವಿಷಯ ಬಂದಾಗ ಮೌನ ತಪಸ್ವಿಗಳಾಗುತ್ತಾರೆ.

ರಹಮತ್ ತರೀಕೆರೆ ಕಳೆದ ಶತಮಾನದ ಕೊನೆಗೆ ಎಲ್. ಬಸವರಾಜು ಅವರಿಗೆ ಪಂಪ ಪ್ರಶಸ್ತಿ ಬಂದಾಗ ನಡೆಸಿದ ಮುಕ್ತ ಸಂದರ್ಶನ ಇಲ್ಲಿದೆ. ಇಸ್ತ್ರಿ ಭಾಷೆಯನ್ನು ತೊರೆದು ಸಂದರ್ಶನ ನೀಡಿದ್ದಾರೆ. ವಚನಗಳ ಪರೀಕ್ಷರಣವನ್ನು ಮೊದಲು ಒಂದು ಆಟವಾಗಿ ಸ್ವೀಕರಿಸಿದ ಅವರು ನಂತರ ಅದನ್ನು ಬದುಕಿನ ಮಾರ್ಗವಾಗಿ ಸ್ವೀಕರಿಸಿದ್ದಾರೆ. ಸಂದರ್ಶನದಲ್ಲಿ ಹಳಕಟ್ಟಿ, ಬಸವನಾಳ, ಕಲಬುರ್ಗಿ, ಚಿಮೂ ಮುಂತಾದವರನ್ನು ಗೌರವದಿಂದಲೇ ಜಾಲಾಡಿಸಿದ್ದಾರೆ. ತರೀಕೆರೆಯವರು ಪೈಲ್ವಾನರಂತೆ ಡಾವ್-ಪೇಚ ಹಾಕಿ ಬಸವರಾಜುರೊಂದಿಗೆ ಸಂದರ್ಶನದಲ್ಲಿ ಕುಸ್ತಿ ಹಿಡಿದಿದ್ದಾರೆ. ಕಲ್ಗುಡಿಯವರು ಎಲ್.ಬಿ.ಯವರ ವಿದ್ಯಾರ್ಥಿಯಾಗದಿರುವುದಕ್ಕೆ ಅಸೂಯೆಪಡುತ್ತ ಅವರ ಪಾಂಡಿತ್ಯದ ಬಗ್ಗೆ ವಿಶೇಷ ಗೌರವ ದಾಖಲಿಸಿದ್ದಾರೆ. ತೇಜಶ್ರೀಯವರು ಎಲ್.ಬಿ.ಯವರಲ್ಲಿ ಮಾತೃಹೃದಯ ಕಂಡಿದ್ದಾರೆ.

"ಅನುದೇವ ಹೊರಗಣವನು....." ಖ್ಯಾತಿಯ ಬಂಜಗೆರೆ ಜಯಪ್ರಕಾಶರು ಎಲ್.ಬಿ.ಯವರನ್ನು ಅಲ್ಲಮನಿಗೆ ಹೋಲಿಸಿದ ಲೇಖನ ವಿಶಿಷ್ಟವಾಗಿದೆ. ಅನುಭಾವಿ ಅಲ್ಲಮನನ್ನು ಶೂನ್ಯಸಿಂಹಾಸನದ ಅಧ್ಯಕ್ಷನನ್ನಾಗಿ ಮಾಡಿದ್ದು ಕಲ್ಯಾಣ ಕ್ರಾಂತಿಯ ಹಲವು ಕಾರಣಗಳಲ್ಲಿ ಒಂದು. ವಚನ ಸಾಹಿತ್ಯದ ಪ್ರಥಮ ಪ್ರವರ್ತಕರೆಂದರೆ ಎಲ್.ಬಿ.ಯವರು. ಇಲ್ಲಿಯವರೆಗೆ ಸಂಶೋಧಕರು ಪುರಾಣ-ಶಾಸನವನ್ನು ಆಧಾರವಾಗಿಟ್ಟುಕೊಂಡು ವಿವರ ನೀಡಿದ್ದಾರೆ. ಆದರೆ ಜಯಪ್ರಕಾಶರ ಪ್ರಕಾರ ಎಲ್.ಬಿ.ಯವರು ಮಾಹಿತಿಯಲ್ಲಿ ಅಡಗಿರುವ ನಿಜದ ನೆಲೆಯನ್ನು ಅನ್ವೇಷಣೆ ಮಾಡಿದ್ದಾರೆ. ಇಂತಹ ನೆಲೆಯ ಅನ್ವೇಷಣೆಗೆ ಜಾತಿ/ಮತಗಳ ಹಿತಾಸಕ್ತಿಯ ಕವಚವಿದ್ದರೆ 'ಸುಳ್ಳು' ಸತ್ಯವಾಗಿ ಬಿಡುತ್ತದೆ. ಇದರಿಂದ ಬೌದ್ಧಿಕ ಕ್ಷೇತ್ರಕ್ಕೆ ಅಪಾಯ ಹೆಚ್ಚು, ಇಂತಹ 'ಅನುಮಾನಿತ ಸತ್ಯದ' ಬಗ್ಗೆ ಒಂದು ವಿಚಾರ ಸಂಕಿರಣದ ಚರ್ಚೆಯ ಸುದೀರ್ಘ ವಿವರಣೆಯನ್ನು ಜೆ.ಪಿ.ಯವರು ನೀಡಿದ್ದಾರೆ. ಮೈಸೂರು ಒಡೆಯರ ಮನೆತನದ ಹಿನ್ನೆಲೆಯನ್ನು ಯಾದವ ವಂಶದ ಬೇರಿನಲ್ಲಿ ಗುರುತಿಸುವ ಪರಂಪರೆ ಇದೆ. ಮೈಸೂರ ಅರಸರು ಸೋಲಿಗರ ದೈವವಾದ 'ಕ್ಯಾತೆ ದೇವರ' ಪೂಜೆ, ಕುಂಬಾರರ 'ಚಕ್ರಪೂಜೆ' ಮುಂತಾದ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಅವರು ಯಾದವ ವಂಶಜರು ಎಂದು ಹೇಳುವುದು 'ಅರ್ಧಸತ್ಯ'ವಾಗಿರಬಹುದು ಎಂಬ ಸುಳಿವು ಇದೆ. ಮರೆಮಾಚಲ್ಪಟ್ಟ ವಿಷಯಗಳ ಬಗ್ಗೆ ಮುಕ್ತಬೌದ್ಧಿಕ ಚರ್ಚೆ ನಡೆಯಬೇಕು ಎಂಬುದು ಜಯಪ್ರಕಾಶರ ಇಚ್ಛೆಯಾಗಿದೆ ಬಾಬಾ ಬುಡನಗಿರಿ, ಬಾಬರಿ ಮಸೀದಿ, ಕನಕದಾಸ, ಬಸವಣ್ಣ, ಸರ್ವಜ್ಞ ಮುಂತಾದವರ ಇತಿಹಾಸ ವಿಭಿನ್ನವಾಗಿ ದಾಖಲಾಗಿದೆ. ಇಂತಹ ವಿಷಯಗಳಲ್ಲಿ ನಿರ್ಲಿಪ್ತ ವಿಶ್ಲೇಷಣೆ ಬೇಕಾಗಿದೆ ಎಂದು ಎಲ್.ಬಿ.ಯವರ ಬದುಕನ್ನು ಆಧಾರವಾಗಿಟ್ಟುಕೊಂಡು ವಿವರಿಸುವುದನ್ನು ಇಲ್ಲಿ ಕಾಣಬಹುದು.



ಬಸವರಾಜಮಾರ್ಗ

ಲಂಕೇಶ್ ಪ್ರಕಾಶನ

ನಂ. 9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂ.–4

080–26676427, 9880302817

ಬೆಲೆ: ರೂ. 40/–



ಚಂದ್ರಶೇಖರ ನಂಗಲಿಯವರು ಪುರೋಹಿತಶಾಹಿ ಸೃಷ್ಟಿಸುವ ಅಪಾಯಗಳಿಗೆ ಸಿದ್ಧರಾಮನ ಲಿಂಗದೀಕ್ಷೆಯ ಸಂದರ್ಭದ ಹಿನ್ನೆಲೆಯ ಲೇಖನ ದಾಖಲಿಸಿದ್ದಾರೆ. ಇದು ಅತ್ಯಂತ ಮೌಲಿಕ ಲೇಖನವಾಗಿದೆ. ಚನ್ನಬಸವಣ್ಣನಿಂದ ಸಿದ್ಧರಾಮನಿಗೆ ಲಿಂಗದೀಕ್ಷೆಯಾಯಿತೆಂದು ಮರೀಕರಣಗೊಂಡ ವಿದ್ವತ್ತ ಲೋಕದ ಅಭಿಪ್ರಾಯವಾಗಿದೆ. ಇದಕ್ಕೆ ಪ್ರತಿಯಾಗಿ ಸಿದ್ಧರಾಮ ತಾನೇ ಸ್ವತಃ ಲಿಂಗವಾಗಿರುವಾಗ ಮತ್ತೆ ಬೇರೆ ದೀಕ್ಷೆ ಏಕೆ? ಎಂಬ ಅಲ್ಲಮನ ವಾದವನ್ನು ಎಲ್.ಬಿ. ಮುಂದಿಟ್ಟಿದ್ದಾರೆ. ಸೊನ್ನಲಾಪುರದ "ಸಂತ ಸಿದ್ಧರಾಮನ ನಿಜ ವಚನಗಳು" ಎಂಬ ಗ್ರಂಥ ಇದಕ್ಕೆ ಆಧಾರವಾಗಿದೆ.

ಕಲಬುರ್ಗಿಯವರು "ಖರೇ ಖರೇ ಸಂಗ್ಯಾಬಾಳ್ಯ" ಎಂಬ ನಾಟಕ ಪ್ರಕಟಿಸಿದಾಗ ವಿದ್ವತ್‌ಲೋಕ ಗೊಂದಲಕ್ಕೆ ಬಿತ್ತು, ಒಂದು ಶತಮಾನದ ಹಿಂದಿನ ಸಂಗ್ಯಾಬಾಳ್ಯ ಕಥೆ ಹಲವು ಸಂಕೀರ್ಣತೆಯಿಂದ ಕೂಡಿದೆ. ಅಂದಮೇಲೆ ಒಂಭತ್ತು ಶತಮಾನದ ಹಿಂದಿನ ಶರಣರ ಬದುಕಿನ ಘಟನೆಗಳಿಗೆ ಎಷ್ಟು ತೇಪೆ ಹಚ್ಚಿರಬೇಕು? ಹಲವು ಮಠಗಳು ತಮ್ಮದೇ ಇತಿಹಾಸವನ್ನು ಸೃಷ್ಟಿಸಿಕೊಂಡಿವೆ. ಇವೆಲ್ಲವುಗಳನ್ನು ಶೋಧಿಸಲು ತಾಳ್ಮೆಬೇಕು. ಎಲ್.ಬಿ.ಯವರು ಬುದರಹಿಂಗ ಪದೇಕನೂರ್ ಹಾಗು ಸಂಗೂರ ಗ್ರಾಮಗಳ ಶಾಸನಗಳ ಆಧಾರದ ಮೇಲೆ ಸಿದ್ಧರಾಮನ ದೀಕ್ಷೆಯ ಬಗ್ಗೆ ದಾಖಲಿಸಿದ್ದಾರೆ. 'ಶೈವ ಹಾಗು ವೀರಶೈವ ಪುರೋಹಿತಶಾಹಿಗಳ ವ್ಯವಸ್ಥಿತ ಪುನ್ನಾರದಿಂದಾಗಿಯೇ ವಚನ ಸಾಹಿತ್ಯದಲ್ಲಿ ಸುಳ್ಳುಗಳು ಸೇರಿಹೋಗಿವೆ' ಎಂದು ನಂಗಲಿಯವರು ಬಸವರಾಜು ಅವರ ನಿರ್ಭೀತ ವಾದವನ್ನು ಬೆಂಬಲಿಸಿದ್ದಾರೆ. ಅಲ್ಲದೆ ಇದಕ್ಕೆ ಪಿ.ಎಮ್. ಗಿರಿರಾಜ್‌ರವರ ಶೋಧನೆ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡಿದ್ದಾರೆ, 'ಒಂದು ಶತ ಮಾನಕ್ಕೂ ಮಿಗಿಲು ಬಸವಾದಿ ಶರಣರಿಂದ ದೂರದಲ್ಲಿರುವ ಸಿದ್ಧರಾಮನು ಕಲ್ಯಾಣಕ್ಕೆ ಬಂದು ಇಷ್ಟಲಿಂಗ ದೀಕ್ಷೆ ಪಡೆದನೆಂಬುದು ಸುಳ್ಳು ಸೃಷ್ಟಿಯಾಗಿದೆ' ಎಂದು ಈ ವರ್ಗದವರ ವಾದವಾಗಿದೆ. ವರ್ಣ ವ್ಯವಸ್ಥೆ ಫೋರ್ ಇನ್ ಒನ್ ಕಟ್ಟುಕತೆಯಲ್ಲಿ ಮಾನವರಲ್ಲಿ ತರತಮ, ದೇವರಿಂದಲೇ ಸೃಷ್ಟಿಯಾಗಿದೆ ಎಂದು ಸುಳ್ಳು ಹೇಳಿದಂತೆ ಎಲ್. ಬಸವರಾಜು ಅವರು ಒಂದು ಸಂಕ್ಷಿಪ್ತ ವಚನದ ಉದಾಹರಣೆ ಕೊಟ್ಟಿದ್ದಾರೆ. ಪಾದದಿಂದ ಸೊಂಟದವರೆಗೆ ಅಲ್ಲಮ, ಬಸವಣ್ಣನನ್ನು ಎದೆಯಲ್ಲಿ, ಮಾಚಯ್ಯ ಕೊರಳಲ್ಲಿ ಹಾಗು ಚನ್ನಬಸವಣ್ಣನನ್ನು ತಲೆಯಲ್ಲಿ ಹೊತ್ತ ಈ ವಚನವನ್ನು ಯಾರೂ ಒಪ್ಪಲಾರರು.

ಇಂತಹ ಸಂಶೋಧನೆಗಳು ಚಿಂತನೆಯ ದೃಷ್ಟಿಯಿಂದ ಸರಿಯಿರಬಹುದು. ಆದರೆ ಹತ್ತೊಂಭತ್ತನೇ ಶತಮಾನದವರೆಗೆ ವೀರಶೈವರಿಗೆ ಬ್ರಾಹ್ಮಣರೇ ಅನುಕರಣೆಯ ಮಾಡೆಲ್ ಆಗಿದ್ದರು. ಹೀಗಾಗಿ ಸಂಸ್ಕೃತಾನುಕರಣ ಎಂಬ ಸಿದ್ಧಾಂತ ರೂಪಗೊಂಡಿತ್ತು. ಈಗ ಅವೈದಿಕ (desanskr itization) ಸಿದ್ಧಾಂತ ಚಲಾವಣೆಗೆ ಬಂದಿದೆ. ಅಲ್ಲದೆ ಲಿಂಗಾಯತ ಮಠಗಳಲ್ಲಿ ವೀರಶೈವ/ಲಿಂಗಾಯತ ಎಂಬ ಅನೌಪಚಾರಿಕ ಗುಂಪುಗಳು ಹುಟ್ಟಿಕೊಂಡಿರುವುದನ್ನು ಮರೆಯುವಂತಿಲ್ಲ.

ನೀಲಗಿರಿ ತಳವಾರರು ಕಾವ್ಯ ಕನ್ನಿಕೆಯನ್ನು ಬಸವರಾಜು ಅವರಿಗೆ ಅರ್ಪಿಸಿದ್ದಾರೆ.

'ಮಾತಿನಬ್ಬರದಲ್ಲಿ ಮುಳಗಿರಲು ಜಂಗಳಿ
ಕೃತಿಯಿಂದ ಉತ್ತರಿಸಿ ತೃಪ್ತಿಗೊಂಡವರು
ಕಛೇರಿ ಪರಿಚಾರಕರ ಪಂಚಮರ
ಬೀದಿ ಬದಿಯ ಅಮಾಯಕರ
ಎತ್ತಿ ಆನಂದಿಸಿದವರು."

ಎಂದು ಬಸವರಾಜು ಅವರ ತಳವರ್ಗದ ಪ್ರೀತಿಯನ್ನು ಗುರುತಿಸಿದ್ದಾರೆ. ಪುಸ್ತಕದ ಕೊನೆಗೆ ಕಗ್ಗೆರೆ ಪ್ರಕಾಶರು ಬಸವರಾಜು ಅವರ ಬದುಕು ಬರಹಗಳ ವಿಸ್ತೃತ ಪರಿಚಯ ನೀಡಿದ್ದಾರೆ.

ಚಿತ್ರದುರ್ಗದ ಸಮ್ಮೇಳನ ಏಕೆ ಸೋತಿತು ಎಂಬುದಕ್ಕೆ ಹಲವು ಕಾರಣಗಳಿರಬಹುದು. ಕನ್ನಡಿಗರು ಕಾಲಗತಿಯಲ್ಲಿ ಈ ಸೋಲುಗಳನ್ನು ಮರೆಯಬಹುದು. ಆದರೆ ಗೌರಿ ಲಂಕೇಶರು ಹಲವು ಮೂಲದಿಂದ ಸಂಗ್ರಹಿಸಿದ 'ಬಸವ ರಾಜ ಮಾರ್ಗ' ನಿರಂತರ ನೆನಪಿನಲ್ಲಿ ಉಳಿಯುತ್ತದೆ. ■

ಡಾ. ಶಿವಶಿವಾ ಅವರಿಗೆ ಉತ್ತರ

ರಾಜಧಾನಿಯ ಮತ್ತೊಂದು ಪತ್ರಿಕೆಯ ವಾಚಕರ ವಾಣಿಗೆ ನಾನು ಬರೆದ ಪತ್ರಕ್ಕೆ ಅದೇ ಪತ್ರಿಕೆಗೆ ಬರೆಯದೆ ಡಾ. ಶಿವಮೂರ್ತಿ ಶಿವಾಚಾರ್ಯರು (ಇನ್ನು ಮುಂದೆ ಸಂಕ್ಷಿಪ್ತ ನಾಮ: ಡಾ. ಶಿವಶಿವಾ) ವಿಜಯ ಕರ್ನಾಟಕದ ತಮ್ಮ ಅಂಕಣದಲ್ಲಿ ಉತ್ತರಿಸಿದ್ದಾರೆ. Over to Champa (ಓವರ್ ಟು ಚಂಪಾ) ಎಂದಿರುವ ಅವರ ಸವಾಲು ಸ್ವೀಕರಿಸಿದ ನನ್ನ ಪ್ರತಿಕ್ರಿಯೆ ಇದು:



1. ನಾನು ಮತ್ತೊಮ್ಮೆ ಕಸಾಪ ಅಧ್ಯಕ್ಷತೆಗೆ ಸ್ಪರ್ಧಿಸುವುದು ನನ್ನ ಆತ್ಮೀಯ ಬಳಗದಲ್ಲಿ ಚರ್ಚೆಯಾಗುತ್ತಿರುವ ವಿಷಯ. ಧಾರ್ಮಿಕ ವಲಯದ ಅನೇಕರು ಈ ಬಳಗದಲ್ಲಿದ್ದಾರೆ. ಸುದ್ದಿಯನ್ನು ಮುಂಗಡವಾಗಿ ಕರ್ನಾಟಕದ ನಂಬರ್ ಒನ್ ಪತ್ರಿಕೆ ಮೂಲಕ ಲೋಕಕ್ಕೆ ಬಿತ್ತರಿಸಿದ ಸಾಧುವಯ್ಯ ಡಾ. ಶಿವಶಿವಾ ಅವರಿಗೆ ನಮೋನಮೋ. ಅಭ್ಯರ್ಥಿಯಾದವರು ಯಾವುದೇ ಮಠಾದೀಶರಿಂದಾಗಲಿ, ಕರ್ಮಠಾಧೀಶರಿಂದಾಗಲಿ ಬೆಂಬಲ ಕೇಳುವುದು-ಕಸಾಪ ಮತದಾರರ ಪಟ್ಟಿಯಲ್ಲಿ ಅವರ ಹೆಸರೂ ಇರುವುದರಿಂದ ಮಾತ್ರ. ಡಾ. ಶಿವಶಿವಾ ಅವರನ್ನೂ ಕೇಳಲಿದ್ದೇನೆ. ಬೆಂಬಲ ಕೊಡುವುದು ಬಿಡುವುದು ಅವರವರ ಕರ್ಮ.

2. "ಸಿರಿಗರ ಹೊಡೆಸಿಕೊಂಡ ಧಾರ್ಮಿಕ ವಲಯದ ಸ್ವಾಮಿಗಳ ಕಿತಾಪತಿ"- ಎಂದು ಬರೆಯುವಾಗ ನಾನು ಯಾರ ಹೆಸರನ್ನೂ ಪ್ರಸ್ತಾಪಿಸಿರಲಿಲ್ಲ, ಆದರೆ ಸಿರಿಗೆರೆ ಮಠದ ಡಾ. ಶಿವಶಿವಾ ಅವರು ಕುಂಬಳಕಾಯಿ ಕಳ್ಳನ ಹಾಗೆ ಹೆಗಲು ಮುಟ್ಟಿಕೊಂಡಿದ್ದಾರೆ!

3. ಜನವರಿ 1999 ರ ಹೊಸದುರ್ಗ ಸಮ್ಮೇಳನದ ಪ್ರಸಂಗ ಉಲ್ಲೇಖಿಸಿ ಡಾ. ಶಿವಶಿವಾ ಅವರು "ಎಲ್‌ಬಿ ಅವರನ್ನು ಕುರಿತ ನಮ್ಮ ಮಾತಾದರೂ ಚಂಪಾ ಅವರ ಮಾತಿನ ಪ್ರತಿಧ್ವನಿಯೋ ಹೊರತು ಬೇರೇನೂ ಅಲ್ಲ"-ಎಂದು ನನ್ನ ಬೆನ್ನ ಹಿಂದೆ ಅಡಗಿಕೊಳ್ಳಲು ಪ್ರಯತ್ನಿಸಿದ್ದಾರೆ. ಹಾಗಾದರೆ ಜಾಣಾಕ್ಷಮತಿಯ ಈ ಸ್ವಾಮೀಜಿಗಳಿಗೆ ಸ್ವಂತ ವಿಚಾರ, ಸ್ವಂತ ಧ್ವನಿ, ಸ್ವಂತ ಬುದ್ಧಿ ಇಲ್ಲವೇ ಇಲ್ಲ ಎಂಬ ತೀರ್ಮಾನಕ್ಕೆ ಬರೋಣವೇ?

4. ಡಾ. ಶಿವಶಿವಾ ಅವರ ವಿದ್ಯೆಯ ಬಗ್ಗೆ ಗೌರವ ಇದೆ. ಆದರೆ ವಿದ್ಯೆಗೆ ತಕ್ಕ ವಿನಯ ಇಲ್ಲ. ಅವರು ಜರ್ಮನಿಯ ಬದಲಾಗಿ ಇಂಗ್ಲೆಂಡಿಗೆ ಹೋಗಿದ್ದರೆ ಚೆನ್ನಾಗಿತ್ತು, ಜರ್ಮನಿಯ ಜ್ಞಾನದೊಂದಿಗೆ ಅವರು ಹಿಟ್ಲರ್-ಪ್ರಜ್ಞೆಯನ್ನೂ ತಂದ ಹಾಗಿದೆ. ಚಿತ್ರದುರ್ಗ ಸಮ್ಮೇಳನದಲ್ಲಿ ಅವರು ಓದಿದ ಆತ್ಮಸ್ತುತಿ ಪದ್ಯವೇ ಇದಕ್ಕೆ ಉದಾಹರಣೆ. ಅದರಲ್ಲಿ ಹೇಂಕಾರ ಇತ್ತು; ಕಾವ್ಯ ಇರಲಿಲ್ಲ. "ಎಲ್ಲವೂ ನಾನೇ, ನನ್ನಿಂದಲೇ, ನನಗಾಗಿಯೇ"-ಇದು ಹಿಟ್ಲರ್ ಪ್ರಜ್ಞೆ.

5. ಒಂದು ಸಮುದಾಯದ ಒಂದು ಪಂಗಡದ ತ.ಬಾ.ಹು. ಮಹೋತ್ಸವವನ್ನು ಡಾ. ಶಿವಶಿವಾ ಅವರು ಸಮಸ್ತ ಕನ್ನಡ ಕುಲಕೋಟಿಯ ಅಖಿಲ ಭಾರತ ಸಮ್ಮೇಳನಕ್ಕೆ ಹೋಲಿಸಿರುವುದು ಹಾಸ್ಯಾಸ್ಪದ. (ಮಹಾಕಾವ್ಯಕ್ಕೆ ಚುಟುಕವನ್ನು ಹೋಲಿಸಿದ ಹಾಗೆ) ಸಾಹಿತ್ಯ ಸಮ್ಮೇಳನದ ಪ್ರತಿ ಹಂತದಲ್ಲೂ ಮೂಗು ತೂರಿಸಲು ಪ್ರಯತ್ನಿಸಿದ ಈ ಸ್ವಾಮಿಗಳಿಗೆ ನಾಶಿಕ-ಭಂಗವಾದದ್ದು ಸಹಜವೇ. ಇನ್ನಾದರೂ ಈ ಮಹಾಶಯರು ತಮ್ಮ ಅಹಂಕಾರದ ಆವರಣದಿಂದ ಹೊರಬಂದು ಬಸವ ಸಂಸ್ಕೃತಿಯ ಸಹಜ ವಿನಯವನ್ನು ಅಳವಡಿಸಿಕೊಳ್ಳಲಿ-ಎಂದು ಹಾರೈಸುವೆ

■ ಚಂದ್ರಶೇಖರ ಪಾಟೀಲ

ಕಡಿದಾಳು ಶಾಮಣ್ಣ


ಕಾಡ ತೊರೆಯ ಜಾಡು 9



ಅಕ್ಷರ ರೂಪ: ಅಕ್ಷತಾ ಕೆ.

...ರಾವರಿ ಅಭಿವೃದ್ಧಿ ತೆರಿಗೆಯನ್ನು ವಿರೋಧಿಸಿ ...ನವಲಗುಂದದ ರೈತರು 1980 ರ ಜುಲೈ ... ಒಂದು ದಿನ ಅಲ್ಲಿನ ತಹಶೀಲ್ದಾರ್ ಕಚೇರಿಗೆ ... ಕೊಡಲು ಹೋದರು. ಎರೆಮಣ್ಣಿನ ಆ ... ನೀರಾವರಿಯಿಂದಾಗಿ ರೈತರಿಗೆ ಅಂತಹ ...ಲಾಭಗವೇನಾಗಿರಲಿಲ್ಲವಾದರೂ ನೀರಾವರಿ ...ೃದ್ಧಿ ತೆರಿಗೆಯನ್ನಂತೂ ಕಟ್ಟುನಿಟ್ಟಾಗಿ ಸರ್ಕಾರ ... ಮಾಡುತ್ತಿತ್ತು. ತೆರಿಗೆ ಕಟ್ಟದ ಪಕ್ಷದಲ್ಲಿ ...ರಿಗಳು ರೈತರ ಮನೆ, ಆಸ್ತಿ ಪಾಸ್ತಿಗಳನ್ನು ಜಪ್ತಿ ...ತ್ತಿದ್ದರು.

...ವರಿಂದ ನೊಂದ ರೈತರು ಆವತ್ತಿನ ದಿನ ಅಹ... ಸಲ್ಲಿಸಲು ಹೋದರೆ ತಹಶೀಲ್ದಾರ್ ಏನು ...ಕೂಡಾ ವಿಚಾರಿಸದೇ ...ನ ಮಾತಾಡುತ್ತಾ ಕಚೇರಿ ... ಉಳಿದ. ಅಂದು ...ನಂತ ಅತಿ ಹೆಚ್ಚಿನ ಸಂಖ್ಯೆ ...ಸಾವಿರಾರು ಜನ ತಹಶೀ... ಕಚೇರಿ ಎದುರಿಗೆ ಸೇರಿ ...ಕಮ್ಯುನಿಸ್ಟ್ ಪಕ್ಷದ ಹಳಕಟ್ಟಿ ...ವರು ಇವರನ್ನೆಲ್ಲ ಲೀಡ್ ...ದ್ದರು. ತಹಶೀಲ್ದಾರರ ಉದ್ಧಟತನದ ವರ್ತನೆ ... ಸಿಟ್ಟಿಗೆದ್ದ ಹಳಕಟ್ಟಿ "ನುಗ್ರೋ ಒಳಗೆ ಏನು ...ನೆ ನೋಡೋಣ'' ಅಂದ್ರು. ಈ ಮಾತಿಗೆ ... ಕಾಯ್ತಾ ಇದ್ರೇನೋ ಅನ್ನೋ ಹಾಗೆ ನುಗ್ಗಿ ...ಲ್ದಾರರನ್ನ ಹೊರಗೆ ಎಳೆದುಕೊಂಡು ಬಂದ್ರು. ...ಷ್ಟೊತ್ತಿಗೆ ಪೊಲೀಸ್ ಪಡೆ ಬಂದು ನಿಂತಿತ್ತು. ... ಚಾರ್ಜು ಅಲ್ಲ ಏಕದಂ ಗೋಲಿಬಾರ್‌ಗೆ ... ನೀಡಿದರು. ಗೋಲಿಬಾರ್ ಆಗಿ ಇಬ್ಬರು ... ಹತ್ಯೆಯಾಯಿತು. ಉಳಿದ ಪ್ರತಿಭಟನಾಕಾರರು ...ತೋಚದೆ ಅಲ್ಲಿಂದ ಓಡಿಹೋದರು. ಅಲ್ಲಿಗೂ ... ಪೊಲೀಸರು ಮನೆಮನೆಗೂ ನುಗ್ಗಿ ಯಾರ್‍ಯಾರು ...ಎ ಕೊಡಕ್ಕೆ ಹೋಗಿದ್ದರೋ ಅವರನ್ನ ...ಕೊಂಡು ಬಂದು ಬಂಧಿಸಿದರು.



...ಮಗೆ ಆವತ್ತೆ ಸಂಜೆ ಗೋಲಿಬಾರ್ ಆಗಿ ರೈತರು ... ನಾವೇ ಮಾಡಬೇಕು ಎಂದು ನಿರ್ಧರಿಸಿದೆವು.

ಅಲ್ಲಿಂದ ಮರಳಿದವರೇ ಮತ್ತೆ ಸಭೆ ನಡೆಸಿ ಸತ್ತ ರೈತರ ಸ್ಮರಣಾರ್ಥ ವೀರಗಲ್ಲು ನೆಡಲು ನಿರ್ಧರಿಸಿದೆವು. ಜೊತೆಗೆ ಆ ರೈತರು ಎದುರಿಸುತ್ತಿದ್ದ ನೀರಾವರಿ ಅಭಿವೃದ್ಧಿ ತೆರಿಗೆ ಸಮಸ್ಯೆ ನಮ್ಮ ಭಾಗದ ರೈತರನ್ನು ಕಾಡುತಿತ್ತು. ಒಂದಲ್ಲ ಒಂದು ದಿನ ನರಗುಂದದಲ್ಲಿ ನಡೆದ ದುರ್ಘಟನೆಯೇ ಇಲ್ಲಿಯೂ ಸಂಭವಿಸಿದ್ದರೆ ಆಶ್ಚರ್ಯವೇನಿರಲಿಲ್ಲ. ಆದ್ದರಿಂದ ರೈತರ ಮೇಲೆ ದೌರ್ಜನ್ಯ ನಡೆಯದಂತೆ ನೋಡಿಕೊಳ್ಳಬೇಕಾದರೆ ರೈತರೆಲ್ಲ ಸಂಘಟಿತರಾಗಬೇಕು ಎಂಬ ಆಲೋಚನೆ ಬಂತು. ಗೋಲಿಬಾರ್‌ನಲ್ಲಿ ಮೃತರಾದ ರೈತರ ಕುಟುಂಬದವರಿಗೆ ಸೂಕ್ತ ಪರಿಹಾರ ಕೊಡಬೇಕು; ಬಂಧನದಲ್ಲಿರುವ ರೈತರನ್ನು ಯಾವುದೇ ನಿರ್ಬಂಧವಿಲ್ಲದೇ ಬಿಡುಗಡೆ ಮಾಡಬೇಕು; ನೀರಾವರಿ ಅಭಿವೃದ್ಧಿ ತೆರಿಗೆ ಕೈ ಬಿಡಬೇಕು; ಕೃಷಿ ಪಂಪ್ ಸೆಟ್ಟಿಗೆ ವಿದ್ಯುತ್ ಶುಲ್ಕ ವಿಧಿಸಬಾರದು ಇವೇ ಮುಂತಾದ ಹತ್ತೊಂಬತ್ತು ಬೇಡಿಕೆಗಳನ್ನಿಟ್ಟುಕೊಂಡು ಶಿವಮೊಗ್ಗ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಸರದಿ ಉಪವಾಸ ಸತ್ಯಾಗ್ರಹ ನಡೆಸಲು ನಿರ್ಧರಿಸಲಾಯಿತು.

ಕಬ್ಬು ಬೆಳೆಗಾರರ ಒಕ್ಕೂಟ ಎಂದರೆ ತುಂಬಾ ಸೀಮಿತ ಅರ್ಥವನ್ನು ಸೂಚಿಸುತ್ತದೆ ಎಂಬ ಕಾರಣಕ್ಕೆ ರೈತ ಹಾಗೂ ರೈತ ಕಾರ್ಮಿಕ ಸಂಘ ಎಂಬ ಹೆಸರಿನಲ್ಲಿ ಒಕ್ಕೂಟ ಮಾಡಿಕೊಂಡ್ವಿ. ಸರದಿ ಉಪವಾಸ ಸತ್ಯಾಗ್ರಹದ ಬಗ್ಗೆ ಹಳ್ಳಿಹಳ್ಳಿಗೂ ಹೋಗಿ ಪ್ರಚಾರ ನಡೆಸಿ ಹೋರಾಟದ ಕಾವು ಸೃಷ್ಟಿಯಾಗೋ ಹಾಗೆ ನೋಡಿಕೊಂಡ್ವಿ. ಜಿಲ್ಲಾಧಿಕಾರಿ ಕಚೇರಿ ಮುಂದೆ ಒಂದೊಂದು ಹಳ್ಳಿಯವರು ಒಂದೊಂದು ದಿನ ಸರದಿ ಉಪವಾಸ ಸತ್ಯಾಗ್ರಹಕ್ಕೆ ಕುಳಿತರು. ಎಲ್ಲ ಕಡೆಯು ಸರದಿ ಉಪವಾಸ ಸತ್ಯಾಗ್ರಹದ ವಿಷಯ ಹಬ್ಬತೊಡಗಿತು. ಒಮ್ಮೊಮ್ಮೆಗೆ ಎರಡು ಮೂರು ಊರಿನವರು ಸರದಿ ಉಪವಾಸಕ್ಕೆ ಕೂರತೊಡಗಿದರು. ಮತ್ತೊಂದು ಕಡೆ ಬಹಳಷ್ಟು ಗ್ರಾಮಸ್ಥರು ಇಪ್ಪತ್ನಾಲ್ಕು ಗಂಟೆಯ ಸರದಿ ಉಪವಾಸ ಮುಗಿದರೂ ಊರಿಗೆ ಹೋಗದೆ ಉಪವಾಸ ಮುಂದುವರೆಸಿದರು. ಹೆಂಗಸರು, ಮಕ್ಕಳು ಆದಿಯಾಗಿ ಎಲ್ಲರೂ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳತೊಡಗಿದರು. ಉಪವಾಸ ಸತ್ಯಾಗ್ರಹ ಮುಗಿಸಿದವರಿಗೆ ಅವರವರ ಊರಿನ ಹೆಣ್ಣುಮಕ್ಕಳು ಬುತ್ತಿ ಕಟ್ಟಿಕೊಂಡು ತಂದುಕೊಡಬೇಕಿತ್ತು, ಬುತ್ತಿ ತಂದುಕೊಡುವವರ ಸಂಖ್ಯೆ ಹೆಚ್ಚಾಗುತ್ತಲೇ ಹೋಯಿತು. ರೈತ ಹೋರಾಟವೆಂಬುದು ನಿಜಕ್ಕೂ ಹೆಣ್ಣು ಗಂಡು, ಜಾತಿ, ಧರ್ಮ ಎಲ್ಲವನ್ನು ಮೀರಲು ಒಂದು ರೀತಿಯ ವೇದಿಕೆಯಾಗತೊಡಗಿತು.

ಉಪವಾಸ ಸತ್ಯಾಗ್ರಹದ ಬಗ್ಗೆ ಹಳ್ಳಿಹಳ್ಳಿಗೆ ಹೋಗಿ ಜನರಿಗೆ ತಿಳಿಸೋದು, ಸತ್ಯಾಗ್ರಹದ ಫೋಟೊ ತೆಗೆದು ವರದಿ ತಯಾರಿಸಿ ಲಂಕೇಶ್ ಪತ್ರಿಕೆಗೆ ಕಳುಹಿಸುವುದು ಈ ಸಂದರ್ಭದ ನನ್ನ ಮುಖ್ಯ ಕೆಲಸವಾಗಿತ್ತು, ಇದೇ ಸಂದರ್ಭದಲ್ಲಿ ಜೆ.ಪಿ. ಬಸವರಾಜು ಅವರು ಪ್ರಜಾವಾಣಿಯ ವರದಿಗಾರರಾಗಿ ಶಿವಮೊಗ್ಗಕ್ಕೆ ಆಗ ತಾನೇ ಬಂದಿದ್ದರು. ರೈತ ಚಳವಳಿಯ ಬಗ್ಗೆ ತೀವ್ರ ಆಸಕ್ತಿ ಹೊಂದಿದ್ದ ಅವರ ವಸ್ತುನಿಷ್ಠ ವರದಿಗಳು ಪ್ರಜಾವಾಣಿ ಪತ್ರಿಕೆಯ ಮೂಲಕ ಅಕ್ಷರಸ್ಥರನ್ನು ತಲುಪತೊಡಗಿದವಲ್ಲದೆ ರೈತ ಚಳವಳಿಗೆ ಎಲ್ಲೆಡೆ ಬೆಂಬಲ ವ್ಯಕ್ತವಾಗುವಂತೆ ನೋಡಿಕೊಂಡವು. ಮತ್ತೊಂದೆಡೆ ಲಂಕೇಶ್ ಪತ್ರಿಕೆ ಕೂಡಾ ರೈತ ಚಳವಳಿಯ ವರದಿಗೆ ಬಹಳ ಪ್ರಾಮುಖ್ಯತೆ ಕೊಟ್ಟಿತು. ನಾವು ಬೆಂಗಳೂರಿಗೆ ಜಾಥಾ ಹೋದಾಗ ರೈತರು ಬರುತಿದ್ದಾರೆ, ಅವರಿಗೆ ಹೊಟ್ಟೆ ತುಂಬಾ ಊಟ ಹಾಕುವ ಜವಾಬ್ದಾರಿ ನಿಮ್ಮದು ಎಂದು ಲಂಕೇಶರು ಪತ್ರಿಕೆಯಲ್ಲಿ ಬರೆದ ನಾಲ್ಕು ಸಾಲಿಗೆ ಎಂತಹ ಜನಸ್ಪಂದನ ದೊರೆತಿದ್ದೆಂದರೆ ಬೆಂಗಳೂರಿನ ಮನೆ ಮನೆಯವರು ನಮ್ಮನ್ನು ಕರೆದು ಸತ್ಕರಿಸಿದ್ದರು.

ಉಪವಾಸ ಸತ್ಯಾಗ್ರಹ ಮುಂದುವರೆದೇ ಇತ್ತು. ಸರ್ಕಾರದ ವತಿಯಿಂದ ವೀರಪ್ಪ ಮೊಯ್ಲಿ, ಬಂಗಾರಪ್ಪ ಮತ್ತಿತರರು ರಾಯಭಾರಿಗಳಾಗಿ ಸಂಧಾನಕ್ಕೆ ಬಂದರಾದರೂ ಹತ್ತೊಂಬತ್ತು ಬೇಡಿಕೆಗಳ ಈಡೇರಿಕೆಗೆ ಸರ್ಕಾರ ಸಮ್ಮತಿ ನೀಡಲೇಬೇಕು ಆಗಲೇ ಧರಣಿ ಸತ್ಯಾಗ್ರಹ ಹಿಂತೆಗೆದುಕೊಳ್ಳುವುದು ಎಂದು ಪಟ್ಟು ಹಿಡಿದೆವು. ಅವರು ಬರಿಗೈಯಲ್ಲಿ ಹಿಂತಿರುಗಿದರು. ಇಷ್ಟರ ಮಧ್ಯೆ ನಂಜುಂಡಸ್ವಾಮಿಯವರನ್ನು ಹೋರಾಟಕ್ಕೆ ಕರೆತರಬೇಕು ಎಂಬುದು ಬಹುತೇಕ ರೈತ ಹೋರಾಟಗಾರರ ಏಕಾಭಿಪ್ರಾಯವಾಗಿತ್ತು. ಸುಂದರೇಶ್, ನಾಗರಾಜ್ ಮತ್ತು ಭದ್ರಪ್ಪ ಮೂವರು ಹೋಗಿ ನಂಜುಂಡಸ್ವಾಮಿಯವರನ್ನ ಕರೆದರೆ ಅವರಿದ್ದೋರು ನನ್ನ ಹತ್ರ ಈ ರೈತರನ್ನ ಕಟ್ಕೊಂಡು ಏಗಕ್ಕಾಗಲ್ಲ ಅಂತ ನಿರಾಕರಿಸಿದರು. ನಾನು ಲಂಕೇಶರಿಗೆ ಒಂದು ಪತ್ರ ಬರೆದು "ಗಾಂಧಿ ಜಯಂತಿ ದಿನ ಬೃಹತ್ ಸಭೆ ನಡೆಸಿ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿದ್ದೇವೆ. ನೀವು ಅಂದು ನಂಜುಂಡಸ್ವಾಮಿ ಮತ್ತು ಶಂಕ್ರಪ್ಪರನ್ನು ಕರೆದುಕೊಂಡು ಬರಲೇಬೇಕು. ನೀವು ರೈತರಿಗೆ ಹುಟ್ಟಿದವರಾದರೆ ಬಂದೇ ಬರುತ್ತೀರಿ'' ಅಂತಾ ಹೇಳಿದೆ. ಬೇಕಂತಲೇ 'ರೈತರಿಗೆ ಹುಟ್ಟಿದವರಾದರೆ' ಅನ್ನೋ ಪದವನ್ನೇ ಉಪಯೋಗಿಸಿದ್ದೆ. ಲಂಕೇಶರೇ ಟ್ಯಾಕ್ಸಿ ಮಾಡಿಕೊಂಡು ನಂಜುಂಡಸ್ವಾಮಿ ಮತ್ತು ಶಂಕ್ರಪ್ಪರನ್ನು ಕರೆತಂದಿದ್ದರು. ಅಂದಿನ ಸಭೆಯಲ್ಲಿ ಸುಮಾರು ಇಪ್ಪತ್ತೈದು ಸಾವಿರ ರೈತ ಹೋರಾಟಗಾರರು ಸೇರಿದ್ದರು. ಸಭೆಗೆ ಜಾರ್ಜ್ ಫರ್ನಾಂಡಿಸ್‌ರನ್ನು ಅವರ ಸೋಷಿಯಲಿಸ್ಟ್ ಗೆಳೆಯರಾದ ರವಳಪ್ಪ, ಪೊನ್ನಮ್ಮಾಳ್ ಮತ್ತಿತರರು ಕರೆತಂದಿದ್ದರು. ಆದರೆ ನಂಜುಂಡಸ್ವಾಮಿ ಇದ್ದವರು ಜಾರ್ಜ್‌ರನ್ನು ವೇದಿಕೆಯ ಮೇಲೆ ಕೂರಿಸಲು ಸಮ್ಮತಿಸಲಿಲ್ಲ. ಯಾವ ರಾಜಕಾರಣಿಗೂ ಈ ವೇದಿಕೆಯಲ್ಲಿ ಜಾಗ ಇಲ್ಲ ಅಂಥ ನಿರ್ದಾಕ್ಷಿಣ್ಯವಾಗಿ ಹೇಳಿದರು. ಹಾಗಂತ ನಮ್ಮ ಸಮಿತಿಯವರು ನಿರ್ಧರಿಸಿದ್ದಲ್ಲ, ನಂಜುಂಡಸ್ವಾಮಿಯವರೇ ಆ ಕ್ಷಣದಲ್ಲಿ ತೆಗೆದುಕೊಂಡ ನಿರ್ಧಾರವದು ಮತ್ತು ನಮಗೆಲ್ಲರಿಗೂ ಆ ನಿರ್ಧಾರ ಸರ್ವಸಮ್ಮತವಾಗಿತ್ತು. ಜಾರ್ಜ್‌ರನ್ನು ಕೊನೆಗೂ ವೇದಿಕೆ ಮೇಲೆ ಕೂರಿಸಲಿಲ್ಲ, ಈ ದಿನದಿಂದ ರೈತ ಹೋರಾಟಕ್ಕೆ ನಂಜುಂಡಸ್ವಾಮಿಯವರ ಸಕ್ರಿಯ ಪ್ರವೇಶವಾಯಿತು.



'ಧರಣಿ ತೆಗೀರಿ ಮಾತುಕತೆಗೆ ಕರೀತಿವಿ' ಅಂತ ಸರ್ಕಾರ ಘೋಷಿಸಿತ್ತು, 'ಬೆಳಗ್ಗಿಯಿಂದ ಧರಣಿ ತೆಗೆದಿದ್ದೀವಿ ಆದರೂ ಮಾತುಕತೆಗೆ ಕರೆದಿಲ್ಲ, ನಾಳೆಯಿಂದ ರಸ್ತೆ ತಡೆ ಚಳವಳಿ ನಡೆಯಲಿದೆ. ಶಿವಮೊಗ್ಗ ನಗರಕ್ಕೆ ನಾಳೆಯಿಂದ ಹಾಲು, ತರಕಾರಿ, ಕಟ್ಟಿಗೆ ಯಾವ ವಸ್ತುಗಳು ಬರಬಾರದು. ಯಾವ ರೈತರು ಇವುಗಳನ್ನು ತಂದು ಕೊಡಬಾರದು. ಹಾಗೇನಾದರೂ ಯಾರಾದ್ರೂ ಹಾಲು ಇತ್ಯಾದಿಗಳನ್ನು ಮಾರಾಟ ಮಾಡಿದ್ದು ತಿಳಿದರೆ ಅವರಿಗೆ ಹಳ್ಳಿಯವರೇ ದಂಡ ಹಾಕಬೇಕು' ಎಂದು ಗಾಂಧಿ ಜಯಂತಿಯ ದಿನದ ಸಭೆಯಲ್ಲಿ ಕರೆಕೊಡಲಾಯಿತು. ಅಂದಿಗೆ ನಲವತ್ತೆಂಟು ದಿನಗಳ ಸತತ ಸರದಿ ಉಪವಾಸ ಸತ್ಯಾಗ್ರಹ ಮುಗಿದು ಮತ್ತೊಂದು ಹೋರಾಟಕ್ಕೆ ರೈತ ಹೋರಾಟಗಾರರು ಸಜ್ಜಾಗಿದ್ದೆವು. ಮರುದಿನದಿಂದಲೇ ಶಿವಮೊಗ್ಗ ನಗರಕ್ಕೆ ಪ್ರವೇಶ ನೀಡುವ ಪುರಲೆ, ಮಲವಗೊಪ್ಪ ಆಯನೂರು, ಗಾಜನೂರು, ಸೂಗೂರು ಗ್ರಾಮಗಳಲ್ಲಿ ರಸ್ತೆ ತಡೆ ಚಳವಳಿ ಹಮ್ಮಿಕೊಂಡ್ವಿ. ನಗರದ ಜನ ಕಂಗಾಲಾಗತೊಡಗಿದರು. ಹಾಲಿಲ್ಲ, ತರಕಾರಿ ಇಲ್ಲ, ಆ ವಾರದ ಸಂತೆ ನಡೀಲಿಲ್ಲ, ಹೊಟೇಲ್‌ಗಳು ವಿಧಿಯಿಲ್ಲದೆ ಬಾಗಿಲು ಮುಚ್ಚತೊಡಗಿದವು. ಸರ್ಕಾರ ಮಾತುಕತೆಗೆ ಕರೆಯೋ ಬದಲು ಹೋರಾಟಗಾರರನ್ನು ಜೈಲಿಗೆ ತುಂಬ ತೊಡಗಿತು. ಸರ್ಕಾರ ಜೈಲಿಗೆ ತುಂಬಿದಷ್ಟು ಹೋರಾಟದ ಸಾಗರಕ್ಕೆ ಜಿಗಿಯುವ ರೈತರ ಸಂಖ್ಯೆ ಹೆಚ್ಚಾಗೋಕೆ ಶುರುವಾಯಿತು. ಎಲ್ಲಿ ನೋಡಿದರೂ ಬಸ್ಸು, ಲಾರಿ ವಾಹನಗಳನ್ನು ರೈತರು ತಡೆಹಿಡಿಯತೊಡಗಿದರು. ಪಿಕೆಟಿಂಗ್ ಪ್ರಾರಂಭಿಸಿ ಸರ್ಕಾರಿ ಕಚೇರಿಗಳನ್ನು ಮುಚ್ಚೋ ಹಾಗೆ ಮಾಡಿದರು. ರೈತರಿಂದ ಜೈಲುಗಳು ತುಂಬತೊಡಗಿದವು. ನಮ್ಮನ್ನೆಲ್ಲ ಶಿವಮೊಗ್ಗ ಜೈಲಿಗೆ ಹಾಕಿದರು. ಶಿವಮೊಗ್ಗ ಜೈಲಿನಲ್ಲಿ ಜಾಗ ಇಲ್ಲದೆ ಬೆಳಗಾವಿ, ಬಳ್ಳಾರಿ ಜೈಲಿಗೂ ಸಾವಿರಾರು ರೈತರನ್ನು ರವಾನಿಸಲಾಯಿತು. 'ಓ ರೈತ ಎಲ್ಲಿಗೆ? ಗುಂಡೂರಾವ್ ಜೈಲಿಗೆ' ಅನ್ನೋದು ಎಲ್ಲರ ಬಾಯಲ್ಲಿನ ಸೊಲ್ಲಾಯಿತು. ಹಾಗೆ ಕೂಗ್ತಾನೆ ರೈತರು ಹುರುಪಿನಿಂದ ಜೈಲಿಗೆ ಹೋಗೋಕೆ ಪ್ರಾರಂಭಿಸಿದರು. ಜೈಲಿಗೆ ಹೊರಟ ರೈತರಿಗೆ ಹೆಂಗಸರು ಮಕ್ಕಳು ಆರತಿ ಬೆಳಗಿ ಕಳುಹಿಸಿದಂತ ಘಟನೆಗಳು ನಡೆದವು. ಮ್ಯಾಜಿಸ್ಟ್ರೇಟ್ ಸಾಹೇಬರು ರಾತ್ರೋರಾತ್ರಿ ಬಿಡುಗಡೆ ಮಾಡಿ ಕಳುಹಿಸಬೇಕಾದ ಸಂದರ್ಭಗಳು ಬಂದೊದಗಿದವು. ಯಾಕೆಂದರೆ ಮತ್ತೆ ಬೆಳಗಿಗೆ ವಿಚಾರಣೆ ಇಟ್ಟುಕೊಂಡರೆ ಅಷ್ಟು ಸಂಖ್ಯೆಯ ಬಂಧಿತ ರೈತರಿಗೆ ಊಟ ವಸತಿ ಏರ್ಪಡಿಸಬೇಕಾಗುತ್ತಿತ್ತು. ಮ್ಯಾಜಿಸ್ಟ್ರೇಟರು ತಪ್ಪೊಪ್ಪಿಗೆ ಬರೆದುಕೊಡಲು ಹೇಳಿದರೆ ನಾವು ರೈತರು "ನಾವೇನು ತಪ್ಪು ಮಾಡಿಲ್ಲ, ನಾವು ಬರೆದುಕೊಡಲ್ಲ. ಬೇಕಿದೆ ಮತ್ತೆ ಜೈಲಿಗೆ ಕಳಿಸಿ, ನಾವು ಹೋಗಲು ತಯಾರಿದ್ದೀವಿ'' ಎಂದು ಹೇಳತೊಡಗಿದ್ವಿ. ಯಾವುದೇ ನಿರ್ಬಂಧನೆಗಳಿಲ್ಲದೆ ಬಿಡುಗಡೆ ಮಾಡುವುದಾದರೆ ಮಾಡಿ ಎನ್ನತೊಡಗಿದವು. ಕೊನೆಗೂ ಸರ್ಕಾರ ಎಚ್ಚೆತ್ತು ರಸ್ತೆ ತಡೆ ನಿಲಿಸಿ ಮಾತುಕತೆಗೆ ಬನ್ನಿ ಎಂದು ರೈತ ಹೋರಾಟಗಾರರನ್ನು ಆಹ್ವಾನಿಸಿತು.

'ಓ ರೈತ ಎಲ್ಲಿಗೆ? ಗುಂಡೂರಾವ್ ಜೈಲಿಗೆ'

...ಸುದ್ದಿ ತಲುಪಿತು. ಮರುದಿನ ಬೆಳಗ್ಗೆಯೇ ಕಬ್ಬು ...ಗಾರರ ಸಂಘದಿಂದ ಘಟನೆಯನ್ನು ಖಂಡಿಸಿ ...ಮೊಗ್ಗದಲ್ಲಿ ಮೌನ ಮೆರವಣಿಗೆ ಏರ್ಪಡಿಸಿದ್ವಿ. ...ರಾತ್ರೋರಾತ್ರಿ ಓಡಾಡಿ ಹಳ್ಳಿಹಳ್ಳಿಗೂ ಸುದ್ದಿ ಕೊಟ್ವಿ. ...ದಿನ ಐದಾರು ಸಾವಿರ ಜನ ಬಾಯಿಗೆ ಕಪ್ಪುಬಟ್ಟೆ ...ಕೊಂಡು ಮೌನ ಮೆರವಣಿಗೆ ನಡೆಸಿದ್ವಿ. ರೈತರೆಲ್ಲ ...ಘಟಿತರಾಗಿ ಶಿಸ್ತಿನಿಂದ ಚಳವಳಿ ನಡೆಸಿದ್ದು ಬಹುಶಃ ...ರ್ನಾಟಕದ ಇತಿಹಾಸದಲ್ಲೆ ಅದೇ ಮೊದಲ ...ಯಿರಬೇಕು. ಏನೇ ಸಿಟ್ಟಿದ್ದರೂ ಅದು ನಿಮ್ಮ ... ವ್ಯಕ್ತವಾಗಬೇಕು ಮಾತಿನಲ್ಲಿ ಕೂಡ ಅಲ್ಲ. ...ನೋಡಿದರೆ ಸರ್ಕಾರಕ್ಕೆ ಅಧಿಕಾರಿಗಳಿಗೆ ತಿಳಿಬೇಕು ...ಎ ಸಿಟ್ಟಾಗಿದ್ದಾರೆ ಇನ್ನು ನಮ್ಮಾಟ ನಡೆಯಲ್ಲ ... ಎಂದೆಲ್ಲ ಹೋರಾಟಗಾರರಿಗೆ ಹೇಳಿದ್ವಿ.

...ಮೌನ ಮೆರವಣಿಗೆ ಮತ್ತು ಸಭೆ ನಡೆದ ಕೂಡಲೇ ...ತ್ತೊಂದು ನಿರ್ಧಾರವನ್ನು ಸಂಘದಿಂದ ಕೈಗೊಂಡ್ವಿ. ... ಅಂದ್ರೆ ಮರುದಿನವೇ ನರಗುಂದ ನವಲಗುಂದಕ್ಕೆ ...ಹೋಗಿ ಗೋಲಿಬಾರ್‌ನಿಂದ ಸತ್ತ ರೈತರ ಮನೆಗೆ ... ಕೊಟ್ಟು ಅವರಿಗೆ ಸಾಂತ್ವನ ಹೇಳೋದು. ...ಸುಲ್ಲೆ ಈ ವಿಷಯ ತಿಳಿಸಿ ಕೂಡಲೇ ಎಲ್ಲ ...ರು ಬುತ್ತಿ ಕಟ್ಟಿಕೊಂಡು ಹೊರಡಲು ತಿಳಿಸಿದ್ವಿ. ... ಮಾಲೀಕರ್‍ಯಾರೋ ಎರಡು ಬಸ್ಸು ಕಳಿಸಿದ್ರು, ...ರೋ ಇನ್ನೊಬ್ಬರು ಲಾರಿ ಕಳಿಸಿದ್ರು. ಸಭೆಗೆ ... ಬಹುತೇಕ ರೈತರೆಲ್ಲ ನರಗುಂದಕ್ಕೆ ಹೋಗಿ ...ತಿಯ ಅವಲೋಕನ ನಡೆಸಿ ಮರಳಿದೆವು. ಅಲ್ಲಿನ ...ತಿ ನಿಜಕ್ಕೂ ಭೀಕರವಾಗಿತ್ತು, ಬಹಳಷ್ಟು ರೈತರನ್ನ ...ಸಲಾಗಿತ್ತು, ಸತ್ತ ಮತ್ತು ಬಂಧಿತ ರೈತರ ಪರವಾಗಿ ...ತ್ತಲು ಕೂಡಾ ಯಾರು ಇರಲಿಲ್ಲ, ಆ ಕೆಲಸವನ್ನು

'ಓ ರೈತ ಎಲ್ಲಿಗೆ? ಗುಂಡೂರಾವ್ ಜೈಲಿಗೆ' ಅನ್ನೋದು ಎಲ್ಲರ ಬಾಯಲ್ಲಿನ ಸೊಲ್ಲಾಯಿತು. ಹಾಗೆ ಕೂಗ್ತಾನೆ ರೈತರು ಹುರುಪಿನಿಂದ ಜೈಲಿಗೆ ಹೋಗೋಕೆ ಪ್ರಾರಂಭಿಸಿದರು. ಜೈಲಿಗೆ ಹೊರಟ ರೈತರಿಗೆ ಹೆಂಗಸರು ಮಕ್ಕಳು ಆರತಿ ಬೆಳಗಿ ಕಳುಹಿಸಿದಂತ ಘಟನೆಗಳು ನಡೆದವು. ಮ್ಯಾಜಿಸ್ಟ್ರೇಟ್ ಸಾಹೇಬರು ರಾತ್ರೋರಾತ್ರಿ ಬಿಡುಗಡೆ ಮಾಡಿ ಕಳುಹಿಸಬೇಕಾದ ಸಂದರ್ಭಗಳು ಬಂದೊದಗಿದವು.



ಅಪ್ಪ ಮಕ್ಕಳು ಸೇರಿ ಇಂತ ನರಕ ತಂದು ಮಡಗಿದ

ಅವಧಿಗೆ ಮುನ್ನವೇ ಎಡೂರಪ್ಪ ಬಜೆಟ್ ಮಂಡಿಸಿ ದನೆಂಬ ಸುದ್ದಿ ಕೇಳಿದ ಕಾಳಮಾವನಿಗೆ ಅವಧಿ ಮತ್ತು ಅದಕ್ಕೂ ಮುನ್ನ ಎಂಬುದರಲ್ಲಿ ಅಂತಹ ವ್ಯತ್ಯಾಸವೇನೂ ಕಾಣಲಿಲ್ಲ. ಆದ್ದರಿಂದ ತೀರ ತಾತ್ಸಾರದಿಂದಲೇ,

"ಏನೇನು ಬೆನಿಪಿಟ್ಟು ಕೊಟ್ಟವುನ್ನೆ?" ಎಂದ.

"ಅಯ್ಯೋ ಅವುನು ಕೊಡ್ತಿನಿ ಅಂತ ಹೇಳಿರೊ ಪಟ್ಟಿ ನೋಡಿದ್ರೆ ಇದೀ ಕರ್ನಾಟಗ ಸ್ವರ್ಗಾಯ್ತದೆ."

"ಆಟೊಂತರ ಕೊಟ್ಟದ್ದನೆ?"

"ಊ ಕಣ ಮಾವ, ಯಲ್ಲಾ ಕೋಟಿ ಲ್ಯಕ್ಕದಲ್ಲೆಯಾ,

ಬಯಲುಸೀಮೆಯ ಕಟ್ಟೆಪುರಾಣ ■ ಬಿ. ಚಂದ್ರೇಗೌಡ

ಲಕ್ಷದ ಸುದ್ದೇ ಇಲ್ಲ."

"ಯಲಕ್ಸನ್ ಬತ್ತಾ ಅದಲ್ಲ ಅದ್ಕೆ ಕಂಡ್ಯ" ಎಂದ ಸೀರ.

"ಇಂತ ಆಸೆ ತೋರಿ ಯಲಕ್ಸನ್ ಗೆಲ್ಲಕ್ಕಾಗದಿಲ್ಲ ಕಣಮಾವ. ಈಗಾಗ್ಲೆ ಎಡೂರಪ್ಪನ ಸರಕಾರವ ತುಂಬಾ ಡ್ಯಾಮೇಜ್ ಮಾಡಿಬುಟ್ಟವುರೆ."

"ಯಾರು ಮಾಡಿದ್ರರ್ಲ?" ಎಂದಳು ಜುಮ್ಮಿ.

"ಭಜರಂಗದಳದಿಂದ ಹಿಡುದು ಹೊಮ್ಮಿನಿಷ್ಟ್ರು ಆಚಾರಿ, ರೆಡ್ಡಿ, ಸಂಪಂಗಿ ಯಲ್ಲ ಸೇರಿ ಎಡೂರಪ್ಪನ ಸರ್ಕಾರವ ತಥಾನ್ ತೂತು ಮಾಡ್ಯವುರೆ ಕಣೇ. ಆದ್ರೂ ಎಡೂರಪ್ಪ ನನ್ನಂತ ಚೀಪ್ ಮಿನಿಸ್ಟ್ರೆ ಇಲ್ಲ, ಆಚಾರಿಯಂತ ಹೋಂ ಮಿನಿಷ್ಟ್ರೆಯಿಲ್ಲ ಅಂತ ಬೀಗತ ಕುಂತವುನೆ, ಇದಕೇನೇಳನಾ?"

"ಬೀಗೊ ಅಂತದ್ದೇನಾರ ಮಾಡಿದ್ದನೇನೊ?"

"ಏ, ಬರೀ ಗಲಾಟ, ದಾನ್ಲಿ ಕಣೇ. ಅದ್ಕೆ ಆಡಳಿತ ಅಂತ ತಿಳಕಂಡವುನೆ. ಅವುನ ಸರ್ಕಾರದ ಮಂತ್ರಿಗಳು ಒಂದೂ ನ್ಯಟ್ಟಗಿಲ್ಲ, ಇದ್ದುದ್ರಲ್ಲಿ ಅವುಳೊಬ್ಬಳೆ ನೋಡವ್ನ ಸರಿಯಾಗಿ ಮಾತಾಡೋಳು."

"ನಿಜ ಕಂಡ್ಯ, ಚನ್ನಾಗಿ ಮಾತಾಡ್ತಳೆ."

"ಅವುಳಂತೆ ಒಂದು ನಾಕ ಜನ ಇದ್ರು ಸಾಕು, ಎಡೂರಪ್ಪನ ಸರಕಾರಕೆ ಏಟೋ ಮರಿಯಾದಿ ಬರದು."

"ಅದ್ಯಲ್ಲ ಇರ್ಲಿ, ಬಜೆಟ್ನಲ್ಲಿ ರೈತರಿಗೇನಾರ ಕೊಟ್ಟಿದ್ದನೇನ್ಲ?" ಎಂದ ಕಾಳಮಾವ.

"ಹಿಂದೆ ಕೊಟ್ಟಿರದ್ನೆ ಅರಗಿಸಿಗಳಕ್ಕಾಗಿಲ್ಲ, ಇನ್ನ ತಿರಗ ಕೊಟ್ರೆ ಯಂಗಪ್ಪ ಈಸಗಳದು?" ಎಂದ ಸೀರ.

"ಎಡೂರಪ್ಪ ಏನೇ ಕೊಟ್ರು ರೈತರಿಗೆ ಈಸಗಳದೆ ಕಷ್ಟ ಕಣಮಾವ. ಅದೇ ಉಳದೋರಿಗೆ ಕೊಟ್ಟರೊ ದುಡ್ಡ ಯಂಗೀಸ್ಗತ್ತವೆ ಅಂತೀ? ಸರಕಾರ ತಿನ್ನಕ್ಕು ತಲಿಬೇಕು."

"ಅದೇನೊ ನಿಜ ಬುಡು."

"ನೋಡಮಾವ, ಈಗ ಮಠಗಳಿಗೆ ದುಡ್ಡು ಕೊಟ್ಟವುನೆ. ಬ್ರಾಂಬ್ರು ಮಾತಾಡೊ ಸಮುಸ್ಕೃತ, ವೇದ ಪುರಾಣಕ್ಕಲ್ಲ ಕೊಟ್ಟವುನೆ. ಅವುರಂಗೆ ರೈತರು ವಸೂಲು ಮಾಡಕ್ಕಾದತೆ? ಏನೊ ಅವುನು ಬಜೆಟ್ಟು ಅಂತ ಓತ್ತನೆ, ನಾವು ಕೇಳತಿವಿ. ಅಂಗೆ ಯಲ್ಲ ನ್ಯಡಕಂಡೋಯ್ತಾ ಅದೆ ಕಣಮಾವ."

"ಅಂಗೆ ಕಾಣತ ಅದಪ್ಪ, ಇವುರು ಬಂದು ಈಟು ದಿನಾಯ್ತು, ಒಂದಾಸ್ರಯದ ಮನೆಕೊಡಕ್ಕಾಗಲಿಲ್ಲ, ಹೋಗ್ಲಿ ರೇಷನ್ ಕಾರ್ಡು ಕೊಡಲಿಲ್ಲ, ಹೇಳ್ತಿ ನೀನು."

"ರೇಷನ್ ಕಾರ್ಡು ನಿನಿಗ್ಯಾಕೆ ದ್ವಡಪ್ಪ? ಈ ಸತಿ ಬೇಕಾದಂಗೆ ರಾಗಿ ಬ್ಯಳದಿದ್ಕಿ ಅವುರೆ ಬ್ಯಳದಿದ್ಕಿ ಹೊಲಬತ್ತ ಬ್ಯಳದಿದ್ಕಿ" ಎಂದುಕೊಂಡು ಪಾಟಿಸ್ಪೆ ಬಂದ.

"ಊ ಬ್ಯಳದಿದ್ದಿನಿ ಬಾ, ಉಗುರುಕಣ್ಣು ಮಣ್ಣಾಗದಂಗೆ ಉಣ್ಣೆವೆ."

"ಅವುನಂಗೆ ಅಲವೇನು ಮಾವ ಇರದು, ಅವುನ್ಯಾ ವತ್ತು ವಲ ಉತ್ತಿದ್ದನೂ, ಹಿಂಗೆ ಕಾಲ ಹಾಕ್ತನಪ್ಪ" ಎಂದಳು ಜುಮ್ಮಿ.

"ಬ್ರಾಂಬ್ರು ವಲ ಉಳದಿಲ್ಲ ಕಣಕ್ಕ, ಅಂಗೆ ನಾನುವೆ."

"ಅಂಗರೆ ಬ್ರಾಂಬ್ರು ವಲ ಉಳದಿಲವೇನ್ಲ?"

"ಎಲ್ಲಾರ ನೋಡಿದ್ರ ಬಂದೇಳಕ್ಕ. ಅವರ ಇತಿಹಾಸದಲ್ಲೇ ನ್ಯಲಕ್ಕರದ ಎಗ್‌ಜಾಂಪಲ್ ಇಲ್ಲ, ಭೂಮಿ ಉಳೋರಿಗೆ ಅವುರತ್ರ ಬ್ಯಲೆನೂ ಇಲ್ಲ."

"ಈಗ ಯಲ್ಲಾರು ಅವುರಂಗೆ ಆಯ್ತಾ ಅವುರಲ್ಲೇಳು. ಇದೇ ನಮ್ಮೂರಲ್ಲಿ ಯಲ್ಲ ಹುಡುಗ್ರು ದನಕರ



ನೋಡದಬುಟ್ಟು ಯಲ್ಲಾ ಬೆಂಗಳೂರಿಗೋಯ್ತಾ ಅವೆ. ಯವಸಾಯದ ಕಸುಬು ಭಾರಿ ಕೀಳಾದ ಕಸುಬಾಯ್ತಾ ಅದೆ."

"ಅದ್ಕೆ ಕಣೊ ಹುಡುಗ್ರು ನಿಲ್ತಾಯಿಲ್ಲ, ಅವ ಯಂಗೆ ಹಿಡದು ನಿಲ್ಲಸಬವುದು ಅಂತ ಯೋಚನೆ ಮಾಡಂಗಾಗ್ಯದೆ."

"ಬಜೆಟ್ಟು ಮಾಡೊ ಎಡೂರಪ್ಪ ಯೋಚನೆ ಮಾಡಬೇಕಾಗಿತ್ತು ಕಣೊ. ಸುಮ್ಮಸುಮ್ಮನೆ ಅದಕಿಷ್ಟು ಕೋಟಿ, ಇದಕಿಷ್ಟು ಕೋಟಿ ಕೊಟ್ಟೆ ಅಂತ ಹಂಚದಕಿಂತ ರೈತ ಸಂಘದೋರು ರೈತರನ್ನಲ್ಲ ಕರದು ನಿಮ್ಮ ಉದ್ಧಾರ ಮಾಡಕ್ಕೆ ಏನು ಮಾಡಬೇಕು ಹೇಳ್ರಪ್ಪ ಅಂತ ಕೇಳಬೇಕಾಗಿತ್ತು."

"ಅಂಗ್ಯಾವನು ಕೇಳಿದ್ದನೊ ಇಲ್ಲಿಗಂಟ?"

"ನೀನು ಕೇಳಬೇಕಾಗಿತ್ತು ಕಣಯ್ಯ ಎಲ್ಕೊ ಒಂದು ಹಸುರು ಶಾಲು ಸಿಕ್ತು ಅಂತ ಹ್ಯಗಿಲಿಗಾಯ್ಕಂಡು ರೈತರ ಹೆಸರಲ್ಲಿ ಪ್ರಮಾಣ ತಗಂಡ್ಯಲ್ಲ ಅಂತ ನೀನು ಮಾಡಬೇಕಾಗಿತ್ತು."

"ಎಡೂರಪ್ಪ ಏನಾರ ಮಾಡಬೇಕಾದ್ರೆ ರೇಗುಸಬೇಕು ಕಣೊ, ರೇಗಿಸಿದ್ರೆ ಅವುನೇನಾರ ಮಾಡ್ತನಂತೆ."

"ಏನೂ ಮಾಡದಿಲ್ಲ ಕಣೊ ಉಗ್ರಿ. ನೋ… ಬಳ್ಳಾರಿಲಿ ರೈತರ ಹಿಡಕಂಡು ಸರಿಯಾಗಿ ನೇದ… ಎಡೂರಪ್ಪೇನಾರ ಬಾಯಿ ಬುಟ್ಟಿದ್ದನೆ?"

"ಅದ್ಯಾಕೆ ರೈತರಿಗೆ ಹ್ವಡದುರ್ಲಾ?" ಎಂ… ಜುಮ್ಮಿ.

"ರೈತರ ನೀರಾವರಿ ಜಮೀನಲ್ಲಿ ಏರೋಪ್ಲೇ… ಇಳಿಯಂಗೆ ಮಾಡ್ತಿನಿ ಅಂತ ಹೋಗ್ಯವುನೆ ಕಣಕ್ಕ ರೈ… ಅದ್ಕೆ ರೈತರು ನಾವು ಸತ್ತರೂ ಈ ಜಾಗ ಬುಡ… ಅಂದವುರೆ. ಅದ್ಕೆ ಪೊಲೀಸ್‌ನೋರ ಕಳಿಸಿ ಸರಿಯ… ನೆಯಿಸವುನೆ."

"ಅಲ್ಲಾ ಕಂಡ್ರಾ, ಸರಕಾರಿ ಜಾಗದಲ್ಲಿ ಮಾಡಿಕ್ಕೋ… ಅದುಬುಟ್ಟು ರೈತರ ಜಮೀನೆ ಆಗಬೇಕೆ… ಸೂಳೆಮಕ್ಳಿಗೆ?" ಎಂದ ಕಾಳಮಾವ.

"ಯಲ್ಲಾ ನಿಮ್ಮ ಅಪ್ಪಮಕ್ಕಳಿಂದ ದ್ವಡಪ್ಪ … ನರಕ ಸೃಷ್ಟಿಯಾಗಿದ್ದು, ನೀನೇನೊ ಇಲ್ಲಿ ಸುಮ್ಮನೆ ಕುಂತಿ…

ವಿಪಕ್ಷಗಳ ಪಿತೂರಿ ಎಂಬ ದಿವ್ಯ ಮಂತ್ರವು!

ಕೆಲವು ಮಹಾನುಭಾವರು ಇದ್ದಾರೆ. ಅವರ ಮನಸ್ಸು ಅನ್ನೋದು ಬಹಳ ಸೂಕ್ಷ್ಮವಾಗಿರುತ್ತೆ. ಸೃಜನಶೀಲತೆ ಅನ್ನುವ ಹೆಸರಿನಲ್ಲಿ ಯಾವುನೋ ಸಾಬಿ ತಾನು ಅಂತರರಾಷ್ಟ್ರೀಯ ಖ್ಯಾತಿ ಪಡೆದ ಕಲಾವಿದ ಎಂದು ಬೊಗಳೆ ಬಿಡುತ್ತಾ ಹಿಂದೂ ದೇವತೆಗಳನ್ನು ಅಶ್ಲೀಲವಾಗಿ ಚಿತ್ರಿಸುತ್ತಾನೆ. ತಮ್ಮ ದೇವತೆಗಳಿಗೆ ಒದಗಿರುವ ಈ ಹೀನಾಯ ಸ್ಥಿತಿಯನ್ನು ಕಂಡು ಅವರ ಮನಸ್ಸು ಅನ್ನೋದು ವಿಲವಿಲನೆ ಒದ್ದಾಡುತ್ತೆ. ಇಂತಹ ಅಪಮಾನವನ್ನು ಸಹಿಸಿಕೊಳ್ಳಲಾರದೆ ದೇವತೆಗಳೇ ಅವರಿಗೆ ಪ್ರೇರೇಪಿಸುತ್ತವೋ ಏನೋ ಗೊತ್ತಿಲ್ಲ, ಅಂತಹ ಚಿತ್ರ ಪ್ರದರ್ಶಿಸುವ ಆರ್ಟ್ ಗ್ಯಾಲರಿಗಳನ್ನು ಧ್ವಂಸ ಮಾಡುವುದು ಅನಿವಾರ್ಯ ಆಗುತ್ತೆ. ಆ ಪಾಪಿಯನ್ನು ದೇಶದಿಂದಲೇ ಹೊರಹಾಕುವುದರಿಂದ ಮನಸ್ಸು ಅನ್ನೋದು ಸ್ತಿಮಿತಕ್ಕೆ ಬರುತ್ತೆ. ರಾಷ್ಟ್ರೀಯ ಕಲಾಪ್ರದರ್ಶನ ಉದ್ಘಾಟನಾ ಸಮಾರಂಭದಲ್ಲಿ ವೈದ್ಯಕೀಯ ಶಿಕ್ಷಣ ಮಂತ್ರಿ ರಾಮಚಂದ್ರಗೌಡರು ಪರೋಕ್ಷವಾಗಿ ಇಂತಹ ಕೃತ್ಯಗಳನ್ನು ಸಮರ್ಥಿಸಿದ್ದಾರೆ. ಸೃಜನಶೀಲತೆ ಅನ್ನುವ ಹೆಸರಿನಲ್ಲಿ ಅಶ್ಲೀಲತೆ ಚಿತ್ರಗಳನ್ನು ಚಿತ್ರಿಸಲಾಗುತ್ತದೆ ಎಂಬುದಾಗಿ ತಮ್ಮ ಅಮೋಘವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕಲೆ ಕಲಾವಿದರ ಕುರಿತು ಅಜ್ಞಾನ ಹೊಂದಿರುವವರು, ಮಂತ್ರಿ ಎಂಬ ಒಂದೇ ಕಾರಣಕ್ಕೆ ಈ ರೀತಿಯ ತೀರ್ಮಾನ ನೀಡುವುದು ಸರಿಯಲ್ಲ ಎಂದು ಕೆಲವರು ಪ್ರತಿಭಟಿಸಿರಬಹುದು. ಇದು ಅವರ ಅಜ್ಞಾನದ ಕುರುಹು ಆಗಿದೆ. ಕಲೆ ಎಂದರೆ ಏನು? ಚಿತ್ರ. ಚಿತ್ರ ಅಂದರೆ ಡ್ರಾಯಿಂಗು. ನುರಿತ ಕಲಾವಿದ ಡ್ರಾಯಿಂಗ್ ಮಾಸ್ತರು. ಇಂಜಿನಿಯರಿಂಗ್ ಪದವೀಧರರಾದ ಮಾನ್ಯ ಸಚಿವರಿಗೆ ಈ ಡ್ರಾಯಿಂಗು, ಡ್ರಾಯಿಂಗ್ ಮಾಸ್ತರು ಗೊತ್ತೇ ಇಲ್ಲ ಎನ್ನುವುದು ತರವಲ್ಲ ತಗೀರಿ! ಸನ್ಮಾನ್ಯರೇನು ಇದರಿಂದ ವಿಚಲಿತರಾಗಲಿಲ್ಲ ಅನ್ನಿ. 'Pull him out' ಅಂತ ಅಲ್ಲೇ ನಿಂತಿದ್ದ ಪೊಲೀಸರಿಗೆ ಆಜ್ಞೆ ಹೊರಡಿಸಿದರು. Get out ಅಂತ ಅಬ್ಬರಿಸಿದರು. I have right to speak ಎಂದು ಹೇಳಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿದರು. ಇತರೆಯವರ ಬಾಯಿ ಮುಚ್ಚಿಸಿದ್ದು ಹಾಗಿರಲಿ, ಮಾಮೂಲಿ ಧಾಟಿಯಲ್ಲೇ ತಮ್ಮ ಭಾಷಣ ಮುಂದುವರಿಸಿ ಮನಸ್ಸು ನೋಯಿಸಿ ಕೊಳ್ಳುವ ಮಂದಿಯ ಶ್ಲಾಘನೆಗೆ ಪಾತ್ರರಾದರು!

ನಿರಂತರವಾಗಿ ನಡೆಯುತ್ತಿರುವ ಮತಾಂತರ ಕಂಡು ಅವರ ಮನಸ್ಸು ಕಾಯ್ದ ಕಾವಲಿಗೆ ಚಿಮುಕಿಸಿದ ನೀರಿನಂತೆ ಚೊಂಯ್‌ಗುಡುತ್ತದೆ. ತಮ್ಮ ಧರ್ಮ ಬಾಂಧವರು ಅನ್ಯಧರ್ಮೀಯರಾಗುವುದನ್ನು ಕಂಡು ಮನಸ್ಸು ಚಡಪಡಿಸುತ್ತದೆ. ಈ ಚಡಪಡಿಕೆ ನಿಲ್ಲುವುದೇ ಚರ್ಚು, ಮಸೀದಿಗಳ ಮೇಲೆ ದಾಳಿ ನಡೆಸಿ ಇದಕ್ಕೆ ಕಾರಣೀಭೂತರಾದವರನ್ನು ಸುಟ್ಟ ಬಳಿಕವೇ!

ಭಾರತೀಯ ನಾರಿಯರು ದೇವತೆಗಳಿಗೆ ಸಮಾನ. ಮೈತುಂಬ ಸೀರೆ ಉಟ್ಟು, ಕೈತುಂಬ ಬಳೆ ತೊಟ್ಟು,



ಹಣೆಗೆ ರೂಪಾಯಿ ಅಗಲ ಕುಂಕುಮ ಇಟ್ಟರೆ ಅವರ ಮನಸ್ಸುಗಳಿಗೆ ಸಾಕ್ಷಾತ್ ದೇವತೆಗಳನ್ನು ದರ್ಶಿಸಿದ ಅನುಭವ ಉಂಟಾಗುತ್ತದೆ. ಹಿಂದೂ ಸಂಸ್ಕೃತಿಯ ಪ್ರತೀಕ ಈ ರೂಪು. ವಿಧವೆಯರು ಬಳೆ, ಕುಂಕುಮ ಧರಿಸಲು ನಿಷೇಧ ಇದೆಯಲ್ಲ ಹಿಂದೂ ಧರ್ಮದಲ್ಲಿ ಎಂದರೆ ಅದಕ್ಕೂ ಉತ್ತರ ಇದೆ. ಹಿಂದಿನ ಜನ್ಮದಲ್ಲಿ ಯಾವುದೋ ನೆಮ್ಮದಿಯಿಂದ ಬಾಳುತ್ತಿದ್ದ ಸಂಸಾರಕ್ಕೆ ಕಲ್ಲು ಹಾಕಿರಬೇಕು ಅದಕ್ಕೇ ಈ ಜನ್ಮದಲ್ಲಿ ವೈಧವ್ಯ ಪ್ರಾಪ್ತ ಆಗಿದೆ. ಧರ್ಮಶಾಸ್ತ್ರದ ಪ್ರಕಾರ ಕಾಯಾ ವಾಚಾ ಮನಸಾ ನಡೆದುಕೊಂಡರೆ ಮುಂದಿನ ಜನ್ಮದಲ್ಲಿ ಮುತ್ತೈದೆ ಸಾವು ಖಚಿತ ಎಂದು ಹೇಳಲಾಗುತ್ತದೆ. ಇದನ್ನು ಮರೆತ ಕೆಲವು ಯುವತಿಯರು ಪಾಶ್ಚಾತ್ಯ ನಾಗರಿಕತೆಗೆ ಮರುಳಾಗಿರುವುದು ಶೋಚನೀಯ. ಇಂತಹವರಿಗಾಗಿ ಅವರ ಮನಸ್ಸು ಮರುಗುತ್ತದೆ. ಪಬ್‌ಗಳಿಗೆ ಹೋಗುವುದನ್ನು ನೋಡಿದಾಗಲಂತೂ ಯುವತಿಯರ ಹಿಂದೂ ಆತ್ಮಶ್ರೀ ಗಟಾರಕ್ಕೆ ಬೀಳುತ್ತಿದೆ ಎಂದು ಬಾಧಿಸುತ್ತದೆ. ಅವರ ಆತ್ಮೋದ್ಧಾರ ಮಾಡುವುದು ತಮ್ಮ ಆದ್ಯ ಕರ್ತವ್ಯ ಎಂದು ಭಾವಿಸಿ ಇಂತಹವರನ್ನು ಓಡಾಡಿಸಿ ಬಡಿಯಲೇಬೇಕಾಗುತ್ತದೆ.

ವ್ಯಾಲೆಂಟೈನ್ಸ್ ಡೇಗೂ ಇಂತಹದ್ದೇ ಮೂಲ ಕಾರಣ ಇದೆ. ಇದನ್ನು ಮುದುಕರೊಬ್ಬರಿಗೆ ಹೇಳಿದಾಗ ಅವರು ಕೆರಳಿ ಕೆಂಡ ಆದರು. 'ಇಪ್ಪತ್ತು ವರ್ಷಗಳ ಕೆಳಗೆ ಇದರ ಹೆಸರೇ ಕೇಳಿರಲಿಲ್ಲ. ನಾವೇನು ಯಾರನ್ನು ಪ್ರೇಮಿಸಲೇ ಇಲ್ವ' ಎಂಬ ಪ್ರಶ್ನೆ ಬಿಸಾಕಿದರು. 'ಇದು ಬಂದದ್ದೇ ಜಾಗತೀಕರಣ ಜಾಗತೀಕರಣ ಅಂತ ಕುಣಿಯಕ್ಕೆ ಪ್ರಾರಂಭ ಮಾಡಿದಾಗಿನಿಂದ. ಪ್ರೇಮಾನೂ ಮಾರಾಟದ ವಸ್ತು ಆಗಿದೆ. ನಿಜಕ್ಕೂ ಇವಕ್ಕೆ ಕಳಕಳಿ ಇದ್ದರೆ ಜಾಗತೀಕರಣದ ವಿರುದ್ಧ ಹೋರಾಡಲಿ. ಅದ ಮಾಡಕೆ ದಮ್ಮಿಲ್ಲ, ಪ್ರೇಮಿಗಳ ದಿನ ನಿಲ್ಲುಸ್ತೀವಿ ಅಂತ ತಾಳಿ ಹಿಡ್ಕಂಡು ಅಲೀತಾವಂತೆ. ಪಬ್ ದಾಳಿ ಮಾಡೋದು, ಇಂತಹದ್ದು ಸುಲಭ ನೋಡಿ. ಟಿವಿಯೋರ್ನ ಕರ್ಕೊಂಡೋಯ್ತಾವೆ, ಕೂಗಾಡ್ತವೆ, ಬಿಟ್ಟಿ ಪ್ರಚಾರ ಗಿಟ್ಟಿಸುತ್ತವೆ. ಹಿಂದೂ ಸಂಸ್ಕೃತಿ ರಕ್ಷಕ ಅನ್ನೋನು ಯಾವ್ನೋನಾದ್ರೂ ಜಾಗತೀಕರಣದ ವಿರುದ್ಧ ಮಾತಾಡಿದ್ದಾನಾ?' ಎಂದು ಮುಂತಾಗಿ ಪ್ರಶ್ನೆಗಳ ಸರಮಾಲೇನೇ ಎಸೆದರು.

ಮುದುಕರ ಮಾತು ಬಿಡಿ. ಈಗ್ಲೋ ಆಗ್ಲೋ ಹಳೇರಾಗಿ ತರೋಕೆ ತಯಾರಿರೋರು. ಅವರಿಗೆ ಸಂಸ್ಕೃತಿ ರಕ್ಷಕ ಮನಸ್ಸಿನ ನೋವು ಹೇಗೆ ಅರಿವಾಗಬೇಕು? ಇಂತಹವರನ್ನು ಕೇಳಿದರೆ ಹಿಂದೂ ಮುಸ್ಲಿಂ ಯುವಕ ಯುವತಿಯರು ಮಾತನಾಡುವುದು ಅಪರಾಧವೇ ಅಲ್ಲ ಅನ್ನಬಹುದು. ಪೊಲೀಸ್ ವರಿಷ್ಠಾಧಿಕಾರಿ ಅಜಯ್ ಕುಮಾರ್ ಸಿಂಗ್ ಮಂಗಳೂರಿನಲ್ಲಿ ಸಾರ್ವಜನಿಕ ಅಹವಾಲು ಕೇಳುತ್ತಿದ್ದಾಗ ಒಬ್ಬ ಯುವತಿ 'ಮನೆಯಲ್ಲಿ ಪೊಲೀಸರ ನಡುವೆ ಇದ್ದರೂ ಜಯ ನನ್ನನ್ನ ಕಾಡುತ್ತೆ. ಅಂತಹದರಲ್ಲಿ ಮಾನಸಿಕ ಭದ್ರತೆಯನ್ನು ಹೇಗೆ ಮೂಡಿಸುತ್ತೀರಾ? ಮುಸ್ಲಿಂ ಯುವಕರೊಡನೆ ಮಾತನಾಡಲು ನಾನು ಹಿಂಜರಿಯಬೇಕ?' ಎಂಬ… ಪ್ರಶ್ನಿಸಿದರಂತೆ. ಅವಳಿಗೆ ಮುಸಲ್ಮಾನ ಯುವಕ… ಬೇಕೇನೋ? ಹಿಂದೂ ಯುವಕರೇನು ಸತ್ತೋಗಿದ್ದಾ… ಇಂತಹ ವರ್ತನೆ ಸಂಸ್ಕೃತಿ ರಕ್ಷಣೆ ಹೊಣೆ ಹೊತ್ತ… ಮನಸ್ಸಿಗೆ ತರುವ ನೋವಿನ ಆಳದ ಅರಿವಾದ… ಇದೆಯ?

ಇದನ್ನು ಅರ್ಥಮಾಡಿಕೊಳ್ಳಲಾಗದ ಕೇಂದ್ರ ಸ… ರೇಣುಕಾ ಚೌಧುರಿ 'ತಾಲಿಬಾನಾಗುತ್ತಿರುವ ಮಂಗಳೂ… ಎಂದಾಗ ಅವರ ಮನಸ್ಸುಗಳಿಗೆ ಆಗಿರುವಂತಹ ಆಘ… ಅರ್ಥವಾಗಿರಲಿಕ್ಕಿಲ್ಲ. ವಿನಾಕಾರಣ ಮಂಗಳೂ… ಜನತೆಯನ್ನು ಈ ರೀತಿ ಅವಮಾನಗೊಳಿಸಿದ್ದು ಸರಿ… ಅದಕ್ಕೇನು ಮಾಡಬೇಕು? ಮೇಯರ್ ಅಂದರೆ ಯಾ…

ಅನಾವರಣ ■ ಎಚ್.ಎಲ್. ಕೇಶವಮೂರ್ತಿ

ಪ್ರಥಮ ಪ್ರಜೆ. ಮಂಗಳೂರು ನಾಗರಿಕರ ಪ್ರತಿ… ರೇಣುಕಾ ಅವರಿಗೆ ನಿಮ್ಮ ಮಾತಿನಿಂದ ಮಂಗಳೂ… ಜನತೆಗೆ ಅವಮಾನ ಆಗಿದೆ. ಜನತೆಯ ಕ್ಷಮೆ ಕೋರಬೇ… ಎಂದು ಹೇಳಿದರು. ಆಕೆ ಕೇಳಲಿಲ್ಲ, ನಗರ ಕಾರ್ಪೊರೇ… ವತಿಯಿಂದ ಮಾನನಷ್ಟ ಮೊಕದ್ದಮೆ ಹೂಡುವುದ… ಸಾರಿದರು. ಮೇವರಿಕ್ ಸಂಸ್ಥೆಯ ವಿವಾದದಲ್ಲಿ ಮ… ಮಂತ್ರಿಗಳು ಸರ್ಕಾರದ ಹಣದಲ್ಲಿ ತಮಗೆ ಆಗಿ… ಮಾನನಷ್ಟಕ್ಕೆ ಪರಿಹಾರ ಕೋರಿ ನ್ಯಾಯಾಲಯ… ಹೋಗಿದ್ದರಲ್ಲ ಅದೇ ಜಾಡಿನಲ್ಲೇ ಅವರೂ ಇದ… ಆಗ ಸುಮ್ಮನಿದ್ದ ಜನ ಈಗ ಎಚ್ಚರವಾದರು. 'ಮಾನ… ಮೊಕದ್ದಮೆಯನ್ನು ಕಾರ್ಪೊರೇಷನ್‌ನಿಂದ ಹಾಕ… ಕಾರ್ಪೊರೇಷನ್ ಹಣ ಇವರ ಅಪ್ಪನ ಮನೆಯ… ಅಂತ ತಿರುಗಿ ಬಿದ್ದರು. ಇದ್ಯಾಕೆ ಈ ತರ್ಲೆ ತಾವ… ಅಂತ ವೈಯಕ್ತಿಕವಾಗಿ ಮಾನನಷ್ಟ ಮೊಕದ್ದಮೆ ಹೂಡಿ… ಇನ್ನೂ ಕೆಲವು ಸಂಘಟನೆಗಳು ಕೈ ಜೋಡಿಸಿದ್ದಾವ…

ಇದಕ್ಕೇನೆನ್ನಬೇಕು ರೇಣುಕಾ ಚೌಧುರಿ? 'ತಾಲಿಬಾ… ಕರಣಾ ಆಗಿರುವ ಮಂಗಳೂರನ್ನು ಮೊದಲು ಅದರ… ಹೊರತರಲು ಪ್ರಯತ್ನಿಸಲಿ' ಅನ್ನುವ ಅರ್ಥದ ಮ… ಗಳನ್ನಾಡಬೇಕೆ! ಅಕಟಾಕಟಾ ಸಂಸ್ಕೃತಿ ರಕ್ಷಕರ ಮ… ಪರಿಯೇನೆಂದು ಬಣ್ಣಿಸಲಿ!

ಏನು ನ್ಯವಿಠಾ ಆದೆ ಅಂತ ಗೊತ್ತೆ ನಿನಿಗೆ? ಮಂಗಳೂರಲ್ಲಿ
ೕಜಿನಲ್ಲಿ ಪಾಠ ಮಾಡಕ್ಕೂ ಮೇಷ್ಟ್ರುಗಳು ನಾಕಸತಿ ಯೋಚನೆ
ತಾದಬೇಕಂತೆ. ಹಿಂದೂಗಳು ಸಾಬರು ಮಾತಾಡಂಗಿಲವಂತೆ.
ಆಫೀಸ್ ಅಧಿಕಾರಿಗಳು ಏನು ಮಾಡ್ತರೆ, ಏನು ಮಾತಾಡ್ತರೆ
ಯಿದ್ದರಂತೆ."

ಕಾಯ್ತಯಿರೋರು?"

ಗಿಗಳು, ಬೇಮರ್ಸಿಗಳು, ರಾಮಸೇನೆವು, ಲಕ್ಷ್ಮಣ ಸೇನೆವು ಅಂತ
ಲ್ಲಿ, ಅವು ದ್ವಡಪ್ಪಾ."

ಯೋ ವಾಟಸ್ಸೆ, ಎಮರ್ಜೆನ್ಸಿಲಿ ಆ ಕಾಂಗ್ರೆಸ್ಸಿನವ್ರೂ ಹಿಂಗೆ ಆಗಿದ್ರೊ.
ದೆ ಗೊತ್ತೆ?" ಎಂದ ಉಗ್ರಿ.

ಬ್ಯಾರೆ, ಇದೆ ಬ್ಯಾರೆ ಕಣೊ ಉಗ್ರೀ. ಕಾಂಗ್ರೆಸ್ಸಿಗಿಂತ ಇವರು
ಪೀಪಲ್ಸು."

ವು ದೇಂಜರಾದ್ರು ಅವುರಿಗೇ ದೇಂಜಾರ್ರಾಯ್ತದೆ ತಗೊ.
ದ ಬಿಜೆಪಿ ಅದೆ. ಅವುನೋದ್ರೆ ಅಲ್ಯಾವಿದವ್ರೂ?"

ಬದ್ರು ಈಗ ಮಾಡಿರೊ ಅನಾಹುತ ವಸಿಯೇನೊ ಉಗ್ರಿ?
ಸ್ಕೂಲು ಕಾಲೇಜುಡುಗುರನ್ನಲ್ಲ ಸೇರಿಸಿ ಸಾಬ್ರು ಕಿರುಜಾತಿ
ಎತ್ತಿ ಕಟ್ಟತಾ ಅವ್ರುರೆ. ವಸ ತಲಿಮಾರಿನ ಜನಗಳ ತಲೆ ಹಾಳು
ದ ರಿಪೇರಿ ಮಾಡಕ್ಕಾದತೇನೊ? ಅಂತೂ ಅಪ್ಪಮಕ್ಕಳು ನರಕ
ತಗಿದ್ರು ಕಣೊ."

ಮಾತಿಗೂ ಅದ್ಯಾಕ್ಲ ಅಂಗಂತೀ?" ಎಂದ ಕಾಳಮಾವ.

ಮಾತಿಗೂ ಅನ್ನೊ ಅಂತ ಕ್ಯಲಸ ನೀನ್ಯಾಕ್ ಮಾಡಬೇಕಾಗಿತ್ತು
ಪ ಈ ಡ್ರಂಸಿಂಗ ಯಂಥಾ ಮುಖ್ಯಮಂತ್ರಿ. ಬೆಳಗಾಯ್ತು ಅಂದ್ರೆ
ಪ್ಯಲಿಗೆ ಸ್ಯನು ಮಾಡಿ ಆಮ್ಯಾಲೆ ಲ್ಯಟ್ರಿನ್ನಿಗೋಗನಂತೆ. ಹೇಳಿದಂಗೆ
ಬಗ್ಗು ಅಂದ್ರೆ ಮನಿಕಳನು. ನಿಮ್ಮ ಇಪ್ಪತ್ತು ತಿಂಗಳ ತೆವುಲಿಗೆ ಈ
ತಂದು ಕೂರಿಸಿ ತಮಾಸಿ ನೋಡ್ತ ಕುಂತಿದ್ದೀರಲ್ಲಾ ಇದು
ತಪ್ಪ?"

ಜನೇಳ್ತಿಲ ಅದ?"

ಒಂದೊಂದು ಸತಿ ಹೇಳಿದ್ರೆ ದ್ಯಾವೇಗೌಡ್ರ ಎದುರಿಗೇ
ಯ್ತದೆ ದ್ವಡಪ್ಪ, ಅದ್ಕೆ ಹೇಳಿದೆ. ಯಲ್ಲಾರಿಗೂ ಇನ್ನೊಂದು
ಸು."

ಅದೂ?"

ಸಚಿವ ಆಶೋಕ ಅನ್ನೋನು ಬಸ್ ರೇಟ್ ಇಳಿಸ್ಯವುನೆ. ನೀವು
ಗಬವುದು, ಎಲ್ಯಾರ ಓಡಾಡಬವುದು, ಅಷ್ಟೊಂದು ಇಳಿಸ್ಯವುನೆ."

ಸ್ಯವುನೆ ಹೇಳ್ಳ?"

ಡಕ್ಕೆ ಇಲ್ಲಿಂದ ಮಂಡ್ಯಕ್ಕೆ ಐವತ್ತು ಪೈಸ ಇಳಿಸ್ಯವುನೆ. ಇಲ್ಲಿಂದ
ಗೆ ಒಂದು ರೂಪಾಯಿ ಇಳಿಸ್ಯವುನೆ. ಇಂತ ಚಲ್ರೆ ನನಮಕ್ಕಳನ
ಇಲ್ಲಿಗಂಟ ನೋಡಿದ್ರಾ?"

ಡಿರಲಿಲ್ಲ ಬುಡು!" ■

ರಿ ಇಲ್ಲಿಗೇ ನಿಲ್ಲಿಸಿಲ್ಲ, ಮತ್ತೊಂದು ಮಾತು ಹೇಳಿದರು. 'ಇದೆಲ್ಲ
ನ್ಧ ರಾಜಕೀಯ ಪಿತೂರಿ!'

ತೂರಿ ಅವರ ಪಕ್ಷದವರದ್ದೋ, ಭಾಜಪದ್ದೋ ಎಂದು ತಿಳಿಸಿದ್ದರೆ

ಲ್ಲ ಯೋಚಿಸುತ್ತಾ ಹಾಸಿಗೆಯಲ್ಲಿ ಬಿದ್ದುಕೊಂಡಿದ್ದೆ. ಜೋಂಪು
ದರದ್ದೇ ಕನಸು.

ಕ್ಷೇತ್ರಕ್ಕೆ ಹೋದೆ. ಗರ್ಭಗುಡಿಗೆ ಪ್ರವೇಶ ಸಿಕ್ಕಿತು. ಗೋಡೆಯಲ್ಲಿ
ನೆ. ಬೃಹದ್ ಗಾತ್ರದ ಚಿತ್ರಗಳು. ಯಾರದ್ದು ಅಂತೀರಿ?
ರ್‌ದಲ್ಲ; ವೀರ ಸಾವರ್ಕರ್‌ದಲ್ಲ; ಇತ್ತೀಚೆಗೆ ಅವರು ಜಪಿಸುವ
ಂಬೇಡ್ಕರ್, ವಿವೇಕಾನಂದ, ಭಗತ್‌ಸಿಂಗ್ ಅಂತಹವರದ್ದೂ ಅಲ್ಲ.
ದ್ದದ್ದು ವಿಪಕ್ಷಗಳ ಚಿಹ್ನೆ! ಹಸ್ತ! ಹೊರೆ ಹೊತ್ತ ಮಹಿಳೆ! ಅವಕ್ಕೆ
, ಗಂಧದ ಕಡ್ಡಿ ಹಚ್ಚಿದ್ದರು. ಅರ್ಥ ಆಯಿತು. ಅಲ್ಲೇ ಇದ್ದವರನ್ನು
ಈ ಎರಡೂ ಪಕ್ಷಗಳು ಗತಿಸಿದವು ಎಂದೆ?'

ನಮ್ಮ ಆಶಯ. ಸದ್ಯದ ಉದ್ದೇಶವೇ ಬೇರೆ.'

ದು?' ಕುತೂಹಲದಿಂದ ಕೇಳಿದೆ.

ಉತ್ತರ ಹುಸಿನಗು.

ಹಲ ಇಮ್ಮಡಿಯಾಯಿತು.

ರಪ್ಪನವರ ಮನೆಗೆ ಹೋದೆ.

ಅದೇ! ಹಸ್ತ! ಹೊರೆ ಹೊತ್ತ ಮಹಿಳೆ!

ಾರು ಮಂತ್ರಿಗಳ ಮನೆ ಸುತ್ತಿದೆ. ಡಿಟ್ಟೋ!

ಎಲಾ ಇದೇನು ಅಂತ ಅವರಿವರನ್ನು ಕೇಳಿದೆ. ಎಲ್ಲದಕ್ಕೂ
ಉತ್ತರ. ಹಾಗೇ ಯೋಚಿಸಿದೆ. ಹೊಳೆಯಿತು! ಆಪದ್ಬಾಂಧವ
ಅವು!

ರಿಯಲ್ಲಿ ಗೋಲಿಬಾರ್.

ಗಳ ಪಿತೂರಿ!

ಗಿ ಲಂಚ ಪ್ರಕರಣ.

ಗಳ ಪಿತೂರಿ!

ಗಳ ಮೇಲೆ ದಾಳಿ.

ಗಳ ಪಿತೂರಿ!

ರಿಯಲ್ಲಿ ರೈತರ ಮೇಲೆ ಲಾಠಿ ಚಾರ್ಜ್


ಲ್ಲ ಗೂಂಡಾಗಳು ಅವರು! ರಾಜಕೀಯ ಪ್ರೇರಿತ!

......


......

ಸ ಸಮಸ್ಯೆಯೇ ಬರಲಿ. ಉತ್ತರ ರೆಡಿ ಇರಲಿ: ವಿಪಕ್ಷಗಳ ಪಿತೂರಿ!
ಎಂತಹ ದಿವ್ಯ ಮಂತ್ರವಿದು! ■

ಹುಚ್ಚಾಸ್ಪತ್ರೆಯ ಆಕ್ರಮಣ!




ಒಂದು ಜೋಕ್ ಇದೆ. ಇದು ಯೂರೋಪಿನ ಯಹೂದ್ಯರು ಕ್ಯಾಲಿಫೋರ್ನಿಯಾಕ್ಕೆ ಬಂದು ತಮ್ಮ ದರ್ಜಿ ಕೆಲಸ, ಕ್ಷೌರಿಕ ಕೆಲಸ, ಜವಳಿ ವ್ಯಾಪಾರ ಎಲ್ಲವನ್ನೂ ಬಿಟ್ಟು ಸಿನಿಮಾ ಮಾಡುತ್ತಿದ್ದ ಕಾಲ. ಮೂಕಿ ಬಂದಾಗ ಹಣ ಮಾಡಿದರು, ಟಾಕಿ ಬಂದಾಗ ಹಣ ಮಾಡಿದರು. ಅವರಲ್ಲಿ ಸಿನಿಮಾ ಮಾಡುವ ಪ್ರತಿಭೆ ಏನೂ ಇರಲಿಲ್ಲ, ಹಣ ಮಾಡುವ ಪ್ರತಿಭೆ ಬೇಕಾದಷ್ಟಿತ್ತು. ಇದನ್ನು ನೋಡಿದ ನಟರಿಗೆ ಸಿಟ್ಟು ಬಂತು ಸಿನಿಮಾ ಪ್ರತಿಭೆ ತಮ್ಮದು, ಹಣ ಮಾಡಿಕೊಳ್ಳುವವರು ಈ ಮಾರವಾಡಿಗಳು! ಆದ್ದರಿಂದ ಡಗ್ಲಾಸ್ ಫೇರ್‌ಬ್ಯಾಂಕ್ಸ್, ಮೇರಿ ಪಿಕ್‌ಫೋರ್ಡ್, ಚಾರ್ಲಿ ಚಾಪ್ಲಿನ್, ಗ್ರಿಫಿತ್ ಮುಂತಾದವರು ತಾವೇ ಚಿತ್ರ ತಯಾರಿಸಲು ಆರಂಭಿಸಿದರು. ಹಾಲಿವುಡ್‌ನ ನಿರ್ಮಾಪಕ ಹೆಗ್ಗಣಗಳಿಗೆ ಅಚ್ಚರಿಯಾಯಿತು. ಈ ಹುಚ್ಚುಚ್ಚಾಗಿದ್ದ ನಟರು, ನಿರ್ದೇಶಕರೇ ನಿರ್ಮಾಣಕ್ಕಿಳಿದರಲ್ಲ, ಅದಕ್ಕೆ ಅವರು ಚಾರ್ಲಿ, ಗ್ರಿಫಿತ್ ಮುಂತಾದವರ ಬಗ್ಗೆ ಹೇಳಿದರು, "ಹುಚ್ಚರು ತಮ್ಮ ಹುಚ್ಚಾಸ್ಪತ್ರೆಯನ್ನೇ ವಶಪಡಿಸಿಕೊಂಡಿದ್ದಾರೆ!



ಹ್ಯಾರಿ ಕೋಹನ್ ಎಂಬ ಹುಂಬ ನಿರ್ದೇಶಕ ಸತ್ತಾಗ ಅವನ ಶವಯಾತ್ರೆಯನ್ನು ವೀಕ್ಷಿಸಲು ಎರಡು ಸಾವಿರ ಜನ ನೆರೆದರು. ಆಗ ಹಾಸ್ಯನಟ ರೆಡ್ ಸ್ಕೆಲ್ಟನ್ ಆ ಬಗ್ಗೆ ತಮಾಷೆ ಮಾಡಿದ, "ಜನಕ್ಕೆ ಬೇಕಾದ್ದು ತೋರಿಸುತ್ತೇವೆಂದರೆ... ನೆರೆದೇ ನೆರೆಯುತ್ತಾರೆ!" ಜನಪ್ರಿಯ ಚಿತ್ರ ಮಾಡಿದ ನಿರ್ಮಾಪಕನ ಸಾವೂ ಜನಪ್ರಿಯ! ಮೇಯರ್ ಎಂಬ ಇನ್ನೊಬ್ಬ ನಿರ್ಮಾಪಕ ಸತ್ತಾಗ ಇನ್ನೊಬ್ಬ ಹೇಳಿದ. "ಸತ್ತಿರುವುದನ್ನು ಖಾತ್ರಿ ಪಡಿಸಿಕೊಳ್ಳಲು ಅಷ್ಟೊಂದು ಜನ ಸೇರಿರಬೇಕು!"

ಹುಮ್ಮಸ್ಸು ಮತ್ತು ಲೆಕ್ಕಾಚಾರ



ನಾನು ಹೀಗೆ ಎಂದು ಕಾಣುತ್ತದೆ ಅಥವಾ ಹೀಗಿಲ್ಲದಿದ್ದರೆ ಯಾವುದನ್ನೂ ಸರಿಯಾಗಿ ಮಾಡಲಾಗುವುದಿಲ್ಲ. ಹೋದ ವರ್ಷ "ಕಲ್ಲು ಕರಗುವ ಸಮಯ" ಬಂತು; ಆಮೇಲೆ ಒಂದು ವರ್ಷದಲ್ಲಿ ಒಂದು ಕತೆಯನ್ನಾದರೂ ಬರೆಯಬಹುದಿತ್ತು, ಬರೆಯಲಿಲ್ಲ, ಆಮೇಲೆ ಈ ವರ್ಷ ಜನವರಿಯಲ್ಲಿ ಈ ಸಾಹಿತ್ಯದ ಹುಚ್ಚು ಹಿಡಿಯಿತು. ಕಳೆದ ಹತ್ತು ತಿಂಗಳಿಂದ ಅಚ್ಚಾಗುತ್ತಲೇ ಇದ್ದ 'ಟೀಕೆ-ಟಿಪ್ಪಣಿ' ಅಚ್ಚು ಮಾಡಿಸಿ, ಹೊದಿಕೆ ಸಿದ್ಧಪಡಿಸಿ ಮುಗಿಸಿದೆ. ಬರೋಬರಿ ಒಂದು ವರ್ಷದ ತರುವಾಯ ಈ ಎರಡನೆಯ ಪುಸ್ತಕ. 1976ರ ಬಳಿಕ-ಸುಮಾರು ಹದಿನೈದು ವರ್ಷ ಸುಮ್ಮನಿದ್ದ ಈ ಆಸಾಮಿ ಮೊನ್ನೆ ಪತ್ರಿಕೆಯಲ್ಲಿ ನೀಲು ಪದ್ಯಗಳನ್ನು ನೋಡುತ್ತಿದ್ದಾಗ ಈ 'ಅಕ್ಕ' ಕಾದಂಬರಿ ಕಾಣಿಸಿತು. ಅದು ಒಂದೇ ತಿಂಗಳಲ್ಲಿ ಅಚ್ಚಾಯಿತು. ಇಲ್ಲಿಯವರೆಗೆ ಅಚ್ಚಾಗಿರುವ ಎಲ್ಲ ಪುಸ್ತಕಗಳಿಗಿಂತ ಚೆಂದವಾಗಿ ಅಚ್ಚಾಗಿದೆ. ಈ ಕತೆ ಹೇಳುವ ಪಾತ್ರವಾದ ಕ್ಯಾತನಿಗೆ ಖುಷಿಯಾಗುತ್ತದೆ!

ಹಾಗೆಯೇ ಬೇರೆಯವರ ಕೆಲವು ಪುಸ್ತಕ ತರಲು ಯೋಜನೆ ಹಾಕಿಕೊಳ್ಳುತ್ತಿದ್ದೇನೆ. ತೇಜಸ್ವಿ ತಮ್ಮದೇ ಆದ ಪುಸ್ತಕ ಪ್ರಕಾಶನದ ಯೋಚನೆಯಲ್ಲಿರುವುದರಿಂದ ಮೊದಲಿಗೆ ನಮ್ಮ ಬಿ.ಎ. ಶ್ರೀಧರ ಅವರ 'ಈ ಶತಮಾನ', 'ಬಾಪು ಚಿಂತನೆ'ಯನ್ನು ಒಂದು ಕಡೆ ತಂದು ಅಚ್ಚಿಗೆ ಸಿದ್ಧ ಮಾಡುತ್ತಿದ್ದೇವೆ; ಬಿ.ವಿ. ವೀರಭದ್ರಪ್ಪನವರ 'ವೈಚಾರಿಕ ಲೇಖನಗಳು' ಒಳ್ಳೆಯ ಪುಸ್ತಕವಾಗುತ್ತದೆ. ಆಮೇಲೆ ಮರೆಯುವ ಮುನ್ನ, ನೀಲೂ ಕವನಗಳ ಪುಸ್ತಕ ಪ್ರಕಟಿಸಬಹುದು.

ಹುಚ್ಚು ಹುಮ್ಮಸ್ಸಿಲ್ಲದಿದ್ದರೆ ಯಾವ ಕೆಲಸವೂ ಚೊಕ್ಕವಾಗಿ ಚಂದವಾಗಿ ಆಗುವುದಿಲ್ಲ. 'ಟೀಕೆ-ಟಿಪ್ಪಣಿ' ವೇಗವಾಗಿ ಖರ್ಚಾಗುತ್ತಿದ್ದಂತೆ ನಮ್ಮ ಓದುಗರನೇಕರು ಆ ಪುಸ್ತಕದಲ್ಲಿ ಇರುವ ಲೇಖನಗಳನ್ನು ಮೆಚ್ಚುತ್ತಲೇ ಅಲ್ಲಿಂದ ಹೊರಗುಳಿದ ಲೇಖನಗಳ ಬಗ್ಗೆ ಬರೆದು ಬೇಸರಿಸುತ್ತಿದ್ದಾರೆ. ಅದೇನೇ ಆಗಲಿ, ಎಲ್ಲ ಲೇಖನಗಳನ್ನೂ ನಾಲ್ಕು ಸಂಪುಟದಲ್ಲಿ ತಂದು ಪ್ರಶಂಸೆ, ಟೀಕೆ ಎದುರಿಸಿದ್ದರೇ ಒಳ್ಳೆಯದಿತ್ತು ಅನ್ನಿಸುತ್ತದೆ. ಈಗ ಅಂಥ ಯೋಜನೆ ಬೇಡ. 'ಟೀಕೆ-ಟಿಪ್ಪಣಿ' ಪುಸ್ತಕಕ್ಕೆ ಖರ್ಚಾಗಿರುವ ಒಟ್ಟು ದುಡ್ಡು ತೊಂಭತ್ತೈದು ಸಾವಿರ! ಆ ಮೊತ್ತ ಹಿಂದಿರುಗುವಷ್ಟರಲ್ಲಿ ಅದರ ಬಡ್ಡಿಯೇ ಹದಿನಾರು ಸಾವಿರ ಆಗಿರುತ್ತದೆ. ಲೆಕ್ಕಾಚಾರವಿಲ್ಲದ ಹುಮ್ಮಸ್ಸು ನಷ್ಟ ಅನುಭವಿಸಬೇಕಾಗುತ್ತದೆ. ■

'ಪರತಂತ್ರ' 'ಹೆಣ್ಣು' ಅಥವಾ 'ಕಪ್ಪು ಸಂಜೆ'



ಸಂಜೆ ಚೆಂದವೇ
ಕೆಂಪಾಗುವ ಆಗಸ
ತಂಪು ಕೆಂಪಿಂದ ಮರೆಯಾಗುವ
ಸೂರ್ಯ
ಎಲ್ಲವೂ ಶಾಂತಿಯೆಡೆಗೆ ಪಯಣ

ಆದರೆ
ನನ್ನೊಳಗಿನ ಕಥೆಯೇ ಬೇರೆ
ಚೆಂದವೆನಿಸದ ಸಂಜೆ
ಒಗ್ಗದ ಅಲಂಕಾರದಂತೆ
ಪ್ರಾಣ ಹಿಂಡುತ್ತದೆ

ಮನಸ್ಸು ಬೇಡುವ ಜೊತೆ
ಕಣ್ಣೆದುರಿಗೂ ಇರಬೇಕು
ಕಾಣುವಂತೆ-ಮುಟ್ಟುವಂತೆ
'ಇಲ್ಲ' ಎಂಬ ವಾಸ್ತವ
ನನ್ನನ್ನು ಈ ಸಂಜೆಯ ಸುಖದಿಂದ
ಬೇರೆ ಮಾಡಿದೆ.


ಎಷ್ಟೋ ಜನರಿಗೆ ಈ ಸಂಜೆ
ಸುಂದರ ಎನಿಸಬಹುದು
ರಮ್ಯ ಎನಿಸಬಹುದು
ಆದರೆ ಪರತಂತ್ರ ಹೆಣ್ಣಿಗೆ ಮಾತ್ರ
ಬೆಳದಿಂಗಳಂತೆ ಥಳ ಥಳಿಸುತ್ತಿರುವ
ಈ ಸಂಜೆಯ ಬಣ್ಣ ಕಪ್ಪು....

■ ಜ್ಯೋತಿ ಗುರುಪ್ರಸಾದ್

ಜುಗ್ಗಪ್ಪನ ಸ್ವಯಂಶಿಕ್ಷೆ

ಬಿಡಿ ಚಿತ್ರಗಳು

• ಈಶ



ಹೀಗೆಂದು ಒಂದು ಅದ್ಭುತವಾದ ತೀರ್ಮಾನ ಹೇಳಿದವನು ಮಿತ್ರ ಹಲಗೂರು ಸತೀಶ. ತಿಂಗಳಿಗೊಮ್ಮೆ ಕನಕಪುರ ಹತ್ತಿರದ ಹಲಗೂರಿನಿಂದ ಬೆಂಗಳೂರಿಗೆ ಬಂದು ಒಂದು ವಾರವಿದ್ದು ಹೋಗುವ ಸತೀಶ ನಮ್ಮ ಪತ್ರಿಕಾ ಬಳಗದ ಆಪ್ತಮಿತ್ರ. ಹೀಗೆ ಮೊನ್ನೆ ಅವನು ಸಿಕ್ಕ. ಆಫೀಸಲ್ಲಿ ಸದಾ ರಾಶಿ ರಾಶಿ ಭರದ ಕೆಲಸಗಳಲ್ಲಿ ಮುಳುಗಿರುವ ನಾವು ಒಂದು ಬ್ರೇಕ್ ಬೇಕು ಅನಿಸಿದಾಗ ಕ್ಯಾಪ್ಟನ್ ಗೌರಿಯ ಚೇಂಬರಿನಲ್ಲಿ ಲ್ಯಾಂಡ್ ಆಗಿಬಿಡುತ್ತೇವೆ. ಅಲ್ಲೊಂದು ಕಾಫಿ, ಧೂಮಲೀಲಾ ವಿನೋದದ ಜೊತೆಗೆ ಹತ್ತಿಪ್ಪತ್ತು ನಿಮಿಷಗಳ ಮಹಾನ್ ಹರಟೆಯ ಸೆಷನ್ ನಡೆಯುತ್ತದೆ. ಮ್ಯಾನೇಜರ್ ರಾಜು, ಸಹಚರ ಕುಮಾರ್ ಬುರದಿಕಟ್ಟಿ ಜೊತೆಗಿರುತ್ತಾರೆ. ಕೆಲವೊಮ್ಮೆ ಕವಿತಾ ಸೇರಿಕೊಂಡರಂತೂ ಇದೀ ಗಾಂಧಿಬಜಾರ್‌ಗೇ ಕೇಳಿಸುವಷ್ಟು ನಗು-ಗದ್ದಲ ನಮ್ಮದು.

ಹಾಗೇ ಮೊನ್ನಿನ ಹರಟೆಯಲ್ಲಿ ಜಿಪುಣರ ವಿಚಾರ ಬಂತು. ನನಗೊಬ್ಬ ಅಸಾಮಾನ್ಯ ಜಿಪುಣ ವೀರನ ಬಗ್ಗೆ ಆಗತಾನೆ ಮಾಹಿತಿ ಸಿಕ್ಕಿತ್ತು. ಅದಕ್ಕೆ 'ನಿಮಗೆ ಗೊತ್ತಿರೊ ಜಿಪುಣರ ಪ್ರಸಂಗ ಏನಾದರೂ ಇದ್ದರೆ ಹೇಳಿ' ಅಂದೆ.



ನಮ್ಮ ಕ್ಯಾಪ್ಟನ್ ಅವರ ಪರಿಚಿತರೊಬ್ಬರು ಒಡವೆ ಖರೀದಿಸಲು ಅಂಗಡಿಗೆ ಹೋಗಿದ್ದಾಗ, ತಮ್ಮ ಸ್ವಂತ ಕೆಲಸಕ್ಕೆ ಅಲ್ಲಿನ ಲ್ಯಾಂಡ್ ಲೈನ್ ಫೋನನ್ನೇ ಉಪಯೋಗಿಸಿ ಅಂಗಡಿ ಮಾಲೀಕನನ್ನು ಪೇಚಿಗೆ ಸಿಲುಕಿಸಿದ ಪ್ರಸಂಗ ಹೇಳಿದರು. ನಮ್ಮ ಕುಮಾರ್ ತನ್ನ ಮನೆ ಮಾಲೀಕನ ಜಿಪುಣತನದ ಹಲವು ಪ್ರಸಂಗ ಹೇಳಿದರಾದರೂ ಅವೆಲ್ಲಾ ಸ್ವಭಾವ ಬಹುತೇಕರಿಗಿರುತ್ತದೆ ಅನ್ನಿಸಿತು.

ಮಾತಿನ ನಡುವೆ ಕುವೆಂಪುಗಿದ್ದ ಜಿಪುಣತನದ ಬಗ್ಗೆಯೂ ಪ್ರಸ್ತಾಪವಾಯಿತು. ಅವರ ನೆನಪಿನ ದೋಣಿಯಲ್ಲೋ ಅಥವಾ ತೇಜಸ್ವಿಯವರ 'ಅಣ್ಣನ ನೆನಪು'ನಲ್ಲೋ ಆ ವಿಚಾರ ಬರುತ್ತದೆ. ಕುವೆಂಪು ಶೇವಿಂಗ್‌ಗೆಂದು ಒಂದು ಹೊಸ ಬ್ಲೇಡ್ ಹೊರ ತೆಗೆದರೆ ಅದರ ಕವರ್ ಮೇಲೆ ದಿನಾಂಕ ಬರೆದಿಡುತ್ತಿದ್ದರಂತೆ. ಒಂದು ಬ್ಲೇಡ್‌ನಿಂದ ಇಂತಿಷ್ಟು ಶೇವ್ ಆಗಲೇಬೇಕೆಂಬ ನಿರ್ಧಾರ ಅವರದು.

ಒಂದು ರೀತಿ ನೋಡಿದರೆ ಇದು ಜಿಪುಣತನದಂತೆ ಕಾಣಿಸಿದರೂ ಅದರೊಳಗೂ ಒಂದು ಶಿಸ್ತು, ಹಣದ ಬಗೆಗಿನ ಎಚ್ಚರ ಎದ್ದು ಕಾಣುತ್ತದೆ ಬಿಡಿ.

ಅವತ್ತು ಇದನ್ನೆಲ್ಲಾ ಕೇಳಿಸಿಕೊಂಡು ಹಲಗೂರು ಸತೀಶನೂ ಸುಮ್ಮನೆ ಕುಳಿತಿದ್ದ.

ಆಗ ನಾನು ಒಂದು ಬ್ರಹ್ಮಾಸ್ತ್ರ ಬಿಟ್ಟೆ ನೋಡಿ, ಅಲ್ಲಿದ್ದವರೆಲ್ಲಾ ಥಂಡಾ ಹೊಡೆದು ಹೋದರು.

ನನ್ನ ನೆಂಟನೊಬ್ಬನ ಕತೆ ಅದು. ಬೆಂಗಳೂರು ವಾಸಿ, ಸರ್ಕಾರಿ ಕೆಲಸದಲ್ಲಿದ್ದಾನೆ. ಸಂಬಳ ಇಪ್ಪತ್ತೈದು ಸಾವಿರ. ವಿಜಯನಗರದಲ್ಲಿ ಸ್ವಂತ ಮನೆ ಇದೆ. ಇನ್ನೊಂದು ಮನೆ ಬಾಡಿಗೆನೂ ಸಿಗುತ್ತೆ. ಮನೆಲಿರೋದು ಮೂರೇ ಜನ. ಗಂಡ, ಹೆಂಡತಿ, ಮಗ. ದಂಪತಿಗಳಿಬ್ಬರೂ ಗ್ರಾಜುಯೇಟ್‌ಗಳು.

ಏನಾಯಿತೆಂದರೆ ಒಂದು ದಿನ ಇವನ ಸಹೋದ್ಯೋಗಿಯೊಬ್ಬ ನನಗೆ ಸಿಕ್ಕು, 'ಯಾಕೆ ನಿಮ್ಮ...... ಕ್ಲೀನಾಗಿರಲ್ಲ' ಅಂತಾ ವಿಚಾರಿಸಿದ. ಇದೇನಪ್ಪಾ ಅಂತಾ ಅಲ್ಲಿ ಇಲ್ಲಿ ವಿಚಾರಿಸಿ ನೋಡಿದರೆ ಈ ದೊಡ್ಡ ಮನುಷ್ಯ ವಾರಕ್ಕೊಮ್ಮೆ ಭಾನುವಾರ ಮಾತ್ರ ಸ್ನಾನ ಮಾಡುತ್ತಿದ್ದ. ದಿನಾ ಸ್ನಾನ ಮಾಡಿದರೆ ನೀರು, ಕರೆಂಟು, ಸೋಪು ಎಲ್ಲಾ ಖರ್ಚಾಗುತ್ತಲ್ಲಾ ಅಂತ! ಒಂದು ಸಾರಿ ಒಗೆದು ಇಸ್ತ್ರೀ ಮಾಡಿದ ಪ್ಯಾಂಟು-ಶರ್ಟನ್ನು ಹತ್ತಾರು ಸಾರಿ ಬಳಸದೆ ಮತ್ತೆ ಒಗೆಯುತ್ತಿರಲಿಲ್ಲ ಎಂಬ ವಿಚಾರಗಳು ನನ್ನ ತನಿಖೆಯಿಂದ ಪತ್ತೆಯಾಯಿತು. ಒಂದು ಸಾರಿ ನನ್ನಕ್ಕ ರಾಜೇಶ್ವರಿಯ ಸಿಂಪ್ಲಿ ಕ್ಯೂಟ್ ಬ್ಯೂಟಿ ಪಾರ್ಲರಿಗೆ ಈ ದಂಪತಿಗಳ ಆಗಮನವಾಯಿತು. Eye brow, Facial, Hair cut , Pedicure ತರದ ಎಲ್ಲಾ ಸೇವೆ ಮಾಡಿಸಿಕೊಂಡು, ಕೊಟ್ಟದ್ದನ್ನೆಲ್ಲಾ ತಿಂದು, ಕಾಫೀನೂ ಕುಡಿದು ಹೊರಡುವಾಗ 'ತಗೋ' ಅಂತ ಹಣ ಕೊಡಲು ಬಂದಿದ್ದಾರೆ. ಇವಳಿಗೊ ಮನೆಗೆ ನೆಂಟರು ಬಂದರಲ್ಲಾ ಅನ್ನೋ ಸಂತೋಷವಿತ್ತು. ಹಣ ಬೇಕಿರಲಿಲ್ಲ, ಆದರೂ ಒತ್ತಾಯ ಮಾಡಿ ಕೈಗೆ ಹಣ ತುರುಕಿ ಮಿಂಚಿನ ವೇಗದಲ್ಲಿ ಮಾಯವಾದರಂತೆ ಆ ಜುಗ್ಗ ದಂಪತಿ. ಕೊನೆಗೆ ಅಕ್ಕ ಅಂಗೈ ಬಿಡಿಸಿ ನೋಡಿದರೆ ಅಲ್ಲಿ ಐದು ರೂಪಾಯಿಯ ನೋಟ್ ಇತ್ತು!

ನನಗೆ ಈ ತರದ ಅಪರೂಪದ ವ್ಯಕ್ತಿಗಳ ಬಗ್ಗೆ ವಿಪರೀತ ಕುತೂಹಲ. ಎಷ್ಟೇ ಕೆಲಸವಿರಲಿ, ಏನೇ ಒತ್ತಡಗಳಿರಲಿ ಅಂಥವರ ಬಗ್ಗೆ ತನಿಖೆ ಚಾಲೂ ಇಟ್ಟಿರುತ್ತೇನೆ. ಆಗಲೇ ಇವರ ಕೃತಕತನದ extreme ಅನ್ನುತ್ತಾರಲ್ಲ ಅಂತ ವಿವರ ಪತ್ತೆಯಾಯಿತು.

ಅದೇನೆಂದರೆ ಯಾವುದಾದರೂ ಮದುವೆಗೆ ಹೋದಾಗ ಇವರು ಒಂದನೆ ಪಂಕ್ತಿ ಮತ್ತೆ ಕೊನೆ ಪಂಕ್ತಿ ಹೀಗೆ ಎರಡೆರಡು ಸಾರಿ ಊಟ ಮಾಡಿ ಬರುತ್ತಾರಂತೆ. ಎರಡು ಊಟ, ಎರಡೆರಡು ಸಾರಿ ತೆಂಗಿನಕಾಯಿ, ಬಾಳೆಹಣ್ಣು, ಬ್ಲೌಸ್‌ಪೀಸ್, ಕೆಲವೊಮ್ಮೆ ಬೆಳ್ಳಿಯದ್ದೋ, ಸ್ಟೀಲ್‌ನದ್ದೋ ಪುಟ್ಟ ಉಡುಗೊರೆ ಸಿಗುತ್ತಲ್ಲಾ!

ನಾನು ಈ ಪ್ರಸಂಗವನ್ನೆಲ್ಲಾ ಹೇಳುತ್ತಿದ್ದಂತೆ ಎಲ್ಲರೂ ಬೆಕ್ಕಸಬೆರಗಾಗಿ ಹೋದರು. ನಕ್ಕೂ ನಕ್ಕೂ ರಾಜು ಕಣ್ಣಲ್ಲಿ ನೀರೇ ಬಂತು.

ಆಗ ಹೊರಬಂತು ನೋಡಿ ಈ ಮಾತು: 'ಜಿಪುಣತನ ಅನ್ನೋದು ಸ್ವಯಂ ಶಿಕ್ಷೆ' ಅಂದ ಹಲಗೂರು ಸತೀಶ ತಣ್ಣಗೆ

ನಿಜಾ ಅಲ್ಲವಾ ಇದು.

ಒಳ್ಳೇ ಊಟ, ಸ್ನಾನ, ಉತ್ತಮ ಬಟ್ಟೆ, ಓಡಾಡುವ ಸ್ವಾತಂತ್ರವಿರದ ಬದುಕೇ ಶಿಕ್ಷೆ ತಾನೆ. ಇಲ್ಲಿ ಸಾಕಷ್ಟು ಹಣ ಇದ್ದಾಗಲೂ ಇವರು ಊಟ ಮಾಡಲ್ಲ (ಪುಗಸಟ್ಟೆ ಊಟದ ಮಾತು ಬೇರೆ) ಬಟ್ಟೆ ಹಾಕಲ್ಲ, ನೆಟ್ಟಗೆ ಸ್ನಾನ ಮಾಡಲ್ಲ ದುಡ್ಡು ಖರ್ಚಾಗುತ್ತೆ ಅಂತಾ ಎಲ್ಲೂ ಹೋಗಲ್ಲ, ಬರಲ್ಲ... ಇವೆಲ್ಲಾ ಅವರಿಗೆ ಅವರೇ ವಿಧಿಸಿಕೊಂಡಿರುವ ಶಿಕ್ಷೆ ತಾನೆ. ಅಂತವರಿಗೆ ಬೇರೆ ಯಾರು ಯಾವ ಶಿಕ್ಷೆನೂ ಕೊಡಬೇಕಾದ್ದೇ ಇಲ್ಲ ಅನ್ನುವುದು ಸತೀಶನ ಮಾತಿನ ಅರ್ಥ.

ನಮಗೆಲ್ಲಾ ಇದು ನಿಜಾ ಅನ್ನಿಸಿತು.

ಕೊನೆಗೆ ನಮ್ಮ ಕ್ಯಾಪ್ಟನ್ "ಅವನು ನಿಮ್ಮ ಚಿಕ್ಕಪ್ಪನೂ ಅಲ್ಲ, ದೊಡ್ಡಪ್ಪನೂ ಅಲ್ಲ... ಬರೀ ಜುಗ್ಗಪ್ಪ" ಅಂತಹೊಸ ನಾಮಕರಣ ಮಾಡಿಬಿಟ್ಟರು.

"ನನ್ನ ಮಗಳೂ ಸಹ ಪಬ್ಬಿಗೆ ಹೋಗುತ್ತಾಳೆ" -ಸುಷ್ಮಾ ಸ್ವರಾಜ್

ಮಂಗಳೂರು ಪಬ್ ದಾಳಿ ಪ್ರಕರಣದ ಬಗ್ಗೆ ಬಿಜೆಪಿ ನಾಯಕಿ ಸುಷ್ಮಾ ಸ್ವರಾಜ್ ಹರಿಹಾಯ್ದರು. ನೈತಿಕ ಹೊಣೆಗಾರರು ಎಂಬ ಹೆಸರಿನಲ್ಲಿ ಶ್ರೀರಾಮಸೇನೆ ಕಾರ್ಯಕರ್ತರು ಯುವತಿಯರ ಮೇಲೆ ದಾಳಿ ಮಾಡಿದ್ದನ್ನು ಆಕೆ ತೀವ್ರವಾಗಿ ಖಂಡಿಸಿದರು. ಲಂಡನ್‌ನಲ್ಲಿ ವಾಸಿಸುತ್ತಿರುವ ತನ್ನ ಮಗಳೂ ಸಹ ಪಬ್ಬಿಗೆ ಹೋಗುತ್ತಾಳೆಂದೂ, ಆದರೆ ಅಲ್ಲಿ ಅವಳು ಕೇವಲ ಹಣ್ಣಿನ ರಸ ಮಾತ್ರ ತೆಗೆದುಕೊಳ್ಳುತ್ತಾಳೆಂದು ತಿಳಿಸಿದರು.



ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ವಿರುದ್ಧ ಬಳ್ಳಾರಿಯಲ್ಲಿ ಚುನಾವಣೆಗೆ ನಿಂತಾಗಿನಿಂದ ಸುಷ್ಮಾ ಸ್ವರಾಜ್ ತಾನು ಕರ್ನಾಟಕದ ಮಗಳೆಂದು ಹೇಳಿಕೊಳ್ಳುತ್ತಾರೆ. ಪ್ರತಿ ವರ್ಷವೂ ವರಮಹಾಲಕ್ಷ್ಮೀ ಹಬ್ಬದ ಆಚರಣೆಗೆ ಆಕೆ ಬಿಜೆಪಿ ನಾಯಕ ರೆಡ್ಡಿಗಳ ಮನೆಗೆ ಬರುತ್ತಾರೆ. ಇಂತಹ ಅಪ್ಪಟ ಭಾರತೀಯ ಸಂಪ್ರದಾಯವಾದಿಯ ಮಗಳು ಲಂಡನ್‌ನಲ್ಲಿ ಪಬ್‌ಗಳಿಗೆ ಹೋಗುತ್ತಾಳೆ. ಆದರೆ ಅಲ್ಲಿ ಆಕೆ ದ್ರಾಕ್ಷಾರಸ (Wine) ಕುಡಿಯುವುದಿಲ್ಲ, ಕೇವಲ ದ್ರಾಕ್ಷಿರಸ (Juice) ಕುಡಿಯುತ್ತಾಳೆ. ಇನ್ನು ಮುಂದೆ ನಮ್ಮ ಯುವತಿಯರೂ ಸಹ ಪಬ್ಬುಗಳಿಗೆ ಹೋಗಬಹುದು, ದ್ರಾಕ್ಷಿರಸ ಕುಡಿಯಬಹುದು.

ನೀತಿ: ಹಿಂದೂ ಸಂಘಟನೆಯ ನಾಯಕ-ನಾಯಕಿಯರ ಹೆಣ್ಣುಮಕ್ಕಳು ಪಬ್‌ಗೆ ಹೋದರೆ ತಪ್ಪಲ್ಲ!

-ಲಕ್ಷ್ಮೀನಾರಾಯಣ, ಬೆಂಗಳೂರು

ಕೆಲವು ಹೊಸ ಘಟನೆಗಳಿಂದಾಗಿ ನಮ್ಮಲ್ಲಿ ಹಳೆಯ ವಿಷಯಗಳನ್ನು ಹೊಸದೃಷ್ಟಿಕೋನದಿಂದ ನೋಡುವ ಮನಸ್ಥಿತಿ ಬೆಳೆಯುತ್ತದೆ ಹಾಗೂ ಹಳೆಯ ವಿಷಯದಲ್ಲಿ ಹೊಸ ಅರ್ಥ ಕಾಣಿಸುತ್ತದೆ. ಜೊತೆಗೆ ಹೊಸ ಪ್ರಶ್ನೆಗಳು ಹುಟ್ಟಿಕೊಂಡು ನಮ್ಮ ವೈಚಾರಿಕತೆಯನ್ನು ಕೆದಕುತ್ತವೆ.

ಕರಾವಳಿ ಪ್ರದೇಶದಲ್ಲಿ ಶ್ರೀಮಂತರು ನಡೆಸುವ 'ನಾಗಮಂಡಲ' ಉತ್ಸವವನ್ನು ಈ ಮೊದಲು ಹಲವಾರು ಬಾರಿ ನೋಡಿದ್ದೇನೆ. ಆಗೆಲ್ಲಾ ಇದು ನಮ್ಮ ಭಾಗದ ಒಂದು ಜನಪದ ಉತ್ಸವ ಎಂಬ ಗೌರವ ಭಾವನೆ ಇರುತ್ತಿತ್ತು. ಆದರೆ ಇತ್ತೀಚೆಗೆ ನಡೆಯುತ್ತಿರುವ 'ವ್ಯಾಲೆಂಟೈನ್ಸ್ ಡೇ' ಬಗೆಗಿನ ವಿವಾದದ ವಿಷಯ ನನ್ನ ತಲೆಯಲ್ಲಿದ್ದುದರಿಂದ ನಿನ್ನೆ ನಾನು ನೋಡಿದ ನಾಗಮಂಡಲೋತ್ಸವವನ್ನು ಬೇರೆಯೇ ದೃಷ್ಟಿಕೋನದಿಂದ ನೋಡುವಂತಾಯಿತು.

ಇಡೀ ರಾತ್ರಿ ನಡೆಯುವ ಈ ಉತ್ಸವದಲ್ಲಿ 'ನಾಗಪಾತ್ರಿಯು (ಗಂಡುನಾಗ)' 'ನಾಗಿಣಿ' ಪಾತ್ರಿಯನ್ನು ಬೆನ್ನತ್ತಿ ಹೋಗುವುದು ನಂತರ ಇಬ್ಬರೂ ಅಪ್ಪಿಕೊಳ್ಳುವುದು ಇಬ್ಬರೂ 'ಮಿಲನ'ದ ಭಂಗಿಯಲ್ಲಿ ನಿಲ್ಲುವುದು, ಕುಣಿಯುವುದು, ಮತ್ತೆ ಬೇರೆ ಬೇರೆಯಾಗಿ 'ಮಂಡಲ'ದ ಸುತ್ತ ನೃತ್ಯ ಮಾಡುವುದು ಮತ್ತೆ ಮಿಲನದ ಭಂಗಿ... ಹೀಗೆ ಒಂದೇ ರೀತಿಯ ನೃತ್ಯ ಇಡೀ ರಾತ್ರಿ ನಡೆದದ್ದು. ಬೇರೆ ಯಾವುದೇ ಕಲಾತ್ಮಕ ವಿಷಯ ಆ ನಾಗಮಂಡಲದಲ್ಲಿ ನನಗೆ ಕಾಣಿಸಲಿಲ್ಲ. ಒಟ್ಟಿನಲ್ಲಿ ನಾಗಮಂಡಲವೆಂದರೆ ಕೇವಲ ನಾಗ-ನಾಗಿಣಿಯರ ಮಿಲನವನ್ನು ಸಂಕೇತಿಸುವ ಉತ್ಸವವೆಂದಾಯಿತು. ಇದರಲ್ಲಿ ಜಾತಿ ಶ್ರೇಷ್ಠತೆ ಹಾಗೂ ಪುರುಷ ಶ್ರೇಷ್ಠತೆಯ ಸಂಕೇತವೂ ಅಡಗಿದೆ. 'ಗಂಡು-ನಾಗನ' ಪಾತ್ರಿ ಯಾವಾಗಲೂ ಬ್ರಾಹ್ಮಣನೇ ಆಗಿರಬೇಕು ಹಾಗೂ 'ನಾಗಿಣಿ'ಯ ಪಾತ್ರಿ ಯಾವಾಗಲೂ ಕೆಳಜಾತಿಯವನೇ ಆಗಿರಬೇಕು ಎಂಬ ನಿಯಮವಿದೆ. ಅದೇಕೆ 'ನಾಗಿಣಿ'ಯ ಪಾತ್ರ ಬ್ರಾಹ್ಮಣ ಮಾಡಿ 'ನಾಗನ' ಪಾತ್ರ ಕೆಳಜಾತಿಯವ ಮಾಡಬಾರದು ಎಂದು ನಾನು ಕೇಳಿದ್ದಕ್ಕೆ ಸಮರ್ಪಕ ಉತ್ತರ ಸಿಗಲಿಲ್ಲ.

ಆಧುನಿಕ ಮನಃಶಾಸ್ತ್ರದ ಪಿತಾಮಹ ಸಿಗ್ಮಂಡ್ ಫ್ರಾಯ್ಡ್ ಹೇಳಿರುವ ಅತಿಮುಖ್ಯ ವಿಷಯ : "ಮಾನವನ ಆಲೋಚನೆಯ ಕೇಂದ್ರ ಬಿಂದುವೇ ಸೆಕ್ಸ್." ಇದನ್ನೇ ಕೆಲವು ಧಾರ್ಮಿಕ ವಿಶ್ಲೇಷಣೆಗಾರರು ಹಿಂದೂ ಧರ್ಮಕ್ಕೂ ವಿಸ್ತರಿಸಿರುವರು: "ಧರ್ಮದ ಕೇಂದ್ರ ಬಿಂದುವೇ ರತಿಕಾಮ."

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಟಾಟಾ ಕಂಪೆನಿಗೆ ಕಾವೇರಿ ನೀರನ್ನು ಹರಾಜು ಹಾಕಿರುವ ಬಿ.ಎಸ್.ಯಡಿಯೂರಪ್ಪನವರ ಭಾಜಪಾ ಸರ್ಕಾರದ ಮತ್ತೊಂದು ಮಹತ್ಸಾಧನೆಯನ್ನು ಜನತೆಗೆ ತಿಳಿಸಿದ ತಮಗೆ ಧನ್ಯವಾದಗಳು. ಸರ್ಕಾರವೇ ಹಗಲು ದರೋಡೆಗಿಳಿದಿರುವುದಕ್ಕೆ ಈ ಹಗರಣ ಅತ್ಯುತ್ತಮ ಉದಾಹರಣೆ. ಹತ್ತು ಲಕ್ಷ ಜನರಿಗೆ ನೀರು ಸರಬರಾಜು ಮಾಡುತ್ತಿರುವ ಮೈಸೂರು ಮಹಾನಗರಪಾಲಿಕೆಯನ್ನು ಬದಿಗೊತ್ತಿ ಕೇವಲ ಎರಡೂವರೆ ಲಕ್ಷ ಜನರಿಗೆ ನೀರು ಸರಬರಾಜು ಮಾಡಿರುವ ಟಾಟಾರವರ JUSCO ಗೆ 176 ಕೋಟಿ ರೂ.ಗಳನ್ನು ಕೊಟ್ಟಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಪ್ರತಿಭಟಿಸಬೇಕಾಗಿರುವುದು ಈ ರಾಜ್ಯದ ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ. ಇದು ಕೇವಲ ಮೈಸೂರಿನ ಜನರಿಗೆ ಸಂಬಂಧಿಸಿದ ಪ್ರಶ್ನೆ ಮಾತ್ರವಲ್ಲ, ರಾಜ್ಯ ಸರ್ಕಾರದ ಈ ಅವ್ಯವಹಾರವನ್ನು ನಾವಿಂದು ಮೂಕಪ್ರೇಕ್ಷಕರಂತೆ ಸಹಿಸಿದರೆ ಮುಂದೊಂದು ದಿನ ಇಡೀ ಕರ್ನಾಟಕದ ಜನತೆ, ಖಾಸಗಿ ಕಂಪೆನಿಗಳಿಗೆ ಅವರು ಹೇಳಿದಷ್ಟು ಹಣ ಕೊಟ್ಟು ಅವರಿಂದ ಕುಡಿಯುವ ನೀರನ್ನು ಪಡೆಯಬೇಕಾದಂತಹ ದುಸ್ಥಿತಿ ಖಂಡಿತಾ ಬರುತ್ತದೆ.

ಇಂತಹ ಒಂದು ದುರಂತಕ್ಕೆ ರಾಜ್ಯ ಸರ್ಕಾರ ಈ ಹಗರಣದ ಮೂಲಕ ಈಗಾಗಲೇ ನಾಂದಿ ಹಾಡಿದೆ. 'ಮಿನರಲ್ ವಾಟರ್' ಎಂಬ ಹೆಸರಿನಲ್ಲಿ ಖಾಸಗಿ ಕಂಪನಿಗಳು ಪ್ಲಾಸ್ಟಿಕ್ ಬಾಟಲ್‌ಗಳಲ್ಲಿ ನೀಡುತ್ತಿರುವ ನೀರನ್ನು ಈಗಾಗಲೇ ದುಬಾರಿ ಬೆಲೆ ತೆತ್ತು ಅನಿವಾರ್ಯ ಸಂದರ್ಭಗಳಲ್ಲಿ ಕುಡಿಯುತ್ತಿದ್ದೇವೆ. ಇನ್ನು ಮುಂದೆ ಇಂತಹ ದುರ್ಗತಿ ಮಹಾನಗರ ಪಾಲಿಕೆಗಳಿಂದ ಹಿಡಿದು ಗ್ರಾಮಪಂಚಾಯತಿಗಳವರೆಗೂ ವ್ಯಾಪಿಸುವುದಕ್ಕೆ ಮೊದಲು ಕನ್ನಡಿಗರು ಎಚ್ಚೆತ್ತುಕೊಳ್ಳಬೇಕು. ಲಾಲೂ ಪ್ರಸಾದ್ ಯಾದವ್‌ರವರು ಹೇಳಿದಂತೆ ನಾವು ಮುತ್ಯಾಳರಾಗಬಾರದು.

ಹೊಗಳಿಕೆ

ಕರ್ನಾಟಕದ ಜನತೆ ಭಾಜಪಾಗೆ ಅಧಿಕಾರವನ್ನು ನೀಡಿರುವುದು, ಕನ್ನಡ ನಾಡಿನ ಅಮೂಲ್ಯವಾದ ನೈಸರ್ಗಿಕ ಸಂಪತ್ತನ್ನು ಲಂಗು-ಲಗಾಮಿಲ್ಲದೆ ಮನಸೋಇಚ್ಛೆ ಖಾಸಗಿ ಕಂಪನಿಗಳಿಗೆ ಧಾರೆ ಎರೆಯಲೆಂದಲ್ಲ.

-ಎಸ್.ಎಸ್. ವೆಂಕಟೇಶ್, ಸೊಂಡೆಕೊಪ್ಪ

'ಲಂಕೇಶ್' ನೋಡುತ್ತಾ ಪ್ರತೀವಾರವೂ ಹೆಮ್ಮೆ ಸಂತೋಷ ಎನ್ನಿಸುವಂತೆ ಪ್ರಗತಿಪರ ನಿಲುವಿನ ಬದ್ಧತೆಯ ಪರಿಶ್ರಮ ಇಷ್ಟವಾಗುತ್ತಿವೆ. ಇದೀಗ ಮಾರ್ಚ್ 8ರಂದು ಬಿಡುಗಡೆಯಾಗಲಿರುವ ಪುಸ್ತಕಗಳ ಬಗ್ಗೆ ಎಷ್ಟು ಚೆನ್ನಾಗಿ ಅಡಕವಾಗಿ ಬರೆದಿದ್ದೀರಿ! ಮಹಾರಾಷ್ಟ್ರದ ಖೈರ್ಲಾಂಜಿ ಗ್ರಾಮದ ದಲಿತ ಕುಟುಂಬದ ಮೇಲೆ ನಡೆದ ದೌರ್ಜನ್ಯ ಓದಿ ಎದೆ ನಡುಗಿಹೋಯಿತು. ನೀವು ತರುತ್ತಿರುವ ಈ 'ದಲಿತಪರ ನಿಲುವಿನ' ಪುಸ್ತಕದಿಂದ ಜನರ ಕಣ್ತೆರೆದು ಕ್ರೌರ್ಯಕ್ಕೆ ಆಸ್ಪದವಿಲ್ಲದಂತಾಗಲಿ ಎಂದು ಆಶಿಸುತ್ತೇನೆ. 'ನೀಲು ಭಾಗ-2', 'ಮರೆಯುವ ಮುನ್ನ' ಎಲ್ಲಾ ಎಂದಿನಂತೆ ಕನ್ನಡ ಸಾಹಿತ್ಯಲೋಕದ ಸಾಂಸ್ಕೃತಿಕ ರಾಯಭಾರಿಗಳಾಗುವುದರಲ್ಲಿ ಸಂಶಯವೇ ಇಲ್ಲ,

'ಲಂಕೇಶ್', 'ಗೈಡ್', 'ಪ್ರಕಾಶನ' ಎಂದೆಲ್ಲಾ ಪರಿಶ್ರಮ ವಹಿಸಿ ಶ್ರದ್ಧೆಯಿಂದ ದುಡಿಯುತ್ತಿರುವ ನಿಮ್ಮ ಇಡೀ ತಂಡದ ಉತ್ಸಾಹವನ್ನು ಅಭಿನಂದಿಸುತ್ತೇನೆ.

-ಜ್ಯೋತಿ ಗುರುಪ್ರಸಾದ್, ಕಾರ್ಕಳ

ರಾಜ್ಯವನ್ನಾಳುತ್ತಿರುವ ಮುಖ್ಯಮಂತ್ರಿ ಸೀದಾ ಆಕಾಶದಿಂದ ಉದುರಿ ಬದ್ದಂತವನಲ್ಲದಿದ್ದರೂ ತೀರಾ ಕಳಂಕಿತನೆಂಬ ಅನುಮಾನಾಸ್ಪದ ಹಿನ್ನೆಲೆ ಉಳ್ಳವನಾಗಿಲ್ಲದಿರಲಿ ಎಂಬ ಸದುದ್ದೇಶದಿಂದ ಶಿವಮೊಗ್ಗದ ವಕೀಲ ಶೇಷಾದ್ರಿಯವರು ಈಗ ಎತ್ತಿರುವ ಮೈತ್ರಾದೇವಿ ಪ್ರಕರಣ ಸರಿಯಾಗೇ ಇದೆ. (ಈ ಬಗ್ಗೆ ಸಂಬಂಧಿತ ಯಡಿಯೂರಪ್ಪ ನವರೇ ಸುಮ್ಮನಿದ್ದರೆ ಕುಂಬಳ ಕಾಯಿ ಕಳ್ಳ ಅಂದ್ರೆ ಇನ್ನಾರೋ ಹೆಗಲು ಮುಟ್ಕೊಂಡ್ರು ಎಂಬ ಹೊಸ ಗಾದೆಯಂತೆ ನಮ್ಮ ಸದಾನಂದ ಗೌಡ್ರು ಮಾತ್ರ ಶೇಷಾದ್ರಿಯವರ ವಿರುದ್ಧ ತಮ್ಮ ಮಾಮೂಲಿ 'ಪಿತೂರಿ'ಯ ಭಾಷೆಯಲ್ಲಿ ಕಿಡಿಕಾರಿದ್ದಾರೆ)


ಅನೇಕರು ವಾದಿಸುವಂತೆ ದೇವಿಯವರು ಕೊಲೆಗೀಡಾಗಿದ್ದಾರೆಂಬ ಮಾತು ಸರಿಯೆನಿಸದಿದ್ದರೂ (ಒಂದು ದೊಡ್ಡ ಜೀವವನ್ನು ಒಬ್ಬರೇ ಸೇರಿ ಕೊಲೆ ಮಾಡುವಷ್ಟು ಯಡಿಯೂರಪ್ಪ ಧೈರ್ಯಸ್ಥರೇನಲ್ಲ) ಅವರ ಈ ಸಾವು 'ಅಸಹಜ'ವಾದುದು ಎಂಬುದು ಮಾತ್ರ ಹಗಲಿನಷ್ಟೇ ನಿಚ್ಚಳವಾಗಿದೆ. ಸಂಸಾರದಲ್ಲಿ 'ಬಿರುಗಾಳಿ' ಎಬ್ಬಿಸಿದಂತ ಅನ್ಯಹೆಣ್ಣಿನ ಕಾರಣಕ್ಕಾಗಿ ಹುಟ್ಟಿಕೊಂಡ ರಾದ್ಧಾಂತದಲ್ಲಿ ಈ ಸಾವು ಅನಿರೀಕ್ಷಿತವಾಗಿ ಸಂಭವಿಸಿರುವ ಸಾಧ್ಯತೆಗಳಿರಬಹುದೇ ವಿನಃ ಉದ್ದೇಶಪೂರ್ವಕವಾದ ಕೊಲೆಯಾಗಿರಲಾರದು.

-ರವಿ ಮತ್ತೂರ್, ಪುತ್ತೂರು

...ಂಕಟ ಹರಣ ವೆಂಕಟ!

...ಮೇಶ್ ಅರವಿಂದ್ ಕೊನೆಗೂ ಪರೀಕ್ಷೆಯಲ್ಲಿ ...ದ್ದಾರೆ. ರಮೇಶ್ ರಿಮೇಕ್ ಚಿತ್ರಗಳ ಮುಖಾಂತರ ...ಕರಾಗಿ ಕಾಲಿಟ್ಟಿದ್ದರು. ಅವರ ಸ್ವಮೇಕ್ ...ನದ ಚಿತ್ರ 'ಆಕ್ಸಿಡೆಂಟ್' ಮುಗ್ಗರಿಸಿದಾಗ ... ಇನ್ನು ಮುಂದೆ ಫುಲ್‌ಟೈಂ ನಾಯಕನಟ ...ರೆ ಎಂದೇ ಉದ್ಯಮದವರು ಭಾವಿಸಿದ್ದರು.

...ರೆ ಈಗ ತೆರೆಕಂಡಿರುವ 'ವೆಂಕಟ ಇನ್ ... ಚಿತ್ರ ರಮೇಶ್ ನಿರ್ದೇಶನದ ಪ್ರತಿಭೆಯನ್ನು ...ಸುತ್ತದೆ. ಇದು ಸ್ವಮೇಕ್ ಚಿತ್ರ. ಆದರೆ ಎಂದಿನಂತೆ ... ಹಾಸ್ಯ ಕಥಾವಸ್ತುವನ್ನೇ ಆಯ್ಕೆಮಾಡಿ ...ದ್ದಾರೆ. ಚಿತ್ರದಲ್ಲಿ ಲಾಜಿಕ್ ಎಂಬುದು ಇಲ್ಲದಿ... ಆರಂಭದಿಂದ ಅಂತ್ಯದವರೆಗೂ ಪ್ರೇಕ್ಷಕ ಬಿದ್ದು ...ಗುವಂತೆ ರಮೇಶ್ ನಿರೂಪಿಸಿದ್ದಾರೆ.



...ತ್ತೀಚೆಗೆ ಲಾಂಗ್, ಮಚ್ಚು ಮತ್ತು ರೌಡಿಸಂ ...ತ್ರಗಳನ್ನು ನೋಡಿ ನೋಡಿ ವಾಕರಿಕೆ ಬಂದವರಿಗೆ ...ತ್ರ ಖಂಡಿತವಾಗಿಯೂ ರಿಲೀಫ್ ನೀಡುತ್ತದೆ. ... ಸಂಭಾಷಣೆ, ಪಾತ್ರಗಳ ಜೋಡಣೆ ಎಲ್ಲವೂ ... ಹಾಸ್ಯದ ಹೆಸರಿನಲ್ಲಿ ಅಶ್ಲೀಲ ಜೋಕ್ಸ್‌ಗಳು ...ಕಂಡುಬಂದರೂ ಅದು ಸಭ್ಯತೆಯ ಎಲ್ಲೆಯನ್ನು ...ದ್ರದಿಲ್ಲ. ಈ ಚಿತ್ರದ ವಿಶೇಷತೆಯೆಂದರೆ ರಮೇಶ್ ... ಪಾತ್ರದಲ್ಲಿದ್ದರೂ ಚಿಕ್ಕಮಟ್ಟ ಪಾತ್ರ ನಿರ್ವಹಿಸಿ ...ಲಾವಿದರೂ ಮೆಚ್ಚುಗೆಯಾಗುತ್ತಾರೆ. ಉದಾಹರ... ದೇವದಾಸ್ ಕಾಪಿಕಾಡ್ ಮತ್ತು ಉಮೇಶ್ ...ಪಾತ್ರನಿರ್ವಹಣೆ ಸೂಪರ್. ಹಾಗೆಯೇ ಮೊದಲ ... ಶರ್ಮಿಳಾ ಮಾಂಡ್ರೆ ಎಂಬ ಬೆಡಗಿ ತನ್ನ ... ಜೀವತುಂಬಿದ್ದಾಳೆ. ಹಾಸ್ಯನಟರಾದ ಬ್ಯಾಂಕ್ ...ನ್, ದತ್ತಣ್ಣ, ಕರಿಬಸವಯ್ಯ, ಡಿಂಗ್ರಿ ನಾಗರಾಜ್ ... ನಕ್ಕೂ ನಲಿಸುತ್ತಾರೆ. ಒಟ್ಟಾರೆಯಾಗಿ ಒಂದೇ ... ಹೇಳುವುದಾದರೆ ನಿಮ್ಮ ಕಾಸಿಗೆ ಈ ಚಿತ್ರ ... ಮಾಡಲಾರದು. ಅಕ್ಷರಮಟ್ಟಿಗೆ ರಮೇಶ್ ...ದ್ ಯಶಸ್ವಿಯಾಗಿದ್ದಾರೆ. ಅಮೃತಮಹೋತ್ಸವದ ...ಸಂದರ್ಭದಲ್ಲಿ ಕೊನೆಗೂ ಹೊಡಿ-ಬಡಿ-ಕಡಿ ... ಹೊರತಾದ ಹಾಸ್ಯದ ಹೊನಲನ್ನು ಹರಿಸುವ ...ದಿದ್ದು ಸಂತೋಷ.

ಸಪ್ಪೆ 'ಸಂಭಾಷಣೆ'!



...ಸಂಭಾಷಣೆ' ಎಂಬ ... ಚಿತ್ರದ ಬಗ್ಗೆ ವಿಶೇಷ ... ಹೇಳುವಂಥಾದ್ದೇನೂ ... ಆದರೆ ಮೊದಲ ... ಚಿತ್ರವನ್ನು ನಿರ್ದೇಶಿಸಿ ... ರಾಜಶೇಖರ್ ಪರ ... ಹಾಗೆಯೇ ಮೊದಲ ... ಕ್ಯಾಮೆರಾ ಎದುರಿಸಿದ ...ಕ ಸಂದೀಪ್ ಕೂಡಾ ಓಕೆ ಅನ್ನಬಹುದು.

...ಡವಟ್ಟಾಗಿರುವುದು ಕಥಾವಸ್ತುವಿನ ಆಯ್ಕೆಯಲ್ಲಿ ... ಮೂರಾರು ಚಿತ್ರಗಳು ಕನ್ನಡದಲ್ಲಿ ಬಂದು ...ವೆ. ಅಷ್ಟೆ ಯಾಕೆ? ಮೊನ್ನೆ ಮೊನ್ನೆ ಬಂದ ... ಇಂತೂ ಪ್ರೀತಿ ಬಂತು" ಚಿತ್ರದ ಕಥೆಗೂ ...ತ್ರದ ಕಥೆಗೂ ಸಾಕಷ್ಟು ಸಾಮ್ಯತೆಗಳಿವೆ. ರಮ್ಯಾ... ಆ ಚಿತ್ರ ಒಂದೇ ವಾರಕ್ಕೆ ಎತ್ತಂಗಡಿಯಾಗಿತ್ತು ...ಮೇಲೆ ಈ ಚಿತ್ರದ ಆಯಸ್ಸು ಎಷ್ಟಿರಬಹುದೆಂದು ... ಲೆಕ್ಕಹಾಕಿ.

... ಚಿತ್ರದ ನಾಯಕಿ ಹರಿಪ್ರಿಯಾ ಮುದ್ದುಮುದ್ದಾಗಿ ...ವುದು, ಚಂದ್ರು, ಅವರ ಕ್ಯಾಮೆರಾ ಕೈಚಳಕ ...ಗಿ ದೃಶ್ಯಗಳು ಚೆನ್ನಾಗಿ ಮೂಡಿಬಂದಿರುವುದು ...ಗೆ ನೆಮ್ಮದಿ ನೀಡುತ್ತವೆ. ಇವೆರಡರ ಹೊರತಾಗಿ ...ಭಾಷಣೆ'ಯಲ್ಲಿ ಹೇಳಿಕೊಳ್ಳುವಂತಹದ್ದೇನೂ ಇಲ್ಲ.

■ ಶೆಣೈ




ಕಲಾಕೇಸರಿ ಕಾಲವಾಗಿ ಭರ್ತಿ 25 ವರ್ಷ

ನೆನಪಿನ ಅಂಗಳದಲ್ಲಿ

ಉದಯ್‌ಕುಮಾರ್

ಕನ್ನಡ ಚಿತ್ರರಂಗ ಈಗ ತನ್ನ ಅಮೃತಮಹೋತ್ಸವದ ಸಂಭ್ರಮದಲ್ಲಿ ಹಿರಿಹಿರಿ ಹಿಗ್ಗುತ್ತಿದೆ. ಆದರೆ ಕನ್ನಡದ ಕಲಾಕೇಸರಿ ಉದಯ್ ಕುಮಾರ್ ಬದುಕಿದ್ದರೆ ಇದೇ ಮಾರ್ಚ್ 4ಕ್ಕೆ ಅವರಿಗೆ 77 ವರ್ಷ ತುಂಬುತ್ತಿತ್ತು. ಮಾತ್ರವಲ್ಲ ಉದಯ್‌ಕುಮಾರ್ ಎಂಬ 'ಬೆಟ್ಟದ ಹುಲಿ' ಕಾಲವಾಗಿ ಭರ್ತಿ ಇಪ್ಪತ್ತೈದು ವರ್ಷಗಳೇ ಸಂದುಹೋಗಿದೆ ಎಂಬುದು ಯಾರ ಗಮನಕ್ಕೂ ಬಂದಂತಿಲ್ಲ.

ಈ ಸಂದರ್ಭದಲ್ಲಿ ಅವರ ಮನೆ, ಮಡದಿಯರು ಮತ್ತು ಮಕ್ಕಳು ಹೇಗಿದ್ದಾರೆ? ಎಂದು ಹುಡುಕಹೊರಟ 'ಲಂಕೇಶ್'ಗೆ ದೊರೆತಿದ್ದು ಅವರ ಮಗ ವಿಕ್ರಂ ಉದಯ್ ಕುಮಾರ್. ಎಲ್ಲರಿಗೂ ತಿಳಿದಿರುವಂತೆ ಉದಯ್ ಕುಮಾರ್ ಅವರು ಅಫಿಷಿಯಲ್ ಆಗಿಯೇ ಇಬ್ಬರು ಮಡದಿಯರನ್ನು ಹೊಂದಿದ್ದರು. ಆ ಪೈಕಿ ಮೊದಲ ಪತ್ನಿ ಕಮಲಮ್ಮನವರ ಹಿರಿಯ ಪುತ್ರನೇ ಈ ವಿಕ್ರಂ.



ಪುಟ್ಟಣ್ಣ ಕಣಗಾಲ್

ನೋಡಲು ತಂದೆಯ ತದ್ರೂಪದಂತಿರುವ ವಿಕ್ರಂರ ನಡೆ, ನುಡಿ, ಹೇರ್‌ಸ್ಟೈಲು.. ಎಲ್ಲವೂ ತಂದೆಯಂತೆಯೇ. ಒಂದೇ ಒಂದು ವ್ಯತ್ಯಾಸವೆಂದರೆ ಅಪ್ಪನ ಗತ್ತು, ಗೈರತ್ತುಗಳು ಮಾತ್ರ ಇವರಲ್ಲಿಲ್ಲ.

ಅದೊಂದು ಕಾಲವಿತ್ತು. ಆನೇಕಲ್‌ನ ಕರ್ಮಠ ಬ್ರಾಹ್ಮಣರ ಕುಟುಂಬದಲ್ಲಿ ಹುಟ್ಟಿ ರಂಗಭೂಮಿ ಮತ್ತು ಚಿತ್ರರಂಗದಲ್ಲಿ ಸಾಕಷ್ಟು ಹೆಸರು ಮಾಡಿದ್ದ ಉದಯ್ ಕುಮಾರ್ ಏಕಕಾಲದಲ್ಲಿ ಕನ್ನಡ, ತಮಿಳು ಮತ್ತು ತೆಲುಗು ಚಿತ್ರರಂಗದಲ್ಲಿ ಸಖತ್ ಪಾಪ್ಯುಲಾರಿಟಿ ಪಡೆದಿದ್ದರು. ಬೆಂಗಳೂರು, ಹೈದ್ರಾಬಾದ್ ಮತ್ತು ಚೆನ್ನೈ ಮೂರೂ ಕಡೆ ವಿಮಾನದಲ್ಲೇ ವಿಹರಿಸುತ್ತಿದ್ದರು ಉದಯ್ ಕುಮಾರ್. ವಾರಕ್ಕೆ ಮೂರಕ್ಕಿಂತ ಹೆಚ್ಚುಬಾರಿ ವಿಮಾನದಲ್ಲಿ ಪ್ರಯಾಣಿಸಿದವರಿಗೆ ಆಗ ಏರ್‌ವೇಸ್‌ನವರು ಒಂದೊಂದು ಸೂಟ್‌ಕೇಸ್ ನೀಡುತ್ತಿದ್ದರು. ಅಂಥ 187 ಸೂಟ್‌ಕೇಸ್‌ಗಳನ್ನು ಉದಯ್‌ಕುಮಾರ್ ಸಂಪಾದಿಸಿದ್ದರೆಂದರೆ, ಅವರೆಷ್ಟು ಬಾರಿ ವಿಮಾನವೇರಿರಬಹುದು ಲೆಕ್ಕಹಾಕಿ.

ದಿನಕ್ಕೆ ಮೂರ್ಮೂರು ಷೆಡ್ಯೂಲ್‌ಗಳಲ್ಲಿ ಚಿತ್ರೀಕರಣಕ್ಕೆ ಅಟೆಂಡ್ ಆಗುತ್ತಿದ್ದ ಉದಯ್ ಕುಮಾರ್ ಒಂದಲ್ಲಾ, ಎರಡಲ್ಲಾ ನಾಲ್ಕು ವಿಲಾಸೀ ಕಾರುಗಳನ್ನು ಸಂಪಾದಿಸಿದ್ದರು. ಅಷ್ಟೇ ಅಲ್ಲ ಅವರು ವಾಸ್ತವ್ಯ ಹೂಡುತ್ತಿದ್ದದ್ದು ಸ್ಟಾರ್ ಹೋಟೇಲುಗಳಲ್ಲಿ, ಆಗಲೇ ದೊಡ್ಡ ಮಟ್ಟದ ಸ್ಟಾರ್‌ಡಂ ಅನ್ನು ಕಂಡಿದ್ದ ಉದಯ್ ಕುಮಾರ್ ಅವರ ಅಂದಿನ ಆಡಂಬರ, ಆಢ್ಯತನ ವರ್ಣಿಸಲಸಾಧ್ಯ.

ಆದರೆ ಕಾಲ ಬದಲಾಯಿತು. ಕಡೆಕಡೆಗೆ ಕೇವಲ ಐದು ಸಾವಿರ ರೂಪಾಯಿ ಕೊಡುತ್ತಿದ್ದ ಸಣ್ಣಪುಟ್ಟ ಪಾತ್ರಗಳಿಗೂ ಉದಯ್ ಕುಮಾರ್ ಪರದಾಡುವಂತಾಯಿತು. ಕೆಲವೊಮ್ಮೆ ಅಂತಹ ಅವಕಾಶಗಳು ಸಿಗುತ್ತಿದ್ದರೂ ಅವರ ಶ್ರಮಕ್ಕೆ ಬರಬೇಕಿದ್ದ ಬಾಬ್ತು ಮಾತ್ರ ಕೈಸೇರುತ್ತಿರಲಿಲ್ಲ. ತಾವೇ ಸ್ಥಾಪಿಸಿದ 'ಉದಯ ಕಲಾನಿಕೇತನ'ವೂ ಇವರ ಕೈಹಿಡಿಯಲಿಲ್ಲ. ಆಗ ತಮ್ಮ ವಿಲಾಸೀ ಜೀವನ ಶೈಲಿಯನ್ನು ತೊರೆದ ಅವರು ಸಿನಿಮಾಗಳ ಬದಲು ವೃತ್ತಿರಂಗಭೂಮಿಯನ್ನೇ ಅವಲಂಬಿಸಬೇಕಾಯಿತು. ಕಾರುಗಳ ಬದಲು ಆಟೋ ಏರುವಂತಾಯಿತು. ಕೆಟ್ಟು ಬದುಕಿದರೂ, ಬದುಕಿ ಕೆಡಬಾರದು ಎಂಬಂತಾಗಿತ್ತು ಉದಯ್ ಕುಮಾರ್‌ರ ಬದುಕು.

ಉದಯ್ ಕುಮಾರ್ ಅವರ ಆ ಪರಿಸ್ಥಿತಿಗೆ ಅವರೇ ಕಾರಣ ಹೊರತು ಬೇರಾರೂ ಅಲ್ಲ. ಉದಯ್ ಕುಮಾರ್ ಒರಟು ಸ್ವಭಾವದವರಾದರೂ ಸಹೃದಯಿ. ಈ ಮಾಯಾಲೋಕದಲ್ಲಿ ಯಾರನ್ನು ನಂಬಬೇಕು? ಯಾರನ್ನು ನಂಬಬಾರದು ಎಂಬ ಅರಿವು ಕೂಡಾ ಅವರಲ್ಲಿರಲಿಲ್ಲ. ಕಷ್ಟ ಹೇಳಿಕೊಂಡು ಬಂದವರಿಗೆ ಸದಾ ಸಹಾಯ ಹಸ್ತ ನೀಡುತ್ತಿದ್ದ ಉದಯ್‌ಕುಮಾರ್ ಎಂದೂ ತನಗೆ, ತನ್ನ ಮನೆಯವರಿಗೆ ಎಂದು ಯೋಚಿಸಲಿಲ್ಲ. ಕೇಳಿದ್ದವರಿಗೆಲ್ಲ ದಾನ ಮಾಡುತ್ತಿದ್ದ ಉದಯ್ ಕುಮಾರ್ ಸ್ವತಃ ಕಷ್ಟದಲ್ಲಿ ಸಿಲುಕಿದಾಗ ಯಾರೂ ಅವರ ಕೈ ಹಿಡಿಯದಿದ್ದದ್ದು ಅವರ ಬದುಕಿನ ಹಲವಾರು ವಿಪರ್ಯಾಸಗಳಲ್ಲಿ ಒಂದು.


ಇದೆಲ್ಲದರ ಜೊತೆಗೆ ಕಿರಿ ಹೆಂಡತಿಯ ಮಗ ವಿಶ್ವವಿಜೇತನ ಕುಡಿತ, ಚಟ, ಕೆಟ್ಟ ಸಂಪರ್ಕ ಎಲ್ಲವೂ ಮಿತಿಮೀರತೊಡಗಿತ್ತು. ಆತನ ವಿಲಕ್ಷಣ ಬದುಕನ್ನು ಕಣ್ಣಾರೆ ಕಂಡು ರೋಸಿಹೋಗಿದ್ದ ಉದಯ್ ಕುಮಾರ್ ತನ್ನ ತಲೆಮಾರಿನವರೆಲ್ಲ ಇನ್ನೂ ನಾಯಕರಾಗಿ ಮೆರೆಯುತ್ತಾ ಚಿಕ್ಕ ಹುಡುಗಿಯರ ಜೊತೆ ಮರ ಸುತ್ತುತ್ತಿದ್ದ ಕಾಲದಲ್ಲೇ, ತನ್ನ 52 ವಯಸ್ಸಿನಲ್ಲಿ ಹೃದಯಾಘಾತಕ್ಕೀಡಾಗಿ ತೀರಿಕೊಂಡರು.

ಉದಯ್ ಕುಮಾರ್ ಅವರ ಬದುಕು ದುರಂತಗಾಥೆಯಾದರೆ ಅವರ ಪುತ್ರ ವಿಕ್ರಂನ ಜೀವನ ಇನ್ನೊಂದು ರೀತಿಯದ್ದು.

ಚೆನ್ನೈನ ಸೇಂಟ್ ಇಸಾಬಲ್ ಅನ್ನೋ ದುಬಾರಿ ಆಸ್ಪತ್ರೆಯಲ್ಲೇ ಉದಯ್ ಕುಮಾರ್‌ರ ಮೊದಲ ಪತ್ನಿಯ ಮಕ್ಕಳು ಹುಟ್ಟಿದ್ದು. ಆಗಿನ ದೊಡ್ಡ ಸ್ಟಾರ್‌ಗಳ ಮಕ್ಕಳುಗಳೆಲ್ಲಾ ಇದೇ ಆಸ್ಪತ್ರೆಯಲ್ಲೇ ಹುಟ್ಟಿದವರೇ. ಇದೇ ಆಸ್ಪತ್ರೆಯಲ್ಲಿ ಜನಿಸಿದ ಎನ್‌ಟಿಆರ್ ಮಗ ಬಾಲಕೃಷ್ಣನಿಗೂ, ವಿಕ್ರಂಗೂ ಒಂದು ವಾರದ ಅಂತರವಷ್ಟೇ.

ಹೀಗೆ ಬಾಯಲ್ಲಿ ಬೆಳ್ಳಿ ಚಮಚದೊಂದಿಗೆ ಹುಟ್ಟಿದ ವಿಕ್ರಂ ಆನಂತರ ಬೆಳೆದದ್ದು ಮಾತ್ರ ಆನೇಕಲ್‌ನ ಕರ್ಮಠ ಬ್ರಾಹ್ಮಣರ ಕರೀ ಹೆಂಚಿನ ಕಮಟು ಮನೆಯಲ್ಲಿ, ತನ್ನ ತಾತನೊಂದಿಗೆ.

ಉದಯ್‌ಕುಮಾರ್ ಹೆಸರು ಆಗಿನ್ನೂ ಚಾಲ್ತಿಯಲ್ಲಿತ್ತು. ಆಗ ಜಯನಗರ ನ್ಯಾಷನಲ್ ಕಾಲೇಜಿನಲ್ಲಿ ಬಿಎಸ್ಸಿ ಫೈನಲ್ ಇಯರ್ ಓದುತ್ತಿದ್ದ ವಿಕ್ರಂಗೂ ಸಿನಿಮಾ ಗೀಳು ಹತ್ತತೊಡಗಿತ್ತು. ಆಗ ತಾನೇ 'ನಾಗರಹಾವು' ಚಿತ್ರ ತೆರೆಕಂಡಿತ್ತು. ಆ ಚಿತ್ರವನ್ನು ನೋಡಿ ಅದರ ನಾಯಕ ರಾಮಾಚಾರಿಯನ್ನೇ ಆವಾಹಿಸಿಕೊಂಡು ತಾನೂ ನಾಯಕನಟನಾಗಲೇಬೇಕು ಎಂದು ತೀರ್ಮಾನಿಸಿದ ವಿಕ್ರಂ ಪುಟ್ಟಣ್ಣ ಕಣಗಾಲ್ ಅವರ ಬೆನ್ನಹಿಂದೆ ಬಿದ್ದರು.



"ಮಾಮಾ, ಮಾಮಾ, ನನಗೊಂದು ಛಾನ್ಸುಕೊಡು" ಎಂದು ಸದಾ ದುಂಬಾಲು ಬೀಳುತ್ತಿದ್ದ ವಿಕ್ರಂರನ್ನು 1976ರಲ್ಲಿ 'ಕಾಲೇಜು ರಂಗ' ಚಿತ್ರಕ್ಕೆ ನಾಯಕನನ್ನಾಗಿ ಆಯ್ಕೆ ಮಾಡಿಕೊಂಡರು ಕಣಗಾಲ್ ಪುಟ್ಟಣ್ಣ. ಚಿತ್ರೀಕರಣಕ್ಕಾಗಿ ಮೈಸೂರಿಗೂ ತೆರಳಿದ್ದರು ವಿಕ್ರಂ. ಅದೇ ಚಿತ್ರದಲ್ಲಿ ವಿಕ್ರಂ ಜೊತೆ ನಟಿಸಬೇಕಿದ್ದ ಅವರ ತಂದೆ ಕಲ್ಯಾಣ್‌ಕುಮಾರ್ ಬರುವುದು ಮೂರು ದಿನ ತಡವಾಯಿತು. ಇನ್ನೇನು ಚಿತ್ರೀಕರಣ ಆರಂಭವಾಗಿ 'ನಾನು ಹೀರೋ ಆಗ್ಬಿಟ್ಟೆ' ಅಂತ ಸಂಭ್ರಮಿಸುವ ಹೊತ್ತಿಗೆ ವಿಕ್ರಂಗೆ ಎದುರಾಗಿದ್ದು 'ಕೂಡಲೇ ಬಾ' ಎಂಬ ಅಪ್ಪನ ಟೆಲಿಗ್ರಾಂ.

ಪುಟ್ಟಣ್ಣ ಹಾಗೂ ಉದಯ್‌ಕುಮಾರ್ ಮಧ್ಯೆ ಮೊದಲಿನಿಂದಲೂ ಒಂದು ರೀತಿಯ 'ನಾನಾ-ನೀನಾ' ಅನ್ನೋ ಇಗೋಯಿಸಂ ಬೆಳೆದುನಿಂತಿತ್ತು. "ನನ್ನ ಮಗನನ್ನೇ ಹೀರೋ ಮಾಡಿರುವ ಪುಟ್ಟಣ್ಣ ನನ್ನನ್ನು ಒಂದು ಮಾತು ಕೇಳಲಿಲ್ಲವಲ್ಲಾ?" ಎಂಬ ಪ್ರಶ್ನೆ ಉದಯ್ ಕುಮಾರ್ ಅವರನ್ನು ಕಾಡಿತ್ತೋ? ಅಥವಾ ತನ್ನಂತೆ ತನ್ನ ಮಗನೂ ಆಗಬಾರದು ಎಂಬ ಕಾಳಜಿಯಿತ್ತೋ? ಗೊತ್ತಿಲ್ಲ. ಒಟ್ಟಿನಲ್ಲಿ ಮಗ ಹೀರೋ ಆಗೋದನ್ನು ತಡೆದ ಉದಯ್ ಕುಮಾರ್, ಮಗನನ್ನು ಕರೆದು "ಪರೀಕ್ಷೆ ಹತ್ರ ಬರ್ತಿದೆ ಇದೆಲ್ಲಾ ಬೇಡ" ಎಂದು ವಿಕ್ರಂ ನಟನಾಗುವ ಬಯಕೆಗೆ ಇತಿಶ್ರೀ ಹಾಡಿಬಿಟ್ಟರು.

ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಅನ್ನುವಂತಾಯಿತು ವಿಕ್ರಂ ಪರಿಸ್ಥಿತಿ. ಅಪ್ಪನ ಹಠದಿಂದಾಗಿ ನೊಂದುಕೊಂಡ ವಿಕ್ರಂ ತನ್ನ ತಂದೆಯ ವಿರುದ್ಧ ಸೇಡು ತೀರಿಸಿಕೊಂಡಿದ್ದು ಹೇಗೆ ಗೊತ್ತೇ? ಪರೀಕ್ಷೆಗೆ ಹೋಗದೆ ತನ್ನ ವಿದ್ಯಾಭ್ಯಾಸವನ್ನೇ ಮೊಟಕುಗೊಳಿಸುವ ಮೂಲಕ!

ಕಡೆಗೆ ನಾಯಕನಾಗುವ ಬಯಕೆಯನ್ನು ಬದಿಗಿಟ್ಟು ವಿಕ್ರಂ ಕಂಪೆನಿಯೊಂದರಲ್ಲಿ ಕೆಲಸಕ್ಕೆ ಸೇರಿ ಒಂದು ಮಟ್ಟದ ಸಂಪಾದನೆಯನ್ನೂ ಆರಂಭಿಸಿದ್ದರು. ಉದಯ್ ಕುಮಾರ್ ಬದುಕಿದ್ದಷ್ಟೂ ದಿನ ವಿಕ್ರಂ ಯಾವತ್ತೂ ತಮ್ಮ ಮುಖಕ್ಕೆ ಬಣ್ಣ ಹಚ್ಚಲೇ ಇಲ್ಲ; ಅಂಥ ಪ್ರಯತ್ನವನ್ನೂ ಅವರು ಮಾಡಲಿಲ್ಲ.

ಉದಯ್ ಕುಮಾರ್ ಕಣ್ಮುಚ್ಚಿದ ನಂತರ ಅವರ ಜಿಗರಿ ದೋಸ್ತ್ ಆಗಿದ್ದ ವಜ್ರಮುನಿಯವರು 1985ರ ಡಿಸೆಂಬರ್ 26ರಂದು ವಿಕ್ರಂ ಅವರನ್ನು ಕರೆದು ಅಂಬರೀಷ್ ಅಭಿನಯದ 'ಬ್ರಹ್ಮಾಸ್ತ್ರ' ಚಿತ್ರದಲ್ಲಿ ಒಳ್ಳೆಯ ಪಾರ್ಟು ನೀಡಿ ನಟನೆಯ ದಾರಿ ತೋರಿಸಿದರು. ಅದಾದನಂತರ ತಾನು ನಟಿಸಿದ ಐದಾರು ಚಿತ್ರಗಳಲ್ಲಿ ವಿಕ್ರಂಗಾಗಿಯೇ ಪಾತ್ರಗಳನ್ನು ಸೃಷ್ಟಿಸಿ ಅವಕಾಶ ಕೊಟ್ಟವರು ರೆಬಲ್ ಸ್ಟಾರ್ ಅಂಬರೀಷ್. ಜೊತೆಗೆ ವಿಷ್ಣುವರ್ಧನ್, ಟೈಗರ್ ಪ್ರಭಾಕರ್, ಶಿವರಾಜ್ ಕುಮಾರ್‌ರ ಚಿತ್ರಗಳಲ್ಲಿ ವಿಕ್ರಂಗಾಗಿಯೇ ಒಂದು ಪಾತ್ರ ಇದ್ದೇ ಇರುತ್ತಿತ್ತು. ಹೀಗೆ 1986ರಲ್ಲಿ ಆರಂಭವಾದ ವಿಕ್ರಂರ ನಟನಾ ವೃತ್ತಿ 1993ರಲ್ಲಿ 'ಓಂ' ತನಕ ಮುಂದುವರೆಯಿತು. ಸಿನಿಮಾಗಳ ಜೊತೆ ಹಲವಾರು ಧಾರಾವಾಹಿಗಳಲ್ಲೂ ಇವರು ನಟಿಸಿದರು. ಆದರೆ ಇದರಿಂದ ಬರುತ್ತಿದ್ದ ಆದಾಯದಿಂದ ಮನೆಮಂದಿಯನ್ನು ನೆಮ್ಮದಿಯಾಗಿಡಲು ಸಾಧ್ಯವಾಗಲಿಲ್ಲ. "ಹೀಗೇ ಇದ್ದರೆ ಬದುಕಲು ಸಾಧ್ಯವಿಲ್ಲ" ಎಂದು ಅರಿತ ವಿಕ್ರಂ ಸಿನಿಮಾ ಸಹವಾಸವನ್ನು ಬಿಟ್ಟು ಎಲ್‌ಐಸಿ ಏಜನ್ಸಿಯ ಜೊತೆಗೆ ದೊಡ್ಡ ಸ್ಟೇಷನರಿ ಕಂಪೆನಿಯೊಂದರಲ್ಲಿ ಉದ್ಯೋಗ ಪಡೆದರು. ಈಗ ಮತ್ತೆ 'ನವಗ್ರಹ' ಚಿತ್ರದ ಮೂಲಕ ಬಣ್ಣ ಹಚ್ಚಿರುವ ವಿಕ್ರಂ ವಿನೋದ್ ರಾಜ್‌ರ 'ಯಾರದು?' ಚಿತ್ರದಲ್ಲೂ ನಟಿಸಿದ್ದಾರೆ. ಇನ್ನು ಹಲವಾರು ದೈನಂದಿನ ಧಾರಾವಾಹಿಗಳಲ್ಲೂ ಇವರ ಪಾತ್ರ ಮುಖ್ಯವಾಗಿದೆ.

ಜೊತೆಗೆ ತನ್ನ ತಂದೆ ಉದಯ್ ಕುಮಾರ್ ಹೆಸರಿನಲ್ಲಿ 'ಪವನಸುತ ಕೇಸರಿ ಕಲಾಶಾಲಾ' (ಬರಹಗಾರರೂ ಆಗಿದ್ದ ಉದಯ್ ಕುಮಾರ್ 'ಪವನಸುತ' ಎಂಬ ಕಾವ್ಯನಾಮವಿರಿಸಿಕೊಂಡಿದ್ದರು) ಎಂಬ ಟ್ರಸ್ಟ್ ನಡೆಸುತ್ತಿರುವ ವಿಕ್ರಂ ತನ್ನ ಪತ್ನಿ ಮಹಾಲಕ್ಷ್ಮಿಯವರೊಂದಿಗೆ ಆನೇಕಲ್‌ನಲ್ಲಿ ತಮ್ಮ ಸ್ವಂತ ಜಾಗದಲ್ಲಿ 'ಪಿಎಂಎಸ್ ಕಿಡ್ಸ್ ಸ್ಕೂಲ್' ಎಂಬ ಪುಟ್ಟ ಶಾಲೆಯೊಂದನ್ನು ನಡೆಸಿಕೊಂಡು ನೆಮ್ಮದಿಯಿಂದ ಬದುಕುತ್ತಿದ್ದಾರೆ.

ಅಪ್ಪನ ಹೆಸರು ವಿಸಿಟಿಂಗ್ ಕಾರ್ಡ್ ಆಗಬೇಕೇ ಹೊರತು ಸರ್ಟಿಫಿಕೇಟ್ ಆಗಬಾರದು ಎನ್ನುವ ವಿಕ್ರಂಗೆ ತಂದೆಯಿಂದ ದೊರೆತಿರುವ ದೊಡ್ಡ ಆಸ್ತಿ 'ಸ್ವಾಭಿಮಾನ'.

ಇದು ಅಭಿನಯ ಚಕ್ರವರ್ತಿ ಉದಯ್‌ಕುಮಾರ್ ಎಂಬ ಧೀಮಂತ ನಟನ ಬದುಕಿನ ಒಂದು ಮಜಲು ಮಾತ್ರ. ಇನ್ನು ಅವರ ಮತ್ತೊಬ್ಬ ಮಡದಿ ಸುಶೀಲಮ್ಮ (ವಿಶ್ವವಿಜೇತನ ತಾಯಿ) ಮತ್ತು ಮಗಳು ರೇಣುಕಾದೇವಿ ಇವತ್ತಿಗೂ ಸಂಕಷ್ಟದಲ್ಲೇ ಬದುಕುತ್ತಿದ್ದಾರೆ. ಅದನ್ನ ಹೇಳುತ್ತಾ ಹೋದರೆ ಅದೂ ಒಂದು ಅಧ್ಯಾಯವಾಗುತ್ತದೆ.

■ ಆರುಣ್‌ಕುಮಾರ್ ಜೆ.

R B P LANKESH, Kannada Weekly Price Rs. 12/- 04-03-2009 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.

ರಜನಿ ಬ್ಯಾನರ್‌ನಲ್ಲಿ ಕನ್ನಡ ಚಿತ್ರಗಳು!

"ರಜನೀಕಾಂತ್ ಕನ್ನಡದವರಾಗಿ ಹುಟ್ಟಿ, ಇದೇ ಕನ್ನಡ ಚಿತ್ರರಂಗದಿಂದ ಉದಯಿಸಿದ್ದರೂ ಕನ್ನಡ ಚಿತ್ರರಂಗಕ್ಕೆ ಏನೂ ಮಾಡಿಲ್ಲ. ಮಾಡಿದರೂ ಅವರಿಗೆ ಬೇಕಾದವರಿಗೆ ಮಾತ್ರ ಸಹಾಯಹಸ್ತ ನೀಡಿದ್ದಾರೆ" ಎಂಬಂತಹ ಮಾತುಗಳನ್ನು ಹಲವರು ಕೆಲ ವರ್ಷಗಳಿಂದ ಆಡುತ್ತಿದ್ದರು. ಚಿತ್ರರಂಗದವರ ಮತ್ತು ಅಭಿಮಾನಿಗಳ ಇಂಥ ಮಾತುಗಳಿಗೆ ಫುಲ್‌ಸ್ಟಾಪ್ ಹಾಕಲೆಂಬಂತೆ ರಜನಿ ಕನ್ನಡಕ್ಕೂ ಕೊಡುಗೆ ನೀಡಲು ಮುಂದಾಗಿದ್ದಾರೆ.

'ಲಂಕೇಶ್'ಗೆ ಚೆನ್ನೈ ಮೂಲದಿಂದ ತಿಳಿದುಬಂದಂತೆ ಈ ವರ್ಷದಿಂದ ರಜನೀಕಾಂತ್ ಕನ್ನಡದಲ್ಲಿ ಚಿತ್ರ ನಿರ್ಮಾಣವನ್ನು ಆರಂಭಿಸಲಿದ್ದಾರೆ. ಮಾತ್ರವಲ್ಲ ಕನ್ನಡ ಚಿತ್ರಗಳ ವಿತರಣೆಯನ್ನೂ ಮಾಡಲಿದ್ದಾರೆ. ವಾಸ್ತವವಾಗಿ ಎಲ್ಲಾ ಅಂದುಕೊಂಡಂತೇ ಆಗಿದ್ದರೆ, 'ಸರ್ಕಸ್' ಚಿತ್ರದಿಂದಲೇ ಅವರು ವಿತರಣೆಯನ್ನು ಆರಂಭಿಸಬೇಕಿತ್ತು, ಆದರೆ ದಯಾಳನ ಪ್ರತಿಭೆಯನ್ನು ನೋಡಿದ ರಜನೀಕಾಂತ್ ಫ್ಯಾಮಿಲಿ ಬೆಚ್ಚಿಬಿದ್ದು ಆರಂಭದಲ್ಲೇ ತಮ್ಮ ದಂತಭಗ್ನವಾಗುವುದು ಬೇಡ ಎಂದು ಸುಮ್ಮನಾಗಿದ್ದರು.

ಈಗ ಯುವ ನಿರ್ದೇಶಕ ಶ್ರೀಧರ್ ನಿರ್ದೇಶನದ 'ಕಾರಂಜಿ' ಚಿತ್ರದ ಮೂಲಕ ಚಿತ್ರ ವಿತರಣೆ ಕಾರ್ಯವನ್ನು ಆರಂಭಿಸುವ ಯೋಜನೆಯಲ್ಲಿದ್ದಾರೆ ಸೂಪರ್‌ಸ್ಟಾರ್. ರಜನೀಕಾಂತರ ಈ ಕನ್ನಡ ಸೇವೆಗೆ ಅವರ ಮಗಳು ಸೌಂದರ್ಯಾಳೇ ಸಾರಥಿಯಾಗಿದ್ದಾಳೆ. ಈಗಾಗಲೇ ಆಕರ್ ಸ್ಟುಡಿಯೋಸ್ ಎಂಬ ಅನಿಮೇಷನ್ ಗ್ರಾಫಿಕ್ಸ್ ಕಂಪೆನಿಯನ್ನು ನಡೆಸುತ್ತಿರುವ ಈಕೆ ಇದೇ ಬ್ಯಾನರಿನ ಹೆಸರಿನಲ್ಲೇ ಕನ್ನಡದಲ್ಲೂ ನಿರ್ಮಾಣ, ವಿತರಣೆಗಳನ್ನು ಮಾಡಲು ನಿರ್ಧರಿಸಿದ್ದಾರೆ.

ಒಂದೇ ಬಾರಿಗೆ ಐದು ಚಿತ್ರಗಳು!

ರಜನೀಕಾಂತ್ ಕನ್ನಡ ಚಿತ್ರ ನಿರ್ಮಾಣದ ಮಾತನ್ನು ಬರೀ ಬಾಯಿಮಾತಲ್ಲಿ ಆಡುತ್ತಿಲ್ಲ, ಈಗಾಗಲೇ ಇದರ ಪೂರ್ವ ಸಿದ್ಧತೆಯೂ ನಡೆದಿದೆ. ಶಿವರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್, ದರ್ಶನ್, ಸುದೀಪ್ ಹಾಗೂ ಗಣೇಶನ ಚಿತ್ರಗಳು ಸೇರಿದಂತೆ ಏಕಕಾಲಕ್ಕೆ ಐದು ಚಿತ್ರಗಳನ್ನು ನಿರ್ಮಿಸಲು ತೀರ್ಮಾನವಾಗಿದ್ದು, ಕಥೆಗಳ ಆಯ್ಕೆ, ಚರ್ಚೆಗಳ ಪ್ರಕ್ರಿಯೆಯೂ ಪ್ರಗತಿಯಲ್ಲಿದೆ. ಪುನೀತ್, ದರ್ಶನ್, ಗಣೇಶ್, ಸುದೀಪ್ ನಾಯಕರೇನೋ ಕನ್ನಡ ಚಿತ್ರರಂಗದಲ್ಲಿ ಹೆಚ್ಚೂಕಮ್ಮಿ ಓಡುವ ಕುದುರೆಗಳು ಎಂಬುದಂತೂ ನಿಜ. ಆದರೆ ಈ ಚಿತ್ರಗಳ ನಿರ್ದೇಶನದ ಜವಾಬ್ದಾರಿ ಯಾರ್‍ಯಾರ ಹೆಗಲಿಗೆ ಎಂಬ ಕುತೂಹಲ ಎಲ್ಲರಲ್ಲಿದೆ.



ನಿರ್ದೇಶಕ ಪ್ರೇಮ್ ನಿರ್ದೇಶಿಸಿರುವ 'ರಾಜ್' ಚಿತ್ರದ ಸೋಲುಗೆಲುವಿನ ಮೇಲೆ ರಜನಿ ಬ್ಯಾನರಿನ ಆಹ್ವಾನ ನಿಂತಿದೆ. ಇನ್ನು 'ಕಾರಂಜಿ' ಚಿತ್ರದ ಗ್ರಾಫಿಕ್ ವರ್ಕ್ ಮಾಡುವಾಗ ಅದರ ನಿರ್ದೇಶಕ ಶ್ರೀಧರ್‌ರ ಕ್ರಿಯೇಟಿವಿಟಿಗೆ ಮಾರುಹೋದ ರಜನಿ ಪುತ್ರಿ ಐಶ್ವರ್ಯಾ ಶ್ರೀಧರ್‌ಗೂ ಅವಕಾಶ ನೀಡಿದ್ದಾರೆ. ಈ ಚಿತ್ರದ ಕಥೆಯ ವಿಷಯದಲ್ಲಿ ಗಣೇಶನೊಂದಿಗೆ ಮಾತುಕತೆ ನಡೆಯುತ್ತಿದೆ. ಇನ್ನುಳಿದಂತೆ ಸೂರಿ, ಯೋಗರಾಜ ಭಟ್, ರವಿಚಂದ್ರನ್‌ರ ಹೆಸರುಗಳು ಕೇಳಿಬರುತ್ತಿವೆಯಾದರೂ ಅವಕಾಶ ಯಾರ ಜೋಳಿಗೆಗೆ ಬೀಳುತ್ತೋ ಗೊತ್ತಿಲ್ಲ.

ಒಟ್ಟಾರೆ ರಜನೀ ಫ್ಯಾಮಿಲಿ ಕನ್ನಡ ಚಿತ್ರರಂಗಕ್ಕೇನಾದರೂ ಕೊಡುಗೆ ನೀಡಬೇಕು ಎಂದು ತೀರ್ಮಾನಿಸಿದೆ. ಅದು ಉತ್ತಮ ರೀತಿಯಲ್ಲಿ ನಡೆದರೆ ಕಷ್ಟದಲ್ಲಿ ಬದುಕುತ್ತಿರುವ ನಮ್ಮ ಹಿರಿಯ ಕಲಾವಿದರಿಗೆ, ಅಪರೂಪದ ಪ್ರತಿಭೆಗಳಿಗೆ ಒಂದಷ್ಟು ಅವಕಾಶ ಸಿಕ್ಕೇಸಿಗುತ್ತದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ, ಹಿರಿಯ ನಟಿ ಪಂಡರೀಬಾಯಿಯವರಿಗೆ ಸಹಾಯ ಮಾಡಿದ, ತನ್ನ ಗುರು ಬಾಲಚಂದರ್‌ರ ಆರ್ಥಿಕ ಸಂಕಷ್ಟದ ಹೊರೆಯನ್ನು ನಿಭಾಯಿಸಿದ ರಜನಿಗೆ ಇದು ಯಾವ ಲೆಕ್ಕ?



ಜೊತೆ ರಾಕ್ ಜೊತೆ ರೋಲ್!


ರಾಕ್ ಅಂಡ್ ರೋಲ್ ಎಂಬ ಕಾರ್ಯಕ್ರಮ ಕನ್ನಡದ ಜನಪ್ರಿಯ ವಾಹಿನಿ ಝೀ ಚಾನೆಲ್‌ನಲ್ಲಿ ಆರಂಭವಾಗಿದೆ. ಈ ಕಾರ್ಯಕ್ರಮವನ್ನು ವಿನೋದ್‌ರಾಜ್ ಮತ್ತು ಖ್ಯಾತ ಸಂಗೀತ ನಿರ್ದೇಶಕ ರಘುದೀಕ್ಷಿತ್ ನಡೆಸಿಕೊಡುತ್ತಿದ್ದಾರೆ. ಇದರ ಹೆಸರೇ ಸೂಚಿಸುವಂತೆ ಇದು ರಾಕ್ ನೃತ್ಯಕ್ಕೆ ಸಂಬಂಧಪಟ್ಟದ್ದಾಗಿದೆ.

ಬೇಸರದ ವಿಷಯವೆಂದರೆ ಈ ತರಹದ ಕಾರ್ಯಕ್ರಮವನ್ನು ನಾವೇ ಮೊದಲು ಆರಂಭಿಸುತ್ತಿರುವುದು ಎಂದು ಝೀ ಯವರು ಪೀಪಿ ಊದುತ್ತಿರುವುದು. ಈ ಕಾರ್ಯಕ್ರಮ ಈಗಾಗಲೇ ಹಿಂದಿ ಮತ್ತು ಇತರ ಪ್ರಾದೇಶಿಕ ಭಾಷೆಗಳ ಅನೇಕ ಚಾನೆಲ್‌ಗಳಲ್ಲಿ ಬರುತ್ತಲೇ ಇದ್ದರೂ ನಾವೇ ಮೊದಲಿಗರು ಎಂದೇಕೆ ಇವರು ಹೇಳಿಕೊಳ್ಳುತ್ತಿದ್ದಾರೆ?

ದಿಗಂತನ ಧಿಮಾಕಿಗೆ ಬಿತ್ತು ಪೆಟ್ಟು!

ಇತ್ತ ಇಡೀ ಕನ್ನಡ ಚಿತ್ರೋದ್ಯಮವೇ ಅಮೃತಮಹೋತ್ಸವದ ಸಂಭ್ರಮದಲ್ಲಿ ಪಾಲ್ಗೊಳ್ಳುತ್ತಿದ್ದರೆ, ಅತ್ತ ದೂರದ ಅಮೆರಿಕದಲ್ಲಿ ಉದಯೋನ್ಮುಖ ನಟ ದಿಗಂತ್ ಕನ್ನಡ ಸಿನಿಮಾವೊಂದರ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದಾರೆ. ಪ್ರಿಯಭಾರತಿ ಎಂಬ ಅನಿವಾಸಿ ನಿರ್ದೇಶಕಿ ನಿರ್ದೇಶಿಸುತ್ತಿರುವ 'ಈ ಪ್ರೀತಿಗಾಗಿ' ಚಿತ್ರಕ್ಕಾಗಿ ವಾಷಿಂಗ್‌ಟನ್ ಡಿಸಿಯಲ್ಲಿ ದಿಗಂತ್ ನಟಿಸುತ್ತಿದ್ದಾರೆ.

ಇದರ ನಿರ್ಮಾಪಕ ನಾರಾಯಣ ಹೊಸಮನಿ ಮತ್ತು ದಿಗಂತ್ ನಡುವೆ ಈ-ಮೇಲ್, ಪತ್ರಿಕಾ ಹೇಳಿಕೆ ಮತ್ತು ಎಸ್ಸೆಮ್ಮೆಸ್ ಮುಖಾಂತರ ಹಲವಾರು ಸುತ್ತಿನ ಗಲಾಟೆ ನಡೆಯುತ್ತಲೇ ಇತ್ತು, ಕೊನೆಗೂ ಈ ಚಿತ್ರದ ತಲೆನೋವು ಬೇಡ ಎಂದು ಅದರಲ್ಲಿ ನಟಿಸಲು ಹೋಗಿರುವ ದಿಗಂತ್ ಈಗ ಇನ್ನೊಂದು ಸಮಸ್ಯೆಯನ್ನು ತಾವೇ ಆಹ್ವಾನಿಸಿಕೊಂಡಿದ್ದಾರೆ.



ಚೇಂಬರ್‌ನ ಆದೇಶವನ್ನು ಧಿಕ್ಕರಿಸಿ ಶೂಟಿಂಗ್‌ನಲ್ಲಿ ಭಾಗವಹಿಸಿದ ದಿಗಂತ್ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವುದು ಗ್ಯಾರಂಟಿ. ಒಂದು ವೇಳೆ ಆತ ಚೇಂಬರ್ ಪದಾಧಿಕಾರಿಗಳ ಅನುಮತಿ ಪಡೆದಿದ್ದರೆ, ಆ ಅನುಮತಿಯನ್ನು ನೀಡಿದ್ದ ಪದಾಧಿಕಾರಿಯನ್ನು ಬೇರೆ ಕಲಾವಿದರು ಬೆಂಡೆತ್ತಲಿದ್ದಾರೆ! ಇದೆಲ್ಲದಕ್ಕೆ ಉತ್ತರ ಸಿಗುವುದು ದಿಗಂತ್ ಮರಳಿದ ನಂತರವಷ್ಟೇ.



ಯಜ್ಞಾ ಪ್ರಿಯಾಂಕ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44